VOLUME: 16 | 25 MARCH 2026 | ಬುಧವಾರ | RS: 2 | PAGE: 06 ISSUE: 57 ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ನಿರೂಪಕಿ ಅನುಪಮಾ ಗೌಡ ಅವರು ಬಹುಕಾಲದ ಗೆಳೆಯ ರಾಘವ್ ಅನು ಅವರೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ ಎಂಬ ಸುದ್ದಿ ಸೋಶಿಯಲ್ ಮೀಡಿಯಾದಲ್ಲ ಭಾರೀ ವೈರಲ್ ಆಗಿದೆ. ಈ ಕುರಿತು ಹರಿದಾಡುತ್ತಿದ್ದ ಎಲ್ಲಾ ಗಾಸಿಪ್‌ಗಳಿಗೆ ಸ್ವತಃ ಅನುಪಮಾ ಅವರೇ ಈಗ ತೆರೆ ಎಳೆದಿದ್ದಾರೆ.



BHARATHA SARATHI
KANNADA DAILY NEWS PAPER

CALL 9740160669

# ಭಾರತ ಸಾರಥಿ

RNI KARKAN2011/44806

ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ




ಸಂಪಾದಕ
ಗಂಡಸಿ ಸದಾನಂದಸ್ವಾಮಿ



# ಬೃಹತ್ ಮೊತ್ತಕ್ಕೆ ಆರ್‌ಸಿಬಿ ಸೇಲ್..!

ನವದೆಹಲಿ: ಐಪಿಎಲ್ ಹಾಲಿ ಚಾಂಪಿಯನ್ ಆರ್ ಸಿಬಿ ಕೊನೆಗೂ ಮಾರಾಟವಾಗಿದೆ. ಕುಮಾರ್ ಮಂಗಲಂ ಬಿರ್ಲಾ ಅವರ ಆದಿತ್ಯ ಬಿರ್ಲಾ ಗ್ರೂಪ್ ನೇತೃತ್ವದ ಕನ್ಸೋರ್ಟಿಯಂ (ಒಕ್ಕೂಟ) ಮಂಗಳವಾರ ಅದರ ಹೊಸ ಮಾಲೀಕರಾಗಿದ್ದಾರೆ.



ಭಾರತೀಯ ಉದ್ಯಮಿ ಕುಮಾರ್ ಮಂಗಳಂ ಬಿರ್ಲಾ ಅವರ ಆದಿತ್ಯ ಬಿರ್ಲಾ ಗ್ರೂಪ್, ಟೈಮ್ಸ್ ಆಫ್ ಇಂಡಿಯಾ ಗ್ರೂಪ್, ಡೇವಿಡ್ ಬ್ಲಿಟ್ಜರ್‌ನ ಬೋಲ್ಟ್ ವೆಂಚರ್ಸ್ ಮತ್ತು ಯುಎಸ್ ಮೂಲದ ಬ್ಲಾಕ್‌ಸ್ಟೋನ್ ಒಳಗೊಂಡಿರುವ ಕನ್ಸೋರ್ಟಿಯಂ ಸುಮಾರು 1.78 ಶತಕೋಟಿ ಡಾಲರ್ (16,000 ಕೋಟಿಗಿಂತ ಹೆಚ್ಚು) ಪಾವತಿಸಲಿದೆ ಎಂದು ತಿಳಿದುಬಂದಿದೆ.

ಆರ್ ಸಿಬಿಯ ಶೇ. 100 ರಷ್ಟು ಮಾಲೀಕತ್ವದ ಪಾಲು ಪಡೆಯಲು ಈ ಕಂಪನಿಗಳು ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ನೊಂದಿಗೆ ಒಪ್ಪಂದ ಮಾಡಿಕೊಂಡಿವೆ ಎಂದು ತಿಳಿದುಬಂದಿದೆ. ಆದಿತ್ಯ ಬಿರ್ಲಾ ಗ್ರೂಪ್‌ನ ನಿರ್ದೇಶಕ ಆರ್ಯಮಾನ್ ವಿಕ್ರಮ್ ಬಿರ್ಲಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದು, ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ನ ಸತ್ಯನ್ ಗಜ್ವಾನಿ ಫ್ರಾಂಚೈಸಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಕಳೆದ ಎರಡು ದಶಕಗಳಲ್ಲಿ ಐಪಿಎಲ್ ಜಾಗತಿಕ ಕ್ರೀಡಾ ಪವರ್ ಹೌಸ್ ಆಗಿ ಬೆಳೆದಿದ್ದು, ಭಾರತೀಯ ಕ್ರಿಕೆಟ್‌ನ ಸ್ವರೂಪವನ್ನು ಬದಲಾಯಿಸಿದೆ. ಆಧುನಿಕ ಕ್ರೀಡೆಯಲ್ಲಿ ಅತ್ಯಂತ ಬಲವಾದ ಫ್ರಾಂಚೈಸಿಗಳಲ್ಲಿ ಒಂದಾಗಿರುವ ಆರ್‌ಸಿಬಿ, ಆದಿತ್ಯ ಬಿರ್ಲಾ ಗ್ರೂಪ್‌ಗೆ ತನ್ನ ಪರಂಪರೆ ವಿಸ್ತರಿಸಲು ಒಂದು ವಿಶಿಷ್ಟ ವೇದಿಕೆಯನ್ನು ನೀಡುತ್ತದೆ. ಈ ಆಸ್ತಿ ಮತ್ತು ಅಸಾಮಾನ್ಯ ಪರಂಪರೆಯನ್ನು ಮತ್ತಷ್ಟು ನಿರ್ಮಿಸಲು ಬದ್ಧವಾಗಿದೆ ಎಂದು ಆದಿತ್ಯ ಬಿರ್ಲಾ ಗ್ರೂಪ್‌ನ ಅಧ್ಯಕ್ಷ ಕುಮಾರ್ ಮಂಗಳಂ ಬಿರ್ಲಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಟೈಮ್ಸ್ ಇಂಟರ್‌ನೆಟ್ ಲಿಮಿಟೆಡ್‌ನ ಅಧ್ಯಕ್ಷ ಸತ್ಯನ್ ಗಜ್ವಾನಿ, "ಆರ್‌ಸಿಬಿ ಐಪಿಎಲ್‌ನಲ್ಲಿ ಹಾಲಿ ಚಾಂಪಿಯನ್ ಮತ್ತು ಅತ್ಯಂತ ಜನಪ್ರಿಯ ಬ್ರ್ಯಾಂಡ್ ಆಗಿದೆ. ಟೈಮ್ಸ್ ಆಫ್ ಇಂಡಿಯಾ ಗ್ರೂಪ್, ನಮ್ಮ ಪಾಲುದಾರರೊಂದಿಗೆ ನಾವು ಆರ್‌ಸಿಬಿಯನ್ನು ಜಾಗತಿಕ ಕ್ರೀಡಾ ಸಂಸ್ಥೆಯಾಗಿ ಕಟ್ಟುತ್ತೇವೆ. ಈ ಚಾಂಪಿಯನ್‌ಶಿಪ್ ತಂಡ ಕಟ್ಟಿದ ಆಟಗಾರರು, ತರಬೇತುದಾರರು ಹಾಗೂ ಅಭಿಮಾನಿಗಳಿಗೆ ನಾವು ಬದ್ದರಾಗಿದ್ದೇವೆ ಎಂದು ತಿಳಿಸಿದ್ದಾರೆ.

## ಯುದ್ಧ ನಿಲ್ಲಿಸಲು ಪಾಕ್ ಮಧ್ಯಸ್ಥಿಕೆ...?

ನವದೆಹಲಿ: ಮಧ್ಯ ಪ್ರಾಚ್ಯಜಲ್ಲಿ ನಡೆಯುತ್ತಿರುವ ಯುದ್ಧಸಮಾನ ಪರಿಸ್ಥಿತಿಯ ನಡುವೆ, ಅಮೆರಿಕಾ, ಇಸ್ರೇಲ್ ಮತ್ತು ಇರಾನ್ ನಡುವಿನ ಶಾಂತಿ ಸ್ಥಾಪನೆಗಾಗಿ ಪಾಕಿಸ್ತಾನ ಮಧ್ಯಸ್ಥಿತಿಗೆ ವಹಿಸುತ್ತಿದೆ ಎಂಬ ಅಂತರರಾಷ್ಟ್ರೀಯ ಮಾಧ್ಯಮ ವರದಿಗಳು ಇದೀಗ ರಾಜಕೀಯ ಚರ್ಚೆಗೆ ಕಾರಣವಾಗಿವೆ.

ಈ ಬೆಳವಣಿಗೆ ಸತ್ಯವಾಗಿರುವುದೇ ಆದರೆ, ಅದು ಭಾರತಕ್ಕೆ "ತೀವ್ರ ಹಿನ್ನಡೆ" ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಹೇಳಿಕೆ ನೀಡಿದ್ದಾರೆ. ಪ್ರಮುಖ ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಬಂದಿರುವ ವರದಿಗಳನ್ನು ಉಲ್ಲೇಖಿಸಿ ಮಾತನಾಡಿರುವ ಅವರು, ಪಾಕಿಸ್ತಾನ, ಅಮೆರಿಕಾ–ಇಸ್ರೇಲ್ ಹಾಗೂ ಇರಾನ್ ಪರವಾಗಿ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂಬ ಮಾಹಿತಿ ಕಳವಳಕಾರಿಯಾಗಿದ್ದು, ಇದರಿಂದ ಭಾರತದ ರಾಜತಾಂತ್ರಿಕ ಸ್ಥಿತಿಗೆ ಹಿನ್ನಡೆಯಾಗುತ್ತದೆ ಎಂದು ಹೇಳಿದ್ದಾರೆ.

ಇದೇ ವೇಳೆ ಕೇಂದ್ರ ಸರ್ಕಾರವನ್ನು ಟೀಕಿಸಿರುವ ಅವರು, ಭಾರತವು ಸೈನಿಕವಾಗಿ ಸಾಧನೆಗಳನ್ನು ಮಾಡಿದರೂ, ರಾಜತಾಂತ್ರಿಕ ಮಟ್ಟದಲ್ಲಿ ಪಾಕಿಸ್ತಾನ ಮೇಲುಗೈ ಸಾಧಿಸಿದೆ. ವಿಶೇಷವಾಗಿ 'ಆಪರೇಷನ್ ಸಿಂಧೂರ್' ನಂತರದ ಪರಿಸ್ಥಿತಿಯಲ್ಲಿ ಪಾಕಿಸ್ತಾನದ ಜಾಗತಿಕ ಸಂಪರ್ಕ ಮತ್ತು ಪ್ರಚಾರ ತಂತ್ರಗಳು ಭಾರತಕ್ಕಿಂತ ಪರಿಣಾಮಕಾರಿ ಆಗಿವೆ ಎಂದು ತಿಳಿಸಿದ್ದಾರೆ.

ಇದರ ಜೊತೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಇತ್ತೀಚಿನ ಇಸ್ರೇಲ್ ಭೇಟಿಯನ್ನು ಕೂಡ ಅವರು ತೀವ್ರವಾಗಿ ಟೀಕಿಸಿದ್ದಾರೆ. ಯುದ್ಧ ಪ್ರಾರಂಭವಾಗುವ ಮೊದಲು ನಡೆದ ಈ ಭೇಟಿ ರಾಜತಾಂತ್ರಿಕವಾಗಿ ತಪ್ಪಾದ ನಿರ್ಧಾರವಾಗಿದ್ದು, ಇದರಿಂದ ಭಾರತ ಮಧ್ಯಸ್ಥಿಕೆ ವಹಿಸುವ ಅವಕಾಶವನ್ನು ಕಳೆದುಕೊಂಡಿದೆ ಎಂದು ಹೇಳಿದ್ದಾರೆ. ಏತನ್ಮಧ್ಯೆ, ನಡೆಯುತ್ತಿರುವ ಸಂಘರ್ಷವನ್ನು ಕೊನೆಗೊಳಿಸಲು ಮಾತುಕತೆ ನಡೆಸಲು ಅಮೆರಿಕಾ ಇರಾನ್ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಹೇಳಿದ್ದಾರೆ, ಆದರೆ ಇರಾನ್ ಈ ಮಾತುಕತೆಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದ್ದು, ಇವು "ಸುಳ್ಳುಸುದ್ದಿ" ಎಂದು ಪ್ರತಿಕ್ರಿಯಿಸಿದೆ.

ಈ ನಡುವೆ ವೈಟ್ ಹೌಸ್ ಕೂಡ ಇಸ್ಲಾಮಾಬಾದ್‌ನಲ್ಲಿ ಗುಪ್ತ ಸಭೆಗಳು ನಡೆಯುತ್ತಿವೆ ಎಂಬ ವರದಿಗಳನ್ನು ದೃಢಪಡಿಸಿಲ್ಲ. ಪರಿಸ್ಥಿತಿ ಇನ್ನೂ ಸೂಕ್ಷ್ಮವಾಗಿದ್ದು, ಅಧಿಕೃತ ಘೋಷಣೆಗಳ ಹೊರತು ಇಂತಹ ವಿಷಯಗಳನ್ನು ದೃಢಪಡಿಸಲಾಗುವುದಿಲ್ಲ ಎಂದು ಅಮೆರಿಕಾ ಸ್ಪಷ್ಟಪಡಿಸಿದೆ. ಒಟ್ಟಾರೆ, ಮಧ್ಯ ಪ್ರಾಚ್ಯ ಯುದ್ಧ ಪರಿಸ್ಥಿತಿಯಲ್ಲಿ ಪಾಕಿಸ್ತಾನದ ಪಾತ್ರ ಹೆಚ್ಚುತ್ತಿರುವ ಸಾಧ್ಯತೆ ಹಾಗೂ ಭಾರತಕ್ಕೆ ಅದರ ಪರಿಣಾಮಗಳ ಬಗ್ಗೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆ ಆರಂಭವಾಗಿದೆ.

## ಬೇರೆ ಧರ್ಮಕ್ಕೆ ಮತಾಂತರಗೊಂಡರೆ ಎಸ್‌ಸಿ, ಎಸ್ಟಿ ಸ್ಥಾನಮಾನ ರದ್ದು: ಸುಪ್ರೀಂ

ನವದೆಹಲಿ: ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಗಳಿಗೆ ಸೇರಿದ ವ್ಯಕ್ತಿಗಳು ಮಾತ್ರ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಪಡೆಯಬಹುದು ಮತ್ತು ಕ್ರಿಶ್ಚಿಯನ್ ಧರ್ಮದಂತಹ ಯಾವುದೇ ಇತರ ಧರ್ಮಕ್ಕೆ ಮತಾಂತರಗೊಂಡರೆ ಆ ವ್ಯಕ್ತಿ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಕಳೆದುಕೊಳ್ಳುತ್ತಾನೆ ಎಂದು ಸುಪ್ರೀಂ ಕೋರ್ಟ್ ಇಂದು ಮಂಗಳವಾರ ತೀರ್ಪು ನೀಡಿದೆ. ಹೀಗಾಗಿ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ದಲಿತ ವ್ಯಕ್ತಿಯೊಬ್ಬರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ (ಎಸ್‌ಸಿ,ಎಸ್‌ಟಿ ಕಾಯ್ದೆ)ಯಡಿ ರಕ್ಷಣೆ ಕೇಳುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಪಿಕೆ ಮಿಶ್ರಾ ಮತ್ತು ಮನಮೋಹನ್ ಅವರ ಪೀಠವು ತೀರ್ಪು ನೀಡಿದೆ.



ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ನವೀಕೃತ ಪ್ರವೇಶ ದ್ವಾರವನ್ನು ಉದ್ಘಾಟಿಸಿ, ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸ್ಪೀಕರ್ ಯು.ಟಿ.ಖಾದರ್, ಗೃಹಸಚಿವ ಆರ್.ಅಶೋಕ್ ಸೇರಿದಂತೆ ವಿರೋಧ ಪಕ್ಷದ ನಾಯಕರು, ಶಾಸಕರು ಉಪಸ್ಥಿತರಿದ್ದರು.

# ಕಸ ಸಂಗ್ರಹಣೆ ಸ್ಥಗಿತ..!

ಬೆಂಗಳೂರು: ನಗರದಲ್ಲಿ ತ್ಯಾಜ್ಯ ಸಂಗ್ರಹಣೆಯಲ್ಲಿ ಅಡಚಣೆ ಉಂಟಾಗಿದ್ದು, ಕನಿಷ್ಠ 50 ವಾರ್ಡ್‌ಗಳಲ್ಲಿ ಕಸದ ಸಂಗ್ರಹಣೆ ಸೋಮವಾರ ಸ್ಥಗಿತಗೊಂಡಿತ್ತು. ವೇತನ ಬಾಕಿ ಹಾಗೂ ಕಸ ವಿಂಗಡಣೆ ಕುರಿತ ಹೊಸ ನಿಯಮದ ವಿರುದ್ಧ ಪ್ರತಿಭಟನೆಯಾಗಿ ಆಟೋ ಟಿಪ್ಪರ್ ಚಾಲಕರು ಮತ್ತು ಲೋಡರ್‌ಗಳು ಸಾಮೂಹಿಕ ರಜೆ ಹಾಕಿದ್ದರಿಂದ ಈ ಅವ್ಯವಸ್ಥೆ ಉಂಟಾಗಿದೆ.



ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಸಂಸ್ಥೆ ಮೂಲದಲ್ಲೇ ಕಸದ ವಿಂಗಡಣೆ ಕಡ್ಡಾಯವಾಗಬೇಕು ಎಂದು ಒತ್ತಾಯಿಸುತ್ತಿದ್ದು, ಗುತ್ತಿಗೆದಾರರು ಇದನ್ನು ವಿರೋಧಿಸಿದ್ದಾರೆ. ಕಸ ವಿಂಗಡಿಸುವ ಜವಾಬ್ದಾರಿ ಕಸ ಉತ್ಪಾದಕರದ್ದೇ ಹೊರತು ಕಸ ಸಂಗ್ರಹಿಸುವವರದ್ದಲ್ಲವೆಂಬುದು ಇವರ ವಾದ. ಜಿಬಿಎ ಸಿಇಒ ಕರೀಗೌಡ, ಸುಮಾರು 40–50 ವಾರ್ಡ್‌ಗಳಲ್ಲಿ ಮಾತ್ರ ಸಮಸ್ಯೆ ಉಂಟಾಗಿದ್ದು, ನಗರದ ಉಳಿದ ಭಾಗಗಳಲ್ಲಿ ಸಂಗ್ರಹಣೆ ಸಾಮಾನ್ಯವಾಗಿದೆ ಎಂದು ತಿಳಿಸಿದ್ದಾರೆ. ಅಲ್ಲದೆ ಕಳೆದ ನಾಲ್ಕು ತಿಂಗಳ ವೇತನ ಪಾವತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದೂ ಸಹ ಸ್ಪಷ್ಟಪಡಿಸಿದ್ದಾರೆ.

ಇನ್ನೊಂದೆಡೆ, ಕಸ ಸಂಗ್ರಹಿಸದ ಗುತ್ತಿಗೆದಾರರ ವಿರುದ್ಧ ಅಗತ್ಯ ಸೇವೆಗಳ ಕಾಯ್ದೆ (ESMA) ಅಡಿಯಲ್ಲಿ 35 ಎಫ್‌ಐಆರ್‌ಗಳು ದಾಖಲಾಗಿವೆ. ಗುತ್ತಿಗೆದಾರರ ಸಂಘವು ಹೊಸ ನಿಯಮಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ.

ಜಿಬಿಎ ಕಸ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎಸ್‌ಎನ್ ಬಾಲಸುಬ್ರಮಣಿಯನ್, ತ್ಯಾಜ್ಯವನ್ನು ಬೇರ್ಪಡಿಸುವ ಜವಾಬ್ದಾರಿ ತ್ಯಾಜ್ಯ ಉತ್ಪಾದಕರ ಮೇಲಿದೆ ಎಂದು ಹೇಳಿದ್ದಾರೆ.

ತ್ಯಾಜ್ಯವನ್ನು ಬೇರ್ಪಡಿಸುವುದನ್ನು ಖಚಿತಪಡಿಸಿಕೊಳ್ಳುವಂತೆ ಬಿಎಸ್‌ಡಬ್ಲ್ಯೂಎಂಎಲ್ ನಮ್ಮ ಆಟೋ ಚಾಲಕರು ಮತ್ತು ಲೋಡರ್‌ಗಳಿಗೆ ಹೇಳಲಾಗಿದೆ.

ನಾವು ತ್ಯಾಜ್ಯವನ್ನು ಹೇಗೆ ಬೇರ್ಪಡಿಸಬಹುದು? ಇದು ಮ್ಯಾನುಯಲ್ ಸ್ಕ್ಯಾವೆಂಜರ್ಸ್ ಕಾಯ್ದೆಯ ಉಲ್ಲಂಘನೆಗೆ ಸಮನಾಗುವುದಿಲ್ಲವೇ? ಎಂದಿದ್ದಾರೆ. ಟೆಂಡರ್ ಷರತ್ತುಗಳ ಪ್ರಕಾರ ಗುತ್ತಿಗೆದಾರರು ಬೇರ್ಪಡಿಸಿದ ತ್ಯಾಜ್ಯವನ್ನು ಮಾತ್ರ ಸಂಗ್ರಹಿಸಬೇಕು ಎಂದು ಬಿಎಸ್‌ಡಬ್ಲ್ಯೂಎಂಎಲ್ ಅಧಿಕಾರಿಗಳು ತಿಳಿಸಿದ್ದಾರೆ.

## ಪಾರಂಪರಿಕ ಕಟ್ಟಡ ಸುತ್ತ ವಾಣಿಜ್ಯ ಚಟುವಟಿಕೆ ಇಲ್ಲ: ಬೈರತಿಸುರೇಶ್

ಬೆಂಗಳೂರು: ರಾಜ್ಯದ ಮಹಾನಗರ ಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಪಾರಂಪರಿಕ ಕಟ್ಟಡಗಳ 100 ಮೀಟರ್ ಸುತ್ತಮುತ್ತ ಯಾವುದೇ ವಾಣಿಜ್ಯ ಚಟುವಟಿಕೆಗಳು ಮತ್ತು ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಸ್ಪಷ್ಟಪಡಿಸಿದ್ದಾರೆ.

ವಿಧಾನಪರಿಷತ್ತಿನಲ್ಲಿ ಸದಸ್ಯ ಕೆ.ಶಿವಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಜಿಲ್ಲಾ ಮಟ್ಟದಲ್ಲಿ ಪಾರಂಪರಿಕ ತಾಣಗಳ ಸಂರಕ್ಷಣಾ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು, ಪಾರಂಪರಿಕ ಕಟ್ಟಡಗಳ ಸ್ಥಿತಿಗತಿಗಳ ಬಗ್ಗೆ ಕಾಲಕಾಲಕ್ಕೆ ಸಭೆ ಸೇರಿ ಅವಲೋಕನ ಮಾಡುತ್ತಿವೆ.



ಈ ಸಮಿತಿಗಳು ನೀಡುವ ಶಿಫಾರಸುಗಳ ಆಧಾರದಲ್ಲಿ ಪಾರಂಪರಿಕ ಕಟ್ಟಡಗಳ ಸುತ್ತಮುತ್ತಲಿನ ಚಟುವಟಿಕೆಗಳಿಗೆ ಅನುಮತಿ ನೀಡುವುದು ಅಥವಾ ನಿಯಂತ್ರಣ ಮಾಡುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಲ್ಯಾನ್ಸ್ ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆಗಳು, ವಾಣಿವಿಲಾಸ ಮಾರುಕಟ್ಟೆ ಮತ್ತು ಮಂಡಿ ಮೊಹಲ್ಲಾ ಮಾರುಕಟ್ಟೆಗಳು ಶಿಥಿಲಾವಸ್ಥೆಯಲ್ಲಿರುವುದನ್ನು ಸರ್ಕಾರ ಗಮನಿಸಿದೆ. ಈ ಹಿನ್ನೆಲೆಯಲ್ಲಿ ಲ್ಯಾನ್ಸ್ ಡೌನ್ ಕಟ್ಟಡವನ್ನು ನೆಲಸಮ ಮಾಡಿ ಹೊಸ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಯೋಜನಾ ವರದಿ ಸಿದ್ಧಪಡಿಸಿತ್ತು. ಆದರೆ, ಇದಕ್ಕೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿದೆ.

ಈ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ನೀಡುವ ಆದೇಶದ ನಂತರ ಸರ್ಕಾರ ಮುಂದಿನ ನಿರ್ಧಾರ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು. ಜಿಲ್ಲಾಧಿಕಾರಿಗಳ ಬಳಿ ಹಣ ಪಾರಂಪರಿಕ ಕಟ್ಟಡಗಳ ದುರಸ್ತಿ ಕಾರ್ಯಗಳಿಗಾಗಿ ಜಿಲ್ಲಾಧಿಕಾರಿಗಳ ಬಳಿ ಸಾಕಷ್ಟು ಹಣವಿದೆ. ಅಗತ್ಯ ಬಿದ್ದಾಗ ಬಳಸಿಕೊಳ್ಳಲು ಅವರಿಗೆ ಅಧಿಕಾರ ನೀಡಲಾಗಿದೆ ಎಂದು ತಿಳಿಸಿದ ಸಚಿವ ಬೈರತಿ ಸುರೇಶ್ ಅವರು, ಪಾರಂಪರಿಕ ಕಟ್ಟಡಗಳ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ ಎಂದು ತಿಳಿಸಿದರು.

ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು, ಹೊಸದಾಗಿ ರಚನೆಯಾಗಿರುವ 11 ನಗರಸಭೆಗಳ ವ್ಯಾಪ್ತಿಗೆ ಸುತ್ತಮುತ್ತಲಿನ ಗ್ರಾಮಗಳನ್ನೂ ಸೇರ್ಪಡೆ ಮಾಡಲಾಗಿದೆ. ಹೀಗಾಗಿ ಇಲ್ಲಿ ಕಸ ವಿಲೇವಾರಿಯಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಯ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಿ ಉತ್ತಮ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಬೆಂಗಳೂರು ಹೊರತುಪಡಿಸಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 7304 ಟನ್ ನಷ್ಟು ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, 6083 ಟನ್ ನಷ್ಟು ಕಸವನ್ನು ಸಂಸ್ಕರಣೆ ಮಾಡಲಾಗುತ್ತಿದೆ ಎಂದು ತಿಳಿಸಿದ ಅವರು, ರಾಜ್ಯಾದ್ಯಂತ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2250 ಕೋಟಿ ರೂಪಾಯಿ ವೆಚ್ಚದಲ್ಲಿ ಎಸ್ ಟಿಪಿ ಘಟಕಗಳನ್ನು ಸ್ಥಾಪನೆ ಮಾಡಲಾಗುತ್ತಿದೆ.

ನಗರಾಭಿವೃದ್ಧಿ ಇಲಾಖೆಯ ಕೆಯುಡಿಐಎಫ್ಸಿ ಮೂಲಕ ಈ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಎಂದು ಸದನದ ಗಮನಕ್ಕೆ ತಂದರು.

## ಕದನ ವಿರಾಮದ ಮಧ್ಯೆಯೂ ಭೀಕರ ದಾಳಿ

ನವದೆಹಲಿ: ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ 50ಕ್ಕೂ ಹೆಚ್ಚು ನೆಲೆಗಳ ಮೇಲೆ ತಡರಾತ್ರಿ ದಾಳಿ ನಡೆಸಿದ್ದು, ಐಆರ್‌ಜಿಸಿಯ ಕಮಾಂಡ್ ಕೇಂದ್ರಗಳು, ಶಸ್ತ್ರಾಸ್ತ್ರಗಳ ಸಂಗ್ರಹಣಾ ಸೌಲಭ್ಯಗಳು ಮತ್ತು ವೈಮಾನಿಕ ರಕ್ಷಣಾ ವ್ಯವಸ್ಥೆಗಳ ಮೇಲೆ ದಾಳಿ ಮಾಡಿರುವುದಾಗಿ ಇಸ್ರೇಲ್ ರಕ್ಷಣಾ ಪಡೆಗಳು ಮಂಗಳವಾರ ತಿಳಿಸಿವೆ.

ಈ ಕುರಿತಾದ ವಿವರಗಳನ್ನು ಹಂಚಿಕೊಂಡ ಇಸ್ರೇಲ್ ರಕ್ಷಣಾ ಪಡೆಗಳು, ಆಪರೇಷನ್ ರೋರಿಂಗ್ ಲಯನ್ ಪ್ರಾರಂಭವಾದಾಗಿನಿಂದ ಇರಾನ್‌ನಾದ್ಯಂತ 3000ಕ್ಕೂ ಹೆಚ್ಚು ದಾಳಿಗಳನ್ನು ನಡೆಸಲಾಗಿದೆ ಎಂದು ತಿಳಿಸಿವೆ.

'ಆಪರೇಷನ್ ರೋರಿಂಗ್ ಲಯನ್ ಆರಂಭವಾದಾಗಿನಿಂದ ಇರಾನ್‌ನಾದ್ಯಂತ 3,000ಕ್ಕೂ ಅಧಿಕ ದಾಳಿಗಳು ನಡೆದಿವೆ. ನಿನ್ನೆ, ಐಆರ್‌ಜಿಸಿ ಕಮಾಂಡ್ ಕೇಂದ್ರಗಳು, ಶಸ್ತ್ರಾಸ್ತ್ರ ಸಂಗ್ರಹಣಾ ಸೌಲಭ್ಯಗಳು ಮತ್ತು ವೈಮಾನಿಕ ರಕ್ಷಣಾ ವ್ಯವಸ್ಥೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ರಾತ್ರೋರಾತ್ರಿ, ಬ್ಯಾಲಿಸ್ಟಿಕ್ ಕ್ಷಿಪಣಿ ಸಂಗ್ರಹಣಾ ಸ್ಥಳಗಳು ಮತ್ತು ಉಡಾವಣಾ ತಾಣಗಳು ಸೇರಿದಂತೆ ಹೆಚ್ಚುವರಿಯಾಗಿ 50+ ನೆಲೆಗಳ ಮೇಲೆ ದಾಳಿ ಮಾಡಲಾಯಿತು' ಎಂದು ಐಡಿಎಫ್ ಎಕ್ಸ್‌ನಲ್ಲಿ ಬರೆದಿದೆ.

ಈ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವಂತೆಯೇ, ಬಾಗ್ದಾದ್‌ನಲ್ಲಿ ಸ್ಫೋಟಗಳ ಶಬ್ದ ಕೇಳಿಬಂದಿದೆ ಎಂದು ಅಲ್ ಜಜೀರಾ ಬ್ರೇಕಿಂಗ್ ಮಂಗಳವಾರ ವರದಿ ಮಾಡಿದೆ. ಇರಾಕ್‌ನಲ್ಲಿರುವ ಪಿಎಂಎಫ್ ನೆಲೆಯ ಮೇಲೆ ಅಮೆರಿಕ ವೈಮಾನಿಕ ದಾಳಿಯಲ್ಲಿ ಸಾವಿನ ಸಂಖ್ಯೆ 14ಕ್ಕೆ ಏರಿದೆ ಎಂದು ಅದು ಉಲ್ಲೇಖಿಸಿದೆ.

ಅಲ್ ಜಜೀರಾ ಬ್ರೇಕಿಂಗ್ ಇರಾನಿನ ಮಾಧ್ಯಮವನ್ನು ಉಲ್ಲೇಖಿಸಿ, ದೇಶದಲ್ಲಿನ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆದಿದೆ. 'ಕ್ರಿಮಿನಲ್ ಇರಾನಿನ ಆಕ್ರಮಣ' ದಿಂದಾಗಿ ಇಂಧನ ಸೌಲಭ್ಯವೊಂದರಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಬಹ್ರೇನ್ ಹೇಳಿದೆ ಎಂದು ಅದು ಗಮನಿಸಿದೆ.

ಇರಾನಿನ ಕ್ಷಿಪಣಿ ಟೆಲ್ ಅವೀವ್‌ಗೆ ಅಪ್ಪಳಿಸಿದ ನಂತರ ಆರು ಜನರು ಗಾಯಗೊಂಡಿದ್ದಾರೆ ಎಂದು ಟೈಮ್ಸ್ ಆಫ್ ಇಸ್ರೇಲ್ ಮಂಗಳವಾರ ವರದಿ ಮಾಡಿದೆ.

ಸುಮಾರು 100 ಕೆಜಿ ಸ್ಫೋಟಕಗಳನ್ನು ಹೊತ್ತೊಯ್ಯುವ ಕ್ಷಿಪಣಿ ಕೇಂದ್ರ ಟೆಲ್ ಅವೀವ್‌ಗೆ ಅಪ್ಪಳಿಸಿದೆ.

## ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿ

ಬೆಂಗಳೂರು: ನಗರದಲ್ಲಿ ಮಂಗಳವಾರದಿಂದ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿಗೆ ಬರುತ್ತಿದ್ದು, ನೋ ಪಾರ್ಕಿಂಗ್ ಪ್ರದೇಶದಲ್ಲಿ ವಾಹನ ನಿಲ್ಲಿಸಿದರೆ 2 ಸಾವಿರ ರೂ ದಂಡ ಪಾವತಿಸಬೇಕಾಗುತ್ತದೆ.

ಜಿಬಿಎ ಹಾಗೂ ಸಂಚಾರಿ ಪೊಲೀಸರು ಜಂಟಿಯಾಗಿ ನಗರದ ರಸ್ತೆಗಳಲ್ಲಿ ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸುವ ವಾಹನಗಳನ್ನು ಟೋಯಿಂಗ್ ಮಾಡಿ ದಂಡ ವಿಧಿಸಲಿದ್ದಾರೆ.

ಇದರ ಜೊತೆಗೆ ವಾಹನ ಟೋಯಿಂಗ್ ಮಾಡುವ ಸಂದರ್ಭದಲ್ಲಿ ಸಾರ್ವಜನಿಕರು ಮತ್ತು ಪೊಲೀಸರ ನಡುವೆ ಆಗುತ್ತಿದ್ದ ವಾಗ್ವಾದ, ಗಲಾಟೆಗಳಿಗೆ ತಡೆಯೊಡ್ಡಲು ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಇನ್ನು ಮುಂದೆ ಟೋಯಿಂಗ್ ವಾಹನಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ.ಟೋಯಿಂಗ್ ಪ್ರಕ್ರಿಯೆ ವೇಳೆ ವಾಹನವನ್ನು ಹೇಗೆ ತೆಗೆದುಕೊಂಡು ಹೋಗಲಾಗಿದೆ, ಯಾವುದೇ ಹಾನಿ ಉಂಟಾಗಿದೆ.

ಭಾರತ ಸಾರಥಿ
25/03/2026
BHARATHA SARATHI KANNADA DAILY NEWS PAPER
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

## ದೊಡ್ಡ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕಕ್ಕೆ 4ನೇ ಸ್ಥಾನ

ಬೆಂಗಳೂರು

ಇಂಡಿಯಾ ಜಸ್ಟಿಸ್ ರಿಪೋರ್ಟ್ ಬಿಡುಗಡೆ ಮಾಡಿದ ದೇಶದ ಮೊದಲ ಸಮೀಕ್ಷೆ 'ಗ್ರಾಹಕ ನ್ಯಾಯ ವರದಿ 2026: ಭಾರತದಲ್ಲಿ ಪರಿಹಾರ ಆಯೋಗಗಳ ಸಾಮರ್ಥ್ಯದ ಮೌಲ್ಯಮಾಪನ' ವರದಿಯಲ್ಲಿ, 19 ದೊಡ್ಡ ಮತ್ತು ಮಧ್ಯಮ ಗಾತ್ರದ ರಾಜ್ಯಗಳ ಪೈಕಿ ಕರ್ನಾಟಕವು ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ. ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ರಾಜಸ್ಥಾನ ಮೊದಲ ಮೂರು ಸ್ಥಾನಗಳಲ್ಲಿವೆ. ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಅಡಿಯಲ್ಲಿ ಶಾಸನಬದ್ಧ ಜವಾಬ್ದಾರಿಗಳನ್ನು ಪೂರೈಸುವ ಆಯೋಗಗಳ ಸಾಮರ್ಥ್ಯವನ್ನು ಆಧರಿಸಿ ಈ ಶ್ರೇಯಾಂಕ ನೀಡಲಾಗಿದೆ. ಬಜೆಟ್, ಮೂಲಸೌಕರ್ಯ, ಮಾನವ ಸಂಪನ್ಮೂಲ, ಕೆಲಸದ ಹೊರೆ ಮತ್ತು ಲಿಂಗ ವೈವಿಧ್ಯತೆ ಸೇರಿದಂತೆ 11 ಸೂಚಕಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.
ಪ್ರಕರಣಗಳ ವಿಲೇವಾರಿ: 2020–2024ರ ಅವಧಿಯಲ್ಲಿ ಕರ್ನಾಟಕದ ಜಿಲ್ಲಾ ಮತ್ತು ರಾಜ್ಯ ಗ್ರಾಹಕ ಆಯೋಗಗಳು ಸರಾಸರಿ 109% ರಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಿವೆ.
ಲಿಂಗ ಸಮಾನತೆ: 2024ರ ವೇಳೆಗೆ ರಾಜ್ಯ ಗ್ರಾಹಕ ಆಯೋಗದಲ್ಲಿ ಒಬ್ಬರು ಮಹಿಳಾ ಸದಸ್ಯರಿದ್ದು, ಕಾಯ್ದೆಯ ನಿಯಮವನ್ನು ಪಾಲಿಸಲಾಗಿದೆ.
ಮಹಿಳಾ ಸಿಬ್ಬಂದಿ: ರಾಜ್ಯ ಗ್ರಾಹಕ ಆಯೋಗದ ಒಟ್ಟು ಸಿಬ್ಬಂದಿಯಲ್ಲಿ 43% ಮಹಿಳೆಯರಿದ್ದು, ಇದು ದೇಶದ 19 ದೊಡ್ಡ ರಾಜ್ಯಗಳಲ್ಲೇ ಅತಿ ಹೆಚ್ಚು.ಕೊರತೆಯಿದೆ. ಬೆಂಗಳೂರಿನ ಮೂರು ಜಿಲ್ಲಾ ಆಯೋಗಗಳಲ್ಲಿ ಪ್ರಕರಣ ವಿಲೇವಾರಿ ದರವು 2022ರಲ್ಲಿ 96% ಇತ್ತು, ಆದರೆ 2024ರ ವೇಳೆಗೆ ಇದು 50% ಕ್ಕೆ ಕುಸಿದಿದೆ.

## 'ರೈಸ್'ನಿಂದ ಎಕ್ಸ್‌ಪರ್ಟ್ ಕೇರ್ ಕೂದಲು ಪರಿಹಾರ

ಬೆಂಗಳೂರು

ಬೇಸಿಗೆಯ ತಾಪಮಾನ ಮತ್ತು ತೇವಾಂಶ ಹೆಚ್ಚಾದಂತೆ ಕೂದಲಿನ ಫ್ರಿಜ್ ಸಮಸ್ಯೆ ಸಾಮಾನ್ಯವಾಗುತ್ತದೆ. ಶಾಖ, ಬೆವರು ಮತ್ತು ಪರಿಸರದ ಆರ್ದ್ರತೆಯಿಂದ ಕೂದಲಿನ ಹೊರಪೊರೆ ಊದಿಕೊಂಡು, ಎಳೆಗಳಲ್ಲಿ ತೇವಾಂಶ ಪ್ರವೇಶಿಸಿ ಕೂದಲು ಶುಷ್ಕ, ಅಸಮತೋಲನ ಹಾಗೂ ನಿರ್ವಹಿಸಲು ಕಷ್ಟವಾಗುವ ಸ್ಥಿತಿ ಉಂಟಾಗುತ್ತದೆ.




ಇಂತಹ ಸಮಸ್ಯೆಗೆ ಪರಿಹಾರವಾಗಿ 'ರೈಸ್' ಬ್ಯಾಂಡ್, ಸಲೂನ್ ಮಟ್ಟದ ಪರಿಣತಿಯನ್ನು ಆಧುನಿಕ ಕೊರಿಯನ್ ತಂತ್ರಜ್ಞಾನದೊಂದಿಗೆ ಸಂಯೋಜಿಸಿ ಮನೆಮಟ್ಟದಲ್ಲೇ ಪರಿಣಾಮಕಾರಿ ಫಲಿತಾಂಶಗಳನ್ನು ನೀಡುವ ಉತ್ಪನ್ನಗಳನ್ನು ಪರಿಚಯಿಸಿದೆ. ಜೀನ್ ಕ್ಲೌಡ್ ಬಿಗುಯಿನ್ ಮತ್ತು ಬೌನ್ಸ್ ಸಲೂನ್ ತಜ್ಞರ ಅನುಭವದ ಆಧಾರದಲ್ಲಿ ರೂಪುಗೊಂಡಿರುವ ಈ ಶ್ರೇಣಿ, ಕೂದಲಿನ ಫ್ರಿಜ್ ನಿಯಂತ್ರಿಸಿ ನಯವಾದ ಮತ್ತು ಹೊಳೆಯುವ ಕೂದಲು ನೀಡಲು ಸಹಕಾರಿಯಾಗಿದೆ.
'ಎಕ್ಸ್‌ಪರ್ಟ್, ಎಲಿವೇಟ್ ಮತ್ತು ಎಫರ್ಟ್‌ಲೆಸ್' ಎಂಬ ಮೂರು ಪ್ರಮುಖ ಅಂಶಗಳೊಂದಿಗೆ ಈ ಉತ್ಪನ್ನಗಳು ರೂಪುಗೊಂಡಿವೆ. ಸಲೂನ್ ಮಟ್ಟದ ಆರೈಕೆ, ದೈನಂದಿನ ಬಳಕೆಗೆ ಸರಳ ವಿಧಾನ ಮತ್ತು ತ್ವರಿತ ಪರಿಣಾಮಗಳ ಮೂಲಕ ಕೂದಲಿನ ಆರೈಕೆಯನ್ನು ಸುಲಭಗೊಳಿಸುವುದು ಇದರ ಉದ್ದೇಶವಾಗಿದೆ.
ಈ ಶ್ರೇಣಿಯಲ್ಲಿ ವಿಶೇಷವಾಗಿ ಗಮನಸೆಳೆಯುತ್ತಿರುವ 'ರೈಸ್ ಪೆಪ್ ಟಾಕ್ ಲೀವ್–ಇನ್ ಹೇರ್ ಬಾಂಡ್ ಚಿಕಿತ್ಸೆ' (ಬೆಲೆ–2299) ಹಾನಿಗೊಳಗಾದ ಹಾಗೂ ಸುಕ್ಕುಗಟ್ಟಿದ ಕೂದಲಿಗೆ ಆಣ್ವಿಕ ಮಟ್ಟದಲ್ಲಿ ದುರಸ್ತಿ ನೀಡುತ್ತದೆ.

## ಮನೆಯಲ್ಲೇ ಹೊಸ ಮಾದರಿಯ ಬೇಸಿಗೆ ಶಿಬಿರ




ಬೆಂಗಳೂರು

ಈ ಬೇಸಿಗೆಯಲ್ಲಿ ಮಕ್ಕಳಿಗೆ ಹೊಸ ಅನುಭವ ನೀಡಲು ದೂರ ಪ್ರಯಾಣ ಮಾಡುವ ಅವಶ್ಯಕತೆ ಇಲ್ಲ. 'ರೋಲ್ ದ ಡೈಸ್' ಸಂಸ್ಥೆಯಿಂದ ಪರಿಚಯಿಸಲಾದ 'ಅನ್‌ಕ್ಯಾಂಪ್ 2026' ಮನೆಮಟ್ಟದಲ್ಲೇ ನಡೆಸಬಹುದಾದ ವಿಶಿಷ್ಟ ಬೇಸಿಗೆ ಶಿಬಿರವಾಗಿ ಗಮನ ಸೆಳೆಯುತ್ತಿದೆ. ಆಟ, ಸೃಜನಶೀಲತೆ ಮತ್ತು ಭಾರತೀಯ ಸಂಸ್ಕೃತಿಯ ಅರಿವು ರೂಪದಲ್ಲಿ ಈ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ. ಸಾಮಾನ್ಯ ಶಿಬಿರಗಳಂತೆ ನಿಗದಿತ ಸಮಯ ಅಥವಾ ಸ್ಥಳದ ನಿರ್ಬಂಧ ಇಲ್ಲದೆ, ಕುಟುಂಬಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಯಾವುದೇ ಸಮಯದಲ್ಲಿ ಭಾಗವಹಿಸಬಹುದಾದುದು ಇದರ ವಿಶೇಷತೆ. 14ರಿಂದ 21 ದಿನಗಳ ಮಾರ್ಗದರ್ಶಿತ ಕಾರ್ಯಕ್ರಮವಾಗಿರುವ 'ಅನ್‌ಕ್ಯಾಂಪ್', ಮಕ್ಕಳಿಗೆ ಪ್ರತಿದಿನ ಸರಳ ಮತ್ತು ಆಸಕ್ತಿದಾಯಕ ಚಟುವಟಿಕೆಗಳನ್ನು ಒದಗಿಸುತ್ತದೆ. ಈ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಸೃಜನಾತ್ಮಕ ಚಿಂತನೆ, ಸ್ವಯಂ ಕಾರ್ಯನಿರ್ವಹಣೆಯ ಅಭ್ಯಾಸ, ಸಂಸ್ಕೃತಿ ಅರಿವು ಮತ್ತು ಕುಟುಂಬದೊಂದಿಗೆ ಸಮಯ ಕಳೆಯುವ ಮನೋಭಾವ ಬೆಳೆಸಲಾಗುತ್ತದೆ. ಪ್ರತಿದಿನ ಮಕ್ಕಳಿಗೆ ನೀಡಲಾಗುವ ಕಾರ್ಯಗಳ ಜೊತೆಗೆ ಕುಟುಂಬದವರು ಸೇರಿ ಮಾಡುವ ಚಿಕ್ಕ ಚಟುವಟಿಕೆಗಳೂ ಒಳಗೊಂಡಿವೆ. ಕಾರ್ಯಕ್ರಮವು ಎರಡು ವಿಭಾಗಗಳಲ್ಲಿ ಲಭ್ಯವಿದೆ. 8ರಿಂದ 14 ವರ್ಷದ ಮಕ್ಕಳಿಗಾಗಿ ಇರುವ 'ಅನ್‌ಕ್ಯಾಂಪ್ ಕ್ವೆಸ್ಟ್' ವಿಭಾಗದಲ್ಲಿ ಹೊಸ ಸೃಜನಶೀಲ ಕೆಲಸಗಳು, ಪಜಲ್ ಪರಿಹಾರ ಹಾಗೂ ಸಂಸ್ಕೃತಿ ಅನ್ವೇಷಣೆಗೆ ಸಂಬಂಧಿಸಿದ ಚಟುವಟಿಕೆಗಳು ಇವೆ.






## ಕಾಕನಕೋಟೆ ನಾಟಕ ಅದ್ದೂರಿ ಪ್ರದರ್ಶನ

ಬೆಂಗಳೂರು: ನಗರದ ಮಲ್ಲತಳ್ಳಿಯ ಕಲಾಗ್ರಾಮದಲ್ಲಿ ಕಲಾಸಂಗಮ ಕ್ರಿಯೇಷನ್ ಟ್ರಸ್ಟ್ ವತಿಯಿಂದ ರಚನೆ ಮಾಡಿದ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕೃತಿ ಆಧಾರಿತ, ಮೈಕೋ ಶಿವಶಂಕರ್ ನಿರ್ದೇಶನದ "ಕಾಕನಕೋಟೆ" ನಾಟಕ ಅದ್ದೂರಿಯಾಗಿ ಪ್ರದರ್ಶನಗೊಂಡಿತು. ಕಾರ್ಯಕ್ರಮವನ್ನು ಹಿರಿಯ ರಂಗಕರ್ಮಿ ಸಿ.ಕೆ. ಗುಂಡಣ್ಣ ಉದ್ಘಾಟಿಸಿದರು. ಗಂಧರ್ವ ರಾಯರಾವ್ರತ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ಬಿ. ಸುರೇಶ್, ಶಶಿಕಾಂತ್ ಯಡಹಳ್ಳಿ, ನಟ ಹಾಗೂ ನಿರ್ಮಾಪಕ ಗಂಡಸಿ ಸದಾನಂದ ಸ್ವಾಮಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನಾಟಕವು ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿದ್ದು, ಕಲಾ ಪ್ರೇಮಿಗಳ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಲಾ ಪ್ರೇಕ್ಷಕರು ಉಪಸ್ಥಿತರಿದ್ದು, ನಾಟಕ ಯಶಸ್ವಿಯಾಗಿ ನೆರವೇರಿತು.

## ಲ್ಯಾಕ್ಮೆ ಫ್ಯಾಷನ್ ವೀಕ್‌ನಲ್ಲಿ ಮಿಂಚಿನ ಸಂಚಾರ

ಬೆಂಗಳೂರು

ಎರಡು ದಶಕಗಳು, ಕೋಟ್ಯಂತರ ವಾರ್ಡ್ ರೋಬ್ ಗಳು ಮತ್ತು ಅಸಂಖ್ಯ ಸ್ಟೈಲ್ ಕ್ಷಣಗಳ ನಂತರ ಮ್ಯಾಕ್ಸ್ ಬರೀ ವಾರ್ಷಿಕೋತ್ಸವ ಸಂಭ್ರಮಿಸುತ್ತಿಲ್ಲ, ಬದಲಿಗೆ ಇದು ಭಾರತದ ಅತ್ಯಂತ ಪ್ರಮುಖ ರನ್ವೇಗಳಲ್ಲಿ ಒಂದರಲ್ಲಿ ಪೂರ್ಣ ಪ್ರಮಾಣದ ಫ್ಯಾಷನ್ ಪಾರ್ಟಿ ಆಯೋಜಿಸಿದೆ. ಬೆಳಕು ಮಂದವಾಗಿತ್ತು. ಸಂಗೀತ ಸಣ್ಣದಾಗಿತ್ತು. ಮತ್ತು ಅದೇ ರೀತಿಯಲ್ಲಿ ರನ್ವೇ ತಾನು ರನ್ವೇ ಆಗಿರುವುದನ್ನೇ ನಿಲ್ಲಿಸಿತು.
35ಕ್ಕೂ ಹೆಚ್ಚು ಲುಕ್ಸ್ ಅನ್ನು ಅನಾವರಣಗೊಳಿಸಿದ್ದು ಅದು ಸಾಂಪ್ರದಾಯಿಕ ಫ್ಯಾಷನ್ ಶೋ ಎನ್ನುವುದಕ್ಕಿಂತ ಹೇಗೆ ಯುವ ಭಾರತವು ನಿಜಕ್ಕೂ ಉಡುಪು ಧರಿಸುತ್ತದೆ ಎನ್ನುವುದರ ಆಕರ್ಷಕ ನೋಟ ನೀಡಿತು. ಪ್ರಯೋಗಾತ್ಮಕ. ವಿಶ್ವಾಸಾರ್ಹ. ಕ್ಷಮೆ ಯಾಚಿಸದ ಸ್ವಯಂ. ಮೂರು ಹೆಸರುಗಳು ವೇದಿಕೆಯ ಮೇಲೆ ಕಂಗೊಳಿಸಿದವು. ಮೂರು ವಿಭಿನ್ನ ಶಕ್ತಿಗಳು. ಒಂದು ದೋಷರಹಿತ ಸಂದೇಶ. ಸಿದ್ಧಾಂತ್ ಚತುರ್ವೇದಿ, ಅಲಯ ಎಫ್. ಮತ್ತು ಕಲ್ಕಿ ಕೊಚ್ಲಿನ್ ಈ ಪ್ರದರ್ಶನವು ಸಿದ್ಧಾಂತ್ ಚತುರ್ವೇದಿ ಮಿಂಚಿನಂತೆ




ರನ್ವೇ ಪ್ರವೇಶಿಸುವುರೊಂದಿಗೆ ಪ್ರಾರಂಭವಾಯಿತು, ಅದು ತಕ್ಷಣವೇ ಫ್ಯಾಷನ್ ಶೋವನ್ನು ಸಂಸ್ಕೃತಿ ಮತ್ತು ಪ್ರದರ್ಶನದ ಕ್ಷಣವಾಗಿಸಿತು.
ಸಂಗೀತ ಮೇಳಕ್ಕೆ ಬೆಳಕಿನ ಸಂಯೋಜನೆಯಲ್ಲಿ ಸಿದ್ಧಾಂತ್ ಮ್ಯಾಕ್ಸ್ ಅರ್ಬನ್ ವರ್ಗಕ್ಕೆ ತನ್ನ ವಿಶಿಷ್ಟ ದಿಟ್ಟತನ, ಸ್ವಾಭಾವಿಕತೆ ಮತ್ತು ವೇದಿಕೆಯಲ್ಲಿ ಪ್ರಯತ್ನರಹಿತ ಕೂಲ್ ಅನ್ನು ತಂದರು.
ಈ ಶಕ್ತಿಯನ್ನು ಮುಂದಕ್ಕೆ ಕೊಂಡೊಯ್ದ ಅಲಯ ಎಫ್. ನಗರದ ಪ್ರದರ್ಶನದಿಂದ ರನ್ವೇಯಲ್ಲಿ ಪ್ರಭಾವ ಮೂಡಿಸಿದರು. ವಿಶ್ವಾಸ ಮತ್ತು ವಿನೋದಮಯ ಪ್ರವೃತ್ತಿಯನ್ನು ಹೊಮ್ಮಿಸಿದ ಅವರು ಈ ಶ್ರೇಣಿಯ ದಿಟ್ಟ, ಅಭಿವ್ಯಕ್ತಿಶೀಲ ಸ್ಫೂರ್ತಿಯನ್ನು ಹೊಂದಿದ್ದರು. ಅವರ ನಡಿಗೆ ಉತ್ಸಾಹ ಮತ್ತು ಸಹಜ ಪ್ರವೃತ್ತಿಯಿಂದ ಕೂಡಿತ್ತು, ಅದು ನಿಮಗೆ ಇಂದು ವ್ಯಕ್ತಿತ್ವ, ಪ್ರಯೋಗಾತ್ಮಕತೆ ಮತ್ತು ಎಲ್ಲರ ಗಮನ ಸೆಳೆಯುವ ಸ್ಟೈಲ್ ಅನ್ನು ನೆನಪಿಸುತ್ತಿತ್ತು.

## 'ಪ್ರಾಜೆಕ್ಟ್ ಜಲ ಸಂಚಯ'ದ ಮೂರನೇ ಹಂತವನ್ನು ಯಶಸ್ವಿ

ನೆಲಮಂಗಲ

ಹೈನೆಕೆನ್ ಸಮೂಹದ ಅಂಗಸಂಸ್ಥೆಯಾದ ಯುನೈಟೆಡ್ ಬ್ರೀವರೀಸ್ ಲಿಮಿಟೆಡ್ (ಯುಬಿಎಲ್) ಸಂಸ್ಥೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಮಲ್ಲರಬಾಣವಾಡಿ, ಹಂಚಿಪುರ, ಕೊಡಪ್ಪನಹಳ್ಳಿ, ಬೈರೇಗೌಡನಹಳ್ಳಿ ಮತ್ತು ವರದನಾಯಕನಹಳ್ಳಿ ಎಂಬ ಐದು ಗ್ರಾಮಗಳಲ್ಲಿ 'ಪ್ರಾಜೆಕ್ಟ್ ಜಲ ಸಂಚಯ'ದ ಮೂರನೇ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಈ ಮೂಲಕ ಐದು ಗ್ರಾಮಗಳಿಗೆ ನೀರಿನ ಭದ್ರತೆ ಒದಗಿಸಿದೆ.
ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ 'ಎಸ್ ಎಮ್ ಸೆಹಗಲ್ ಫೌಂಡೇಶನ್' ಸಹಯೋಗದೊಂದಿಗೆ ಈ ಯೋಜನೆ ಹಮ್ಮಿಕೊಳ್ಳಲಾಗಿದೆ.
ಯೋಜನೆಯ ಭಾಗವಾಗಿ ಗ್ರಾಮದ ಕೆರೆಯನ್ನು ಪುನಶ್ಚೇತನಗೊಳಿಸಲಾಗಿದ್ದು, ಮಳೆನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. ವಿಶೇಷವೆಂದರೆ, ಹೂಳೆತ್ತುವ ಸಂದರ್ಭದಲ್ಲಿ ಸಂಗ್ರಹವಾದ ಮಣ್ಣನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಸ್ಥಳೀಯ ರೈತರಿಗೆ ಉಚಿತವಾಗಿ ನೀಡಲಾಗಿದೆ. ಇದು ಕೃಷಿ ಇಳುವರಿ ಹೆಚ್ಚಿಸಲು ಸಹಕಾರಿಯಾಗಲಿದೆ.
ಅಂತರ್ಜಲ ಮಟ್ಟವನ್ನು ವೃದ್ಧಿಸುವ ಉದ್ದೇಶದಿಂದ ಈ ಐದು ಗ್ರಾಮಗಳಲ್ಲಿ ಒಟ್ಟು 30 ಮಳೆನೀರು ಕೊಯ್ಲು




ಗುಂಡಿಗಳನ್ನು ನಿರ್ಮಿಸಲಾಗಿದೆ. ಇವು ಮಳೆನೀರು ವ್ಯರ್ಥವಾಗದೆ ಭೂಮಿಯೊಳಗೆ ಇಳಿಯುವಂತೆ ಮಾಡುತ್ತವೆ.
ಅಲ್ಲದೆ, ಅಂತರ್ಜಲದ ಮಟ್ಟವನ್ನು ನಿರಂತರವಾಗಿ ಪತ್ತೆಹಚ್ಚಲು ಮತ್ತು ವೈಜ್ಞಾನಿಕವಾಗಿ ನೀರಿನ ನಿರ್ವಹಣೆ ಮಾಡಲು 'ಪೀಜೋಮೀಟರ್' ಉಪಕರಣವನ್ನು ಅಳವಡಿಸಲಾಗಿದೆ. ಸಾರ್ವಜನಿಕ ಸಹಭಾಗಿತ್ವದೊಂದಿಗೆ ಜಾರಿಗೊಳಿಸಲಾದ ಈ ಯೋಜನೆಯು, ಗ್ರಾಮೀಣ ಭಾಗದ ರೈತರಿಗೆ ಮತ್ತು ಜನಸಾಮಾನ್ಯರಿಗೆ ನೀರಿನ ಸ್ವಾವಲಂಬನೆ ಸಾಧಿಸಲು ದೊಡ್ಡ ಮಟ್ಟದ ನೆರವು ನೀಡಲಿದೆ.
ಈ ಕುರಿತು ಯುಬಿಎಲ್ ಸಂಸ್ಥೆಯ ಚೀಫ್ ಕಾರ್ಪೊರೇಟ್ ಅಫೇರ್ಸ್ ಆಫೀಸರ್ ಗರಿಮಾ ಸಿಂಗ್ ಮಾತನಾಡಿ, "ನಮ್ಮ ವ್ಯವಹಾರ ಮತ್ತು ಸಮಾಜ ಎರಡಕ್ಕೂ ಜಲ ಸಂರಕ್ಷಣೆಯೇ ಜೀವಾಳ. 'ಜಲ ಸಂಚಯ'ದಂತಹ ಯೋಜನೆಗಳ ಮೂಲಕ ಸ್ಥಳೀಯ ಜಲಮೂಲಗಳನ್ನು ಪುನಶ್ಚೇತನಗೊಳಿಸಿ, ಸುಸ್ಥಿರ ನೀರು ನಿರ್ವಹಣೆ ಮಾಡುವ ಕಡೆಗೆ ನಾವು ಒತ್ತು ನೀಡುತ್ತಿದ್ದೇವೆ. ಮೂಲಸೌಕರ್ಯ ಅಭಿವೃದ್ಧಿಯ ಜೊತೆಗೆ ಸಾರ್ವಜನಿಕರ ಪಾಲ್ಗೊಳ್ಳುವಿಕೆಯ ಮೂಲಕ ಈ ಪ್ರದೇಶದ ನೀರಿನ ಭದ್ರತೆಯನ್ನು ಹೆಚ್ಚಿಸುವ ಗುರಿ ಇಟ್ಟುಕೊಂಡಿದ್ದೇವೆ" ಎಂದು ಹೇಳಿದರು.

## ಎನಿಟೈಮ್ ಫಿಟ್ನೆಸ್‌ನ ಹೊಸ ಜಿಮ್ ಉದ್ಘಾಟನೆ

ಬೆಂಗಳೂರು

ದಕ್ಷಿಣ ಭಾರತದಲ್ಲಿ ತನ್ನ ಪ್ರಗತಿಯನ್ನು ವಿಸ್ತರಿಸುತ್ತಿರುವ ಭಾರತದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಫಿಟ್ನೆಸ್ ಫ್ರಾಂಚೈಸಿ ಮತ್ತು ವಿಶ್ವದ ಅತ್ಯಂತ ದೊಡ್ಡ ಜಿಮ್ ಸರಣಿ ಎನಿಟೈಮ್ ಫಿಟ್ನೆಸ್ ಬೆಂಗಳೂರಿನ ಕೋರಮಂಗಲದಲ್ಲಿ ತನ್ನ ಹೊಚ್ಚಹೊಸ ಕ್ಲಬ್ ಅನ್ನು ಅನಾವರಣಗೊಳಿಸಿದೆ.
ಈ ಪ್ರಾರಂಭವು ಪ್ರೀಮಿಯಂ, ವಿಶ್ವಮಟ್ಟದ ಫಿಟ್ನೆಸ್ ತೀವ್ರವಾಗಿ ಬೆಳೆಯುತ್ತಿರುವ ನಗರ ಸಮುದಾಯಗಳಿಗೆ ಹೆಚ್ಚು ಲಭ್ಯವಾಗುವಂತೆ ಮಾಡುವ ಬ್ರಾಂಡ್ ಬದ್ಧತೆಯನ್ನು ಮರು ದೃಢೀಕರಿಸಿದೆ.
ಈ ಉದ್ಘಾಟನೆಯಲ್ಲಿ ಬೆಂಗಳೂರು ದಕ್ಷಿಣ ಸಂಸದ ಹಾಗೂ ರಾಷ್ಟ್ರೀಯ ಯುವ ಬಿಜೆಪಿಯ ಅಧ್ಯಕ್ಷ ಹಾಗೂ ಎರಡು ಬಾರಿ ಮಿನಿ ಐರನ್ ಮ್ಯಾನ್ ಪೂರ್ಣಗೊಳಿಸಿದ್ದ ತೇಜಸ್ವಿ ಸೂರ್ಯ ಅವರು ಮುಖ್ಯ ಅತಿಥಿಯಾಗಿದ್ದರು.
ಹೊಸದಾಗಿ ಪ್ರಾರಂಭಿಸಲಾದ ಕ್ಲಬ್ ಅನ್ನು ಶ್ರೀ ರೋಹಿತ್ ರಾಜ್ ಪಾಲ್, ಕು.ಮುಕುಂದನಾ ಕುಮಾರಿ, ಅಂಜನಾ ಕುಮಾರಿ ಮತ್ತು ಸಾಮ್ರಾಟ್ ಸರ್ಕಾರ್ ಅವರ ಮಾಲೀಕತ್ವ ಮತ್ತು ನಿರ್ವಹಣೆ




ಹೊಂದಿದ್ದು ಇದು ಬೆಂಗಳೂರಿನಲ್ಲಿ ಅವರ ವಿಸ್ತರಣೆಯ ಪ್ರಯಾಣ ಪ್ರಾರಂಭಿಸಿದ ಮೊದಲ ಎನಿಟೈಮ್ ಫಿಟ್ನೆಸ್ ಫ್ರಾಂಚೈಸಿ ಎನಿಸಿದೆ. ವಿಶೇಷವೆಂದರೆ ಇದು ನಗರದಲ್ಲಿ ಎರಡನೆಯ ಎನಿಟೈಮ್ ಫಿಟ್ನೆಸ್ ಕ್ಲಬ್ ಆಗಿದೆ. ಫಿಟ್ನೆಸ್ ಉದ್ಯಮಶೀಲತೆ ಕ್ಷೇತ್ರಕ್ಕೆ ಅವರ ಪ್ರವೇಶವು ಬೆಂಗಳೂರಿನಂತಹ ನಗರಗಳಲ್ಲಿ ರಚನಾತ್ಮಕ, ಪ್ರೀಮಿಯಂ ಫಿಟ್ನೆಸ್ ಪರಿಹಾರಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಸೂಚಿಸುತ್ತಿದೆ ಮತ್ತು ರೋಗತಡೆಯ ಆರೋಗ್ಯ ಮತ್ತು ಸಕ್ರಿಯ ಜೀವನಶೈಲಿಗಳ ಸುತ್ತಲೂ ಅರಿವು ಹೆಚ್ಚಾಗುತ್ತಿರುವುದನ್ನು ತೋರಿಸುತ್ತಿದೆ.

## ದಿಗ್ಗಜ ಬ್ರ್ಯಾಂಡ್‌ಗಳಿಗೆ 'ಸನ್ನಿ ಬೀಚಸ್' ಕಠಿಣ ಪೈಪೋಟಿ

ಬೆಂಗಳೂರು

ರಾಜ್ಯದ ಬಿಯರ್ ಮಾರುಕಟ್ಟೆಯಲ್ಲಿ ದಶಕಗಳಿಂದ ಪಾರುಪತ್ಯ ಮೆರೆಯುತ್ತಿದ್ದ ಹಳೆಯ ಹಾಗೂ ದಿಗ್ಗಜ ಬ್ರ್ಯಾಂಡ್‌ಗಳಿಗೆ ಈಗ ಹೊಸ ಸವಾಲು ಎದುರಾಗಿದೆ. ಎಸ್‌ಓಎಂ ಗ್ರೂಪ್ ಆಫ್ ಕಂಪನೀಸ್‌ನ ಅಂಗಸಂಸ್ಥೆಯಾದ 'ವುಡ್‌ಪೆಕ್ಕರ್ ಡಿಸ್ಟಿಲರೀಸ್ ಅಂಡ್ ಬ್ರೂವರೀಸ್' ಮಾರುಕಟ್ಟೆಗೆ ಪರಿಚಯಿಸಿರುವ ಸ್ವದೇಶಿ ಬಿಯರ್ 'ಸನ್ನಿ ಬೀಚಸ್', ಅತ್ಯಲ್ಪ ಅವಧಿಯಲ್ಲೇ ಗ್ರಾಹಕರ ಗಮನ ಸೆಳೆಯುವ ಮೂಲಕ ಭರ್ಜರಿ ಯಶಸ್ಸು ಕಂಡಿದೆ.
ಮಾರುಕಟ್ಟೆ ಪ್ರವೇಶಿಸಿದ ಕೆಲವೇ ತಿಂಗಳುಗಳಲ್ಲಿ ಈ ಬ್ರ್ಯಾಂಡ್ ಶೇ. 3ಕ್ಕೂ ಅಧಿಕ ಮಾರುಕಟ್ಟೆ ಪಾಲನ್ನು ತನ್ನದಾಗಿಸಿಕೊಂಡಿದೆ. ಅಚ್ಚರಿಯೆಂದರೆ, ಕೇವಲ ಫೆಬ್ರವರಿ ತಿಂಗಳೊಂದರಲ್ಲೇ 12 ಲಕ್ಷಕ್ಕೂ ಹೆಚ್ಚು 'ಸನ್ನಿ ಬೀಚಸ್' ಬಿಯರ್ ಬಾಟಲಿಗಳು ಮಾರಾಟವಾಗಿದ್ದು, ಮಾರುಕಟ್ಟೆಯಲ್ಲಿರುವ ಹಳೆಯ ದಿಗ್ಗಜ ಬ್ರ್ಯಾಂಡ್‌ಗಳನ್ನು ಹಿಂದಿಕ್ಕಿ ಮುನ್ನುಗ್ಗುತ್ತಿದೆ. ಕಳೆದ ಕೆಲವು ತಿಂಗಳುಗಳಲ್ಲಿ ರಾಜ್ಯದ 10 ಲಕ್ಷಕ್ಕೂ ಹೆಚ್ಚು ಗ್ರಾಹಕರು ಈ ಹೊಸ ರುಚಿಯನ್ನು ಸವಿದಿದ್ದಾರೆ ಎಂದು ಅಂದಾಜಿಸಲಾಗಿದೆ.
ಪ್ರಸ್ತುತ ಬೆಂಗಳೂರು, ಮೈಸೂರು, ಮಂಗಳೂರು



ಹಾಗೂ ಬೆಳಗಾವಿ ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ಈ ಬಿಯರ್ ಲಭ್ಯವಿದೆ.
ಸನ್ನಿ ಬೀಚಸ್‌ನ ಈ ದಿಢೀರ್ ಯಶಸ್ಸಿಗೆ ಅದರ ಪ್ರೀಮಿಯಂ ಗುಣಮಟ್ಟ ಹಾಗೂ ಸ್ಪರ್ಧಾತ್ಮಕ ದರವೇ ಪ್ರಮುಖ ಕಾರಣ . 650 ಮಿ.ಲೀ. ಬಾಟಲ್‌ಗೆ ಕೇವಲ 100 ರೂಪಾಯಿ, 500 ಮಿ.ಲೀ. ಕ್ಯಾನ್‌ಗೆ 90 ರೂಪಾಯಿ ಹಾಗೂ 330 ಮಿ.ಲೀ. ಪಿಂಟ್‌ಗೆ ಕೇವಲ 65 ರೂಪಾಯಿ ದರ ನಿಗದಿಪಡಿಸಲಾಗಿದೆ.
ಕೈಗೆಟುಕುವ ದರದಲ್ಲಿ ಅತ್ಯುತ್ತಮ ಗುಣಮಟ್ಟದ ಬಿಯರ್ ಲಭ್ಯವಾಗುತ್ತಿರುವುದು ಗ್ರಾಹಕರನ್ನು, ಅದರಲ್ಲೂ ವಿಶೇಷವಾಗಿ ಯುವಜನತೆಯನ್ನು ಹೆಚ್ಚು ಆಕರ್ಷಿಸುತ್ತಿದೆ. ಗುಣಮಟ್ಟದ ಕಾರಣದಿಂದಾಗಿ ಗ್ರಾಹಕರು ಪದೇಪದೇ ಖರೀದಿಸುತ್ತಿರುವುದು ಬ್ರ್ಯಾಂಡ್‌ನ ಬೆಳವಣಿಗೆಗೆ ಸಹಕಾರಿಯಾಗಿದೆ.

### ಕನಿಷ್ಠ ಪಕ್ಷ 2026ರ ದ್ವಿತೀಯಾರ್ಧದಲ್ಲಿ

## ವ್ಯವಹಾರದ ಚೇತರಿಕೆ

ಮುಂಬೈ

ದುರ್ಬಲವಾಗಿ ಉಳಿದ ಮಾರುಕಟ್ಟೆ ಪರಿಸರ ಮತ್ತು ಉನ್ನತ ಮಟ್ಟದ ಭೌಗೋಳಿಕ ರಾಜಕೀಯ ಅನಿಶ್ಚಿತತೆಗಳು ವಿಶೇಷ ರಾಸಾಯನಿಕ ಕಂಪನಿ ಲ್ಯಾಂಕ್ಸೆಸ್ ಪಾಲಿಗೆ 2025ರ ಹಣಕಾಸು ವರ್ಷದ ಪ್ರಮುಖ ಲಕ್ಷಣಗಳಾಗಿದ್ದವು. 5.673 ಬಿಲಿಯನ್ ಯೂರೋಗಳಲ್ಲಿ, ಆದಾಯವು ಹಿಂದಿನ ವರ್ಷದ 6.366 ಬಿಲಿಯನ್ ಯೋರೋಗಳಿಗಿಂತ 10.9 ಪ್ರತಿಶತದಷ್ಟು ಕಡಿಮೆಯಾಗಿದೆ. ಇಬಿಐಟಿಡಿಎ ಪೂರ್ವ ವಿನಾಯಿತಿಗಳು 16.9 ರಷ್ಟು ಕುಸಿದಿದೆ, ಅಂದರೆ ಕಳೆದ ವರ್ಷದ 614 ಮಿಲಿಯನ್ ಯೂರೋಗಳಿಂದ ಈ ವರ್ಷ 510 ಮಿಲಿಯನ್ ಯೂರೋಗಳಿಗೆ ಇಳಿಕೆಯಾಗಿದೆ. ಪೂರ್ಣ ವರ್ಷದ ಇಬಿಐಟಿಡಿಎ ಮಾರ್ಜಿನ್ ಪೂರ್ವ ವಿನಾಯಿತಿಗಳು 9.0 ಪ್ರತಿಶತದಷ್ಟಿದ್ದು, ಹಿಂದಿನ ವರ್ಷದಲ್ಲಿ ಇದು 9.6 ಪ್ರತಿಶತವಾಗಿತ್ತು.
ಬಹುತೇಕ ಎಲ್ಲಾ ಗ್ರಾಹಕ ಕೈಗಾರಿಕೆಗಳಲ್ಲಿ ನಿರಂತರವಾಗಿ ಕುಸಿದ ಬೇಡಿಕೆ ಮತ್ತು ಅದಕ್ಕೆ ಅನುಗುಣವಾಗಿ ಕಡಿಮೆ ಮಾರಾಟ ಪ್ರಮಾಣಗಳು ಈ ಬೆಳವಣಿಗೆಗೆ ಪ್ರಮುಖ ಕಾರಣವಾಗಿವೆ. ಕಚ್ಚಾ ವಸ್ತುಗಳ ಖರೀದಿ ಬೆಲೆ ಕಡಿಮೆಯಾಗಿರುವುದು ಮತ್ತು ಕೆಲವು ವ್ಯವಹಾರಗಳಲ್ಲಿ ಏಷ್ಯಾ ವಲಯದಿಂದ ಎದುರಾಗುತ್ತಿರುವ ನಿರಂತರ ಬೆಲೆ ಒತ್ತಡವು ಮಾರಾಟದ ಬೆಲೆಗಳ ಕಡಿತಕ್ಕೆ ಕಾರಣವಾಯಿತು. ಅಷ್ಟೇ ಅಲ್ಲದೇ, ಏಪ್ರಿಲ್ 1, 2025 ರಂದು 'ಯುರೆಥೇನ್ ಸಿಸ್ಟಮ್ಸ್' ವ್ಯವಹಾರ ವಿಭಾಗವನ್ನು ಮಾರಾಟ ಮಾಡಿದ ನಂತರ ಅದರಿಂದ ಬರುತ್ತಿದ್ದ ಆದಾಯದ ಕೊರತೆ ಮತ್ತು ಪ್ರತಿಕೂಲ ವಿದೇಶಿ ವಿನಿಮಯ ದರಗಳ ಪರಿಣಾಮದಿಂದಾಗಿ ಕಾರ್ಯನಿರ್ವಹಣಾ ಲಾಭದಲ್ಲಿ ಕುಸಿತ ಕಂಡುಬಂದಿದೆ.
""2025 ಇಡೀ ರಾಸಾಯನಿಕ ಉದ್ಯಮಕ್ಕೆ ಮತ್ತು ಲ್ಯಾಂಕ್ಸೆಸ್‌ಗೆ ಅತ್ಯಂತ ಕಠಿಣ ವರ್ಷವಾಗಿತ್ತು. ವರ್ಷ 2026 ರ ದ್ವಿತೀಯಾರ್ಧದಲ್ಲಿ ಸಾಧ್ಯವಾದಷ್ಟು ಬೇಗ ಉತ್ತೇಜಕ ಪ್ರಗತಿಯ ನಿರೀಕ್ಷೆಯಲ್ಲಿ ನಾವಿದ್ದೇವೆ, ಉದಾಹರಣೆಗೆ ಜರ್ಮನ್ ಸರ್ಕಾರದ ಮೂಲಸೌಕರ್ಯ ಉತ್ತೇಜನಾ ಕಾರ್ಯಕ್ರಮದ ಮೂಲಕ. ಆದ್ದರಿಂದ, 2026 ರ ಸಾಲಿನಲ್ಲಿ ನಮ್ಮ ಪ್ರಮುಖ ಮಾರ್ಗದರ್ಶಿ ತತ್ವವೆಂದರೆ: ನಮ್ಮ ನಿಯಂತ್ರಣದಲ್ಲಿರುವ ವಿಷಯಗಳನ್ನು ನಾವು ನಿಯಂತ್ರಿಸುವುದು. ಅಂದರೆ ವೆಚ್ಚಗಳನ್ನು ಕಡಿತಗೊಳಿಸುವುದು, ಕೆಲಸದ ಪ್ರಕ್ರಿಯೆಗಳನ್ನು ಸರಳಗೊಳಿಸುವುದು ಮತ್ತು ಹೊಸ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವುದನ್ನು ಮುಂದುವರಿಸುವುದು" ಎಂದು ಲ್ಯಾಂಕ್ಸೆಸ್ ಸಿಇಓ ಮ್ಯಾಥಿಯಾಸ್ ಜಚೆರ್ಟ್ ಹೇಳಿದರು.

## ಜಾತ್ರಾ ಮಹೋತ್ಸವ: ಭಕ್ತಿಭಾವದ ಪಲ್ಲಕ್ಕಿ ಉತ್ಸವ

ಕೆಜಿಎಫ್

ತಾಲ್ಲೂಕಿನ ಸುಂದರಪಾಳ್ಯ ಗ್ರಾಮದ ಗ್ರಾಮದೇವತೆ ಶ್ರೀ ಪಾಲಪಟಮ್ಮ ದೇವಿಯ 73ನೇ ವರ್ಷದ ಜಾತ್ರಾ ಮಹೋತ್ಸವವು ಸೋಮವಾರ ಅತ್ಯಂತ ಸಡಗರ ಮತ್ತು ಭಕ್ತಿ ಸೌರಭದೊಂದಿಗೆ ನೆರವೇರಿತು. ಈ ಸಂಭ್ರಮದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆದ ದೇವಿಯ ವೈಭವದ ಪಲ್ಲಕ್ಕಿ ಉತ್ಸವಕ್ಕೆ ಬಲಿಜ ಸಮುದಾಯದ ಮುಖಂಡರು ಸಾಂಪ್ರದಾಯಿಕವಾಗಿ ಚಾಲನೆ ನೀಡಿದರು.

ಜಾತ್ರೆಯ ಪ್ರಯುಕ್ತ ಮುಂಜಾನೆಯಿಂದಲೇ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಅಭಿಷೇಕ, ಪುಷ್ಪಾಲಂಕಾರ ಹಾಗೂ ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದು ಪುನೀತರಾದರು. ಮೆರವಣಿಗೆಯ ಉದ್ದಕ್ಕೂ ಮಂಗಳವಾದ್ಯಗಳ ಘೋಷದ ನಡುವೆ ಭಕ್ತಾದಿಗಳು ದೇವಿಗೆ ಹಣ್ಣು–ಕಾಯಿ ಸಮರ್ಪಿಸಿ ಭಕ್ತಿಭಾವ ಮೆರೆದರು.

ಇದೇ ಸಂದರ್ಭದಲ್ಲಿ ಆರ್ಯ ವೈಶ್ಯ ಮಂಡಳಿ ಹಾಗೂ ಸಮಾಜ ಸೇವಕ ವೆಂಕಟರಾಮ್ ಅವರ ವತಿಯಿಂದ ಭಕ್ತರಿಗೆ ಅನ್ನದಾನ ಹಾಗೂ ಬಿಸಿಲ ಬೇಗೆ ತಣಿಸಲು ಮಜ್ಜಿಗೆ ವಿತರಿಸಲಾಯಿತು. ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಂಬಾಬು ಅವರು ಭಕ್ತಾದಿಗಳಿಗೆ ಲಡ್ಡು ಪ್ರಸಾದ ವಿತರಿಸಿದರು. ವಿಶೇಷವಾಗಿ ಅಣ್ಣಪ್ಪ ಮತ್ತು ಮಕ್ಕಳಾದ ರಂಗಪ್ಪ, ಅವಲಪ್ಪ, ಸುಬ್ರಮಣಿ, ವೆಂಕಟರಾಮಪ್ಪ ಹಾಗೂ ಶ್ರೀನಿವಾಸ್ ಅವರು ಸತತ 25 ನಡೆಸಿಕೊಂಡು ಬರುತ್ತಿದ್ದು, ಈ ಬಾರಿಯೂ ಸಾವಿರಾರು ಜನರಿಗೆ ದಾಸೋಹದ ವ್ಯವಸ್ಥೆ ಕಲ್ಪಿಸಿದ್ದರು. ಆರ್ಯವೈಶ್ಯ ಸಮಿತಿಯ ಚಂದ್ರಯ್ಯ ಶೆಟ್ಟಿ ಕುಟುಂಬ, ಮಿಚೇರ್ ಎಂ.ಸಿ. ಸತ್ಯನಾರಾಯಣ ಶೆಟ್ಟಿ ಕುಟುಂಬದ ಸದಸ್ಯರು ಪ್ರಸಾದ ವಿನಿಯೋಗದ ಉಸ್ತುವಾರಿ ವಹಿಸಿದ್ದರು.

ಈ ಸಂದರ್ಭದಲ್ಲಿ ಪಾಲಪಟಮ್ಮ ಸಮಿತಿಯ ಸದಸ್ಯರಾದ ಲಕ್ಷ್ಮಿನಾರಾಯಣ್ ಶರ್ಮ,ಶ್ರೀರಾಮಪ್ಪ ,ಡಾ. ಶಿವು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ರಮೇಶ್, ಕೆ.ಆರ್. ಪದ್ಮಾಕೃಷ್ಣಮೂರ್ತಿ, ವೆಂಕಟೇಶ್ವರ ಹಾಗೂ ಗ್ರೀನ್ ವುಡ್ಸ್ ಶಾಲೆಯ ಶಿಕ್ಷಕರು ಭಾಗವಹಿಸಿದ್ದರು. ಗ್ರಾಮದ ಮುಖಂಡರಾದ ನಾರಾಯಣಸ್ವಾಮಿ, ಎಸ್. ಆರ್. ಶ್ರೀನಿವಾಸ್, ರಾಮಕೃಷ್ಣ, ಎಸ್.ಕೆ. ಶ್ರೀರಾಮಪ್ಪ, ಶೇಷಗಿರಿ ರಾವ್, ಶ್ರೀಕೃಷ್ಣ, ಗೋಪಾಲ್, ಕೇಶವ, ಚಂದ್ರಪ್ಪ, ಕೃಷ್ಣಮೂರ್ತಿ ಹಾಗೂ ಆರ್ಯವೈಶ್ಯ ಸಮಿತಿಯ ಪದಾಧಿಕಾರಿಗಳು ಮತ್ತು ಕೆಜಿಎಫ್ ತಾಲ್ಲೂಕಿನ ವಿವಿಧ ಗ್ರಾಮಗಳ ನೂರಾರು ಭಕ್ತಾದಿಗಳು ಈ ವೈಭವದ ಜಾತ್ರಾ ಮಹೋತ್ಸವಕ್ಕೆ ಸಾಕ್ಷಿಯಾದರು.

# ದೇವರ ದಾಸಿಮಯ್ಯನವರ ವಚನಗಳಲ್ಲಿ ಮಹಿಳಾ ಸಮಾನತೆಗೆ ಆದ್ಯತೆ

ರಾಮನಗರ

ಮಹಾನ್ ಮಾನವತಾವಾದಿ ಬಸವಣ್ಣನಿಗಿಂತ ಮೊದಲು ವಚನಗಳನ್ನು ರಚಿಸಿದ ಆದ್ಯ ವಚನಕಾರ ದೇವರ ದಾಸಿಮಯ್ಯ, ಅವರು ತಮ್ಮ ವಚನಗಳಲ್ಲಿ ಮಹಿಳಾ ಸಮಾನತೆಯನ್ನು ಬಿಂಬಿಸಿದ್ದಾರೆ ಎಂದು ಜನಪದ ಲೋಕದ ಕ್ಯೂರೇಟರ್ ಡಾ. ರವಿ ಯು. ಎಂ. ಅವರು ಹೇಳಿದರು.

ನಗರದ ಕಂದಾಯ ಭವನದಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಭಾಗವಹಿಸಿ ಮಾತನಾಡಿದರು.

ಆದ್ಯ ವಚನಕಾರರಾದ ದೇವರ ದಾಸಿಮಯ್ಯ ಅವರು ತಮ್ಮ ವಚನಗಳಲ್ಲಿ ಮಹಿಳಾ ಸಮಾನತೆಯನ್ನು ಬಿಂಬಿಸಿದ್ದಾರೆ, ಸಮಾಜದಲ್ಲಿ ಸಮಾನತೆ ಬರಬೇಕಾದರೆ ಮೊದಲು ಮನೆಯಿಂದಲೇ ಆರಂಭವಾಗಬೇಕು ಎನ್ನುವ ಅಭಿಲಾಷೆ ಅವರದ್ದಾಗಿತ್ತು ಎಂದ ಅವರು, 12ನೇ ಶತಮಾನ ವಿಶಿಷ್ಟವಾದ ಕಾಲಘಟ್ಟ. ಸಾಹಿತ್ಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ರಾಂತಿ ನಡೆದ ಕಾಲ. ಧರ್ಮ, ದರ್ಶನ, ಸಾಹಿತ್ಯದ ಹಿನ್ನೆಲೆಯಲ್ಲಿ ಬಸವಾದಿ ಶರಣರ ಜೀವನ ಬಹುಮುಖ್ಯವಾದದ್ದು.



ವಚನ ಸಾಹಿತ್ಯ ಸಮ ಸಮಾಜದ ನಿರ್ಮಾಣ ಮಾಡಿದಂತ ಕಾಲ ದೇವರ ದಾಸಿಮಯ್ಯ ಬಸವಣ್ಣನಿಗಿಂತ ಹಿರಿಯ, ಬಸವಣ್ಣರಿಗಿಂತ ಮೊದಲು ವಚನ ರಚನೆ ಮಾಡಿದ ಆದ್ಯ ವಚನಕಾರ. ದಾಸಿಮಯ್ಯ ಇವರ ವಚನಗಳಲ್ಲಿ ಮುಖ್ಯವಾಗಿ ಸಂಕ್ಷಿಪ್ತತೆ, ಸರಳತೆ, ಅರ್ಥ ಪ್ರಖರತೆ ಇದೆ ಎಂದ ಅವರು ತನ್ನ ಮಡದಿ ಬಗ್ಗೆ ಅಪಾರ ಗೌರವ ಹೊಂದಿದ್ದ ದೇವರ ದಾಸಿಮಯ್ಯ ದುಗ್ಗಳೆಯಂತಹ ಸತಿ ಇದ್ದರೆ: ಸಂಸಾರ ಲೇಸು, ಇಲ್ಲದಿದ್ದರೆ ಸನ್ಯಾಸ ಲೇಸು ಎಂದು ಹೇಳಿದ್ದಾರೆ ಎಂದರು.

ಪತ್ನಿ ದುಗ್ಗಳೆಯ ಪ್ರೀತಿ ಸಂಸಾರದ ನಿರ್ವಹಣೆ ಬಗ್ಗೆ ವಚನ ಬರೆದಿದ್ದಾರೆ. ಲಭ್ಯ ಇರುವ ಅವರ 176 ವಚನಗಳು ಮಾನವ ಕುಲಕ್ಕೆ ಒಳ್ಳೆಯದಾಗಲಿ, ಸತ್ಯದ ದಾರಿಯಲ್ಲಿ ನಡೆಯಲಿ, ಹಿರಿಯರು ಅಂದರೆ ಶರಣರು ಮನೆಯಲ್ಲಿರಬೇಕು.

ಶರಣರ ನುಡಿಗಳನ್ನು ಕೇಳಬೇಕು ಸನ್ಮಾರ್ಗದಲ್ಲಿ ನಡೆಯಬೇಕು. ನಡೆ ನುಡಿ ಒಂದೇ ಆಗಿರಬೇಕು. ಸತ್ಯ ನುಡಿಬೇಕು, ಕಾಯಕ ನಿಷ್ಠೆ ಇರಬೇಕು ಎಂದಿದ್ದಾರೆ. ಸತ್ಯ ನುಡಿಯದೆ ಭಕ್ತಿ ಇಲ್ಲದೆ ಹರಿವ ನದಿಯಲ್ಲಿ ಮುಳುಗಿದರೆ ಶಿವ ಮುಕ್ತಿ ಕೊಡಲಾರ. ವ್ಯಾಪಾರಿಯೊಬ್ಬ ಸುಂಕಕ್ಕೆ ಅಂಜಿ ರಾತ್ರಿ ಕಾಣದೆ ಹರಿದ ಗೋಣಿಗೆ ಸಂಪತ್ತು ತುಂಬಿ ರಾತ್ರಿಎಲ್ಲಾ ನಡೆದು ಸೇರಬೇಕಾದ ಸ್ಥಳ ಸೇರುವುದರೊಳಗೆ ಗೋಣಿ ಚೀಲ ಬರಿದಾಗಿತ್ತು ಎನ್ನುವ ವಚನ ಮಾರ್ಮಿಕವಾಗಿದೆ. ಆತ್ಮ ಸಂವಾದ, ಲೋಕ ಸಂವಾದ, ದೈವ ಸಂವಾದ ಕುರಿತು ನುಡಿದಿದ್ದಾರೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸತೀಶ್ ಅವರು ಮಾತನಾಡಿ, ನೇಕಾರರ ಸಮುದಯದವರು ಸರ್ಕಾರದ ಸವಲತ್ತುಗಳನ್ನು ಸದುಪಯೋಗಪಡೆದ ುಕೊಳ್ಳಬೇಕು, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ರಾಮನಗರ ಚನ್ನಪಟ್ಟಣದ ನೇಕಾರರ ಸಂಘದ ಅಧ್ಯಕ್ಷರಾದ ವರದರಾಜು, ಕಾರ್ಯದರ್ಶಿ ಪವನ್ ಕುಮಾರ್, ಖಜಾಂಚಿ ಗಿರೀಶ್ ಕುಮಾರ್, ಗೌರವಾಧ್ಯಕ್ಷರಾದ ಅಣ್ಣಯ್ಯಪ್ಪ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ನಾಗೇಂದ್ರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮುದಾಯದ ಮುಖಂಡರುಗಳು ಉಪಸ್ಥಿತರಿದ್ದರು.

# ಮೇ ಮಾಹೆಯಲ್ಲಿ ಮತ್ತೆ ಹೂಳೆತ್ತಲು ಸಿದ್ಧತೆ: ಡಾ.ಪುರುಷೋತ್ತಮಗೌಡ

ಬಳ್ಳಾರಿ

ಕರ್ನಾಟಕಾಂಧ್ರ ತೆಲಂಗಾಣ ರಾಜ್ಯಗಳ 9ಜಿಲ್ಲೆಗಳ ಜೀವನಾಡಿಯಾಗಿರುವ ತುಂಗ ಭದ್ರಾ ಜಲಾಶಯದಲ್ಲಿ 30 ಟಿಎಂಸಿಗೂ ಅಧಿಕ ಹೂಳು ತುಂಬಿಕೊಂಡಿದ್ದು, ಮೇ ಮಾಹೆಯಿಂದ ಮತ್ತೊಮ್ಮೆ ಹೂಳೆತ್ತಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ತುಂಗಭದ್ರಾ ರೈತ ಸಂಘದ ಅಧ್ಯಕ್ಷ ಡಾ.ಪುರುಷೋತ್ತಮಗೌಡ ತಿಳಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಕುರಿತಂತೆ 9 ಜಿಲ್ಲೆಗಳ ಎಲ್ಲ ಮಠಾಧೀಶರ ಸಾನಿಧ್ಯದೊಂದಿಗೆ ರೈತ, ನಾಗರಿಕ ಸಂಘಟನೆಗಳು, ಎಲ್ಲ ಜನಪ್ರತಿನಿಧಿಗಳ ಸಹಭಾಗಿತ್ವದಲ್ಲಿ ಹೂಳೆತ್ತಲು ಯೋಜನೆ ಹಾಕಿಕೊಳ್ಳಲಾಗಿದೆ. 2017ರ ವೇಳೆ ತುಂಗಭದ್ರಾ ಜಲಾಶಯದಲ್ಲಿ 30 ದಿನಗಳವರೆಗೆ ಹೂಳೆತ್ತುವ ಕಾರ್ಯವನ್ನು ರೈತರಿಂದಲೇ ಆರಂಭಿಸಲಾಗಿತ್ತು. ಆಗ 80 ಟ್ರ್ಯಾಕ್ಟ್ರಗಳು, 4 ಜೆಸಿಬಿ ಯಂತ್ರಗಳು ಹಾಗೂ 1 ಹಿಟಾಚಿ ನೆರವಿನಿಂದ ರೈತರು, ಪರಿಸರ ಪ್ರೇಮಿಗಳು, ಸಮಾಜಸೇವಕರು ಉಚಿತವಾಗಿ ಶ್ರಮದಾನ ಮಾಡಿದ್ದರು. ಪ್ರತಿದಿನ ರೂ. 90 ಸಾವಿರ ರೂಪಾಯಿಗಳ ಡೀಸೆಲ್ ಖರ್ಚು ಮತ್ತು ಹೂಳೆತ್ತುವ ಅವಧಿವರೆಗೂ ದಾಸೋಹ ವ್ಯವಸ್ಥೆ ನಡೆದಿತ್ತು. ಪೂಜ್ಯ ಸ್ವಾಮೀಜಿಗಳು, ಜನಪ್ರತಿನಿಧಿಗಳು, ಅನೇಕ ಸಂಘ-ಸಂಸ್ಥೆಗಳು, ರೈತರು, ಸಮಾಜಸೇವಕರಿಂದ ರೂ. 30 ಲಕ್ಷ ರೂಪಾಯಿಗಳ ದೇಣಿಗೆ ಸಂಗ್ರಹಿಸಲಾಗಿತ್ತು ಎಂದು ಮಾಹಿತಿ ನೀಡಿದರು.



ಬಳ್ಳಾರಿಯ ಬಸವ ಭವನದಲ್ಲಿ ಆಗ ಪೂಜ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ಸಭೆ ಕರೆದು ದೇಣಿಗೆ ನೀಡಿರುವ ದಾನಿಗಳ ವಿವರದೊಂದಿಗೆ ಹಣ ಹಾಗೂ ಸಂಪೂರ್ಣ ಖರ್ಚಿನ ಲೆಕ್ಕಪತ್ರದ ಪ್ರತಿಗಳನ್ನು ಪತ್ರಕರ್ತರ ಸಮ್ಮುಖದಲ್ಲಿ ರೈತರಿಗೆ ಹಾಗೂ ದಾನಿಗಳಿಗೆ ಹಂಚಲಾಗಿತ್ತು. ಆದರೆ ರಾಜ್ಯ ಘಟಕದವರು ರೂ.70 ಲಕ್ಷ ರೂಪಾಯಿಗಳು ಹಣ ಬಂದಿದೆ ಎಂದು ಸುಳ್ಳು ಆರೋಪ ಮಾಡಿ, ಸಂಘಟನೆಯಿಂದ ಉಚ್ಛಾಟಿಸಿದ್ದರು. ಇಲ್ಲಿಯವರೆಗೂ ಆಪಾದನೆ ಸಾಬೀತು ಮಾಡಲಿಲ. ತಾವೂ ಮುಂದುವರಿದು ಕೆಲಸ ಮಾಡಲಿಲ್ಲ, ನಮ್ಮನ್ನು ಮಾಡಲು ಬಿಡಲಿಲ್ಲ. ರೈತ ಸಂಘಟನೆಗಳಿಂದಲೇ ರೈತರಿಗೆ ಅನ್ಯಾಯವಾಗುತ್ತಿರುವುದು ಸರಿಯೇ? ಎಂದು ಪ್ರಶ್ನಿಸಿದರು.

ಹೂಳೆತ್ತಲು ಆಗುವುದಿಲ್ಲ ಎಂದು ಪರ್ಯಾಯ ಜಲಾಶಯ ನಿರ್ಮಾಣದ ವಿಷಯ ತಿಳಿಸಿ ರೈತರನ್ನು ಸಮಾಧಾನಪಡಿಸಿದ್ದ ಸರ್ಕಾರಗಳೇ ಮೌನ ವಹಿಸಿವೆ. ಇದುವರೆಗೂ ಆಂಧ್ರ ಮತ್ತು ತೆಲಂಗಾಣದವರಿಂದ ಒಂದು ಮಾತನಾಡಿಲ್ಲ. ನಮ್ಮ ಪಾಲಿನ ನೀರು ನಾವು ಶೇಖರಣೆಗೊಳಿಸಿದರೆ, ಅವರ ಪಾಲಿನ ನೀರನ್ನು ಅವರು ತೆಗೆದುಕೊಂಡು ಹೋಗಲು ನಿರ್ಧರಿಸುತ್ತಾರೆ. ಹೂಳೆತ್ತುವ ಕುರಿತಂತೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಜಲಾಶಯ ವ್ಯಾಪ್ತಿಯ ಎಲ್ಲ ಜಿಲ್ಲೆಗಳ ಉಸ್ತುವಾರಿ ಸಚಿವರು, ಆಂಧ್ರ-ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸುವುದಾಗಿ ತಿಳಿಸಿದರು.

ಗಂಗಾವತಿ ನವಿಲೆ ಜಲಾಶಯಕ್ಕೆ ಮುಳುಗಡೆಯಾಗುವ 9 ಹಳ್ಳಿಗಳ ರೈತರ ಸ್ಥಳಾಂತರ, ಪರ್ಯಾಯ ಜಮೀನು, ಹಣಕಾಸು, ರಾಜ್ಯಗಳ ಒಪ್ಪಂದ, ಕೇಂದ್ರದ ಒಪ್ಪಿಗೆ, ಇವುಗಳಿಗೆಲ್ಲ 25 ವರ್ಷಗಳೇ ಬೇಕಾಗುತ್ತದೆ. ಅಲ್ಲಿವರೆಗೂ ರೈತರ ಪರಿಸ್ಥಿತಿಯನ್ನು ಅರಿತುಕೊಳ್ಳಬೇಕಾಗಿದೆ. ಪ್ರತಿ ವರ್ಷ ಅರ್ಧ ಟಿಎಂಸಿ ಹೂಳು ತುಂಬುತ್ತಾ ಬರುತ್ತಿರುವ ತುಂಗಭದ್ರಾ ಜಲಾಶಯದಿಂದ ಹಿನ್ನೀರಿನ ರೈತರ ಪರಿಸ್ಥಿತಿಗಳೇನು? ಎನ್ನುವುದನ್ನೂ ಈ ಸಂದರ್ಭದಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ.

ಜಿಲ್ಲೆಯಲ್ಲಿರುವ ಕೈಗಾರಿಕೆಗಳು ಹೂಳೆತ್ತಲು ಯಾಂತ್ರಿಕ ನೆರವು ನೀಡಬೇಕು. ಬಳ್ಳಾರಿಯ ಕೊಳಗಲ್ಲು ಗ್ರಾಮದ ಬಳಿಯ ನೂರಾರು ಎಕರೆ ಪ್ರದೇಶದಲ್ಲಿ ಈ ಹಿಂದಿನ ಜನಪ್ರತಿನಿಧಿಗಳು ಕೆರೆ ನಿರ್ಮಾಣ ಮಾಡುವ ಉದ್ದೇಶ ಹೊಂದಿದ್ದರು. ಭವಿಷ್ಯದ 50 ವರ್ಷಗಳ ಹಿತದೃಷ್ಟಿಯಿಂದ ಕೆರೆ ನಿರ್ಮಾಣ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಮೇ ಮಾಹೆಯಲ್ಲಿ ಹಮ್ಮಿಕೊಂಡಿರುವ ತುಂಗಭದ್ರಾ ಹೂಳೆತ್ತುವ ಜಾತ್ರೆಗೆ ಹಳ್ಳಿ ಹಳ್ಳಿಗಳಿಂದ ರೈತರು ಟ್ರ್ಯಾಕ್ಟರ್ ಸಮೇತ ಆಗಮಿಸಿ ಬೆಂಬಲಿಸಬೇಕಿದೆ. ಈ ಬಾರಿಯ ಹೂಳೆತ್ತುವ ಕಾರ್ಯಕ್ರಮ ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಕೇಂದ್ರ ಸರ್ಕಾರಗಳಿಗೆ ಎಚ್ಚರಿಕೆಯಾಗಲಿದೆ. ಪೂಜ್ಯ ಸ್ವಾಮೀಜಿಗಳವರು, ನೀರಾವರಿ ತಜ್ಞರ, ತುಂಗಭದ್ರಾ ಜಲಾಶಯದ ನಿವೃತ್ತ ಅಭಿಯಂತರರ, ಅನೇಕ ಸಂಘ-ಸಂಸ್ಥೆಗಳ ಮತ್ತು ರೈತರ ಒತ್ತಾಯದ ಮೇರೆಗೆ ಮೇ ತಿಂಗಳಲ್ಲಿ ತುಂಗಭದ್ರ ಹೂಳಿನ ಜಾತ್ರೆಯನ್ನು ಮಾಡಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ತುಂಗಭದ್ರ ರೈತ ಸಂಘದ ಪದಾಧಿಕಾರಿಗಳಾದ ಶ್ರೀಧರಗಡ್ಡೆ ವೀರನಗೌಡ, ಎಂ. ವೀರಭದ್ರ ನಾಯಕ್, ಕೊಂಚಿಗೇರಿ ಗೋವಿಂದಪ್ಪ, ಜಾಲಿಹಾಳ ಶ್ರೀಧರ್ ಗೌಡ, ಕುರುಬರ ಆಗಲೂರಪ್ಪ, ಕಗ್ಗಲ್ ಮಲ್ಲಾರೆಡ್ಡಿ, ಶಿವಶಂಕರಗೌಡ, ಕೆಂಪಣ್ಣನವರ ವೀರೇಶ್ ನಾಯಕ್ ಇನ್ನಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ಸ್ಥಳೀಯ ಚುನಾವಣೆಗಳಿಗೆ ಈಗಲೇ ಸಜ್ಜಾಗಿ: ಸುಧಾಕರ್



ವಿಜಯಪುರ

"ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಬೇಕು. ಇದಕ್ಕಾಗಿ ಸ್ಥಳೀಯ ಮಟ್ಟದಲ್ಲಿ ಪಕ್ಷದ ಸಂಘಟನೆ ಅತ್ಯಂತ ಸದೃಢವಾಗಬೇಕು," ಎಂದು ಸಂಸದ ಡಾ. ಕೆ. ಸುಧಾಕರ್ ಕರೆ ನೀಡಿದರು.

ವಿಜಯಪುರ ಟೌನ್ ಬಿಜೆಪಿ ಅಧ್ಯಕ್ಷ ವೆಂಕಟೇಶ್ ಪ್ರಭು ಅವರ ನೇತೃತ್ವದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಒಗ್ಗಟ್ಟಿನ ಮಂತ್ರ; ಕಾಂಗ್ರೆಸ್ ವಿರುದ್ಧ ವಾಗ್ದಾಳಿ: ಪಕ್ಷ ಕಟ್ಟುವಲ್ಲಿ ಪ್ರತಿಯೊಬ್ಬ ಕಾರ್ಯಕರ್ತನ ಪಾತ್ರ ಮಹತ್ತರವಾದುದು ಎಂದು ತಿಳಿಸಿದ ಸಂಸದರು, "ರಾಜ್ಯದ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಜನರು ಈಗಾಗಲೇ ಬೇಸತ್ತಿದ್ದಾರೆ. ಅವರು ಬೀಗುತ್ತಿರುವ ಗ್ಯಾರಂಟಿ ಯೋಜನೆಗಳೇ ಮುಂಬರುವ ದಿನಗಳಲ್ಲಿ ಅವರಿಗೆ ಮುಳುವಾಗಲಿವೆ. ಹಿಂದೆ ಬಿಜೆಪಿ ಸರ್ಕಾರ ನೀಡಿದ್ದ ಜನಪರ ಯೋಜನೆಗಳನ್ನು ಜನರು ಇಂದಿಗೂ ಸ್ಮರಿಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು," ಎಂದರು.

ಮೋದಿಯವರ ಕಾರ್ಯವೈಖರಿಗೆ ಜಾಗತಿಕ ಮನ್ನಣೆ: ಅಂತರಾಷ್ಟ್ರೀಯ ಮಟ್ಟದ ಇರಾನ್-ಇಸ್ರೇಲ್ ಸಂಘರ್ಷದ ಕುರಿತು ಮಾತನಾಡಿದ ಅವರು, "ಇಂತಹ ಕಠಿಣ ಸನ್ನಿವೇಶವನ್ನೂ ಪ್ರಧಾನಿ ನರೇಂದ್ರ ಮೋದಿಯವರು ಸೂಕ್ಷ್ಮವಾಗಿ ಗಮನಿಸುತ್ತಾ ದೇಶವನ್ನು ಸುಭದ್ರವಾಗಿ ಮುನ್ನಡೆಸುತ್ತಿದ್ದಾರೆ. ಇರಾನ್ ದೇಶವು ಹಾರ್ಮೂಜ್ ಜಲಮಾರ್ಗವನ್ನು ಭಾರತಕ್ಕೆ ಮುಕ್ತವಾಗಿಟ್ಟಿರುವುದು ಮೋದಿಯವರ ರಾಜತಾಂತ್ರಿಕ ವಿಜಯಕ್ಕೆ ಸಾಕ್ಷಿ," ಎಂದು ಬಣ್ಣಿಸಿದರು.

ಸಿಲಿಂಡರ್ ಅಭಾವಕ್ಕೆ ಶೀಘ್ರ ಮುಕ್ತಿ: ಪ್ರಸ್ತುತ ಎದುರಾಗಿರುವ ವಾಣಿಜ್ಯ ಸಿಲಿಂಡರ್ ಕೊರತೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, "ಈಗಾಗಲೇ ಪ್ರಧಾನಿಯವರು ತಮ್ಮ ಸಂಪುಟ ಸಹೋದ್ಯೋಗಿಗಳೊಂದಿಗೆ ಈ ಕುರಿತು ಚರ್ಚೆ ನಡೆಸಿದ್ದಾರೆ. ಪೂರೈಕೆಯಲ್ಲಿನ ವ್ಯತ್ಯಯವನ್ನು ಸರಿಪಡಿಸಿ ಶೀಘ್ರವಾಗಿ ಸಮಸ್ಯೆ ಬಗೆಹರಿಸಲಾಗುವುದು," ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಟೌನ್ ಬಿಜೆಪಿ ಅಧ್ಯಕ್ಷ ವೆಂಕಟೇಶ್ ಪ್ರಭು, ಕಾರ್ಯದರ್ಶಿ ರಾಜಪ್ಪ, ತಾಲ್ಲೂಕು ಉಪಾಧ್ಯಕ್ಷ ರಾಮು ಭಗವಾನ್, ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಮುಖಂಡ ಆರ್. ಕೆ. ನಂಜೇಗೌಡ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಹಾಜರಿದ್ದರು.

# ರಾಮನಾಥ ಅಂಕಿತದಲ್ಲಿ ಸಾಮಾಜಿಕ ಅರಿವು ಮೂಡಿಸಿದ ದಾಸಿಮಯ್ಯ: ಎಡಿಸಿ

ಚಿಕ್ಕಬಳ್ಳಾಪುರ

"11ನೇ ಶತಮಾನದ ಆದಿಕವಿ, ಪ್ರಥಮ ವಚನಕಾರ ಶ್ರೀ ದೇವರ ದಾಸಿಮಯ್ಯನವರು ತಮ್ಮ ನೇಯ್ಗೆ ವೃತ್ತಿಯ ಕಾಯಕದ ಅನುಭವಗಳನ್ನೇ ಸಾರವಾಗಿಸಿಕೊಂಡು ವಚನಗಳನ್ನು ರಚಿಸುವ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ," ಎಂದು ಅಪರ ಜಿಲ್ಲಾಧಿಕಾರಿ ಡಾ. ಭಾಸ್ಕರ್ ತಿಳಿಸಿದರು.

ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 'ಶ್ರೀ ದೇವರ ದಾಸಿಮಯ್ಯ ಜಯಂತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ದಾಸಿಮಯ್ಯನವರು ಅಂದಿನ ಕಾಲದ ಮೇಲು-ಕೀಳು, ಹೆಣ್ಣು-ಗಂಡು ಎಂಬ ಭೇದಭಾವಗಳನ್ನು ವಿರೋಧಿಸಿ ಸಾಮಾಜಿಕ ವ್ಯವಸ್ಥೆಯ ಅನ್ಯಾಯಗಳನ್ನು ಖಂಡಿಸಿದವರು. "ವಚನಕಾರರು ಮಹಿಳೆಯರು ಮತ್ತು ಪುರುಷರನ್ನು ಸಮಾನವಾಗಿ ಕಾಣುತ್ತಿದ್ದರು. ದಾಸಿಮಯ್ಯನವರು ಅಸಂಖ್ಯಾತ ವಚನಗಳನ್ನು ರಚಿಸಿದ್ದು, ನಮಗೆ ಲಭ್ಯವಿರುವುದು ಕೇವಲ 176 ಮಾತ್ರ. ಅವರ ಪ್ರತಿಯೊಂದು ವಚನವೂ ಮನುಷ್ಯನ ಜೀವನದ ದಿಕ್ಕನ್ನೇ ಬದಲಿಸುವ ಶಕ್ತಿ ಹೊಂದಿದೆ," ಎಂದು ಎಡಿಸಿ ಅಭಿಪ್ರಾಯಪಟ್ಟರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ನಿವೃತ್ತ ಸಹ ಪ್ರಾಧ್ಯಾಪಕ ಆರ್.ವಿ. ಶಶಿಧರ್ ಮಾತನಾಡಿ, "ದಾಸಿಮಯ್ಯನವರು ಯಾದಗಿರಿ ಜಿಲ್ಲೆಯ ಕೆಂಭಾವಿ ತಾಲ್ಲೂಕಿನ ಮುದೆನೂರು ಗ್ರಾಮದಲ್ಲಿ ಜನಿಸಿದವರು. ಶ್ರೀಶೈಲದಲ್ಲಿ ಶಿವಾನುಭವ ಪಡೆದ ಇವರು, ತಮ್ಮ ಮನೆತನದ ಆರಾಧ್ಯ ದೈವ 'ರಾಮನಾಥ' ಎನ್ನುವುದನ್ನೇ ವಚನಗಳ ಅಂಕಿತನಾಮವನ್ನಾಗಿ ಮಾಡಿಕೊಂಡಿದ್ದರು. ವಸ್ತ್ರಗಳನ್ನು ನೇಯುವ ಕಾಯಕದ ಮೂಲಕವೇ ಗುರು, ಲಿಂಗ, ಜಂಗಮ ಆರಾಧನೆ ಮಾಡಿದರು," ಎಂದು ಅವರ ಜೀವನ ಚರಿತ್ರೆಯನ್ನು ವಿವರಿಸಿದರು.

ಇದೇ ಸಂದರ್ಭದಲ್ಲಿ ಸಮುದಾಯದ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಜಿಲ್ಲಾಡಳಿತದ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಕೈಮಗ್ಗ ನೇಕಾರರ ಮಹಾಮಂಡಳಿ ಅಧ್ಯಕ್ಷ ಬಿ.ಜೆ. ಗಣೇಶ್, ರಾಜ್ಯ ನೇಕಾರರ ಒಕ್ಕೂಟದ ಅಧ್ಯಕ್ಷ ಗುಡಿಬಂಡೆ ನಾಗರಾಜ್, ಉಪವಿಭಾಗಾಧಿಕಾರಿ ಡಿ.ಎಚ್. ಅಶ್ವಿನ್, ಜಿಲ್ಲಾ ನೇಕಾರರ ಒಕ್ಕೂಟದ ಅಧ್ಯಕ್ಷ ಎಚ್.ಕೆ. ಲಕ್ಷ್ಮೀಪತಿ, ಮುಖಂಡರಾದ ಕುಷ್ ಕುಮಾರ್, ಮಂಜುನಾಥ್, ವೇಣುಗೋಪಾಲ್ ಸೇರಿದಂತೆ ಸಮುದಾಯದ ಅನೇಕ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಅವೈಜ್ಞಾನಿಕ ಹೆದ್ದಾರಿ ಕಾಮಗಾರಿಗೆ ರೈತರು ಬಲಿ



ಕುಣಿಗಲ್

ತಾಲ್ಲೂಕಿನ ಕಸಬಾ ಹೋಬಳಿಯ ಹೇರೂರು ಲಕ್ಷ್ಮೀದೇವಿ ಹಂತದ ಬಳಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75ರ ಬೈಪಾಸ್ ರಸ್ತೆಯ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಸುಮಾರು 300 ಎಕರೆ ಕೃಷಿ ಭೂಮಿ ಸಂಪೂರ್ಣವಾಗಿ ಜಲಾವೃತಗೊಂಡಿದೆ. ಇದರಿಂದ ಕಂಗೆಟ್ಟಿರುವ ರೈತರು ಕರ್ನಾಟಕ ರಾಜ್ಯ ರೈತ ಸಂಘದ (ರೈತ ಪರ್ವ) ಜಿಲ್ಲಾಧ್ಯಕ್ಷ ಮುನಿಯಪ್ಪ ನೇತೃತ್ವದಲ್ಲಿ ಸ್ಥಳದಲ್ಲಿಯೇ ಬೃಹತ್ ಪ್ರತಿಭಟನೆ ನಡೆಸಿದರು.

ಮಳೆಗಾಲದಲ್ಲಿ ಕುಣಿಗಲ್ ದೊಡ್ಡ ಕೆರೆ, ಚಿಕ್ಕ ಕೆರೆ ಹಾಗೂ ಬೇಗೂರು ಕೆರೆಯ ನೀರು ಈ ಭಾಗಕ್ಕೆ ಹರಿದು ಬರುತ್ತದೆ. ಆದರೆ ಹೆದ್ದಾರಿ ಪ್ರಾಧಿಕಾರವು ನೀರು ಸರಾಗವಾಗಿ ಹರಿಯಲು ಸೂಕ್ತ ಕಲ್ವರ್ಟ್ ಹಾಗೂ ನಾಲೆಗಳನ್ನು ನಿರ್ಮಿಸದ ಕಾರಣ, ನೀರು ಕೃಷಿ ಭೂಮಿಗೆ ನುಗ್ಗುತ್ತಿದೆ. ಇದರಿಂದ ಫಲವತ್ತಾದ ಅಡಿಕೆ, ತೆಂಗು, ಬಾಳೆ, ಭತ್ತ ಹಾಗೂ ರಾಗಿ ಬೆಳೆಗಳು ನೀರು ಪಾಲಾಗುತ್ತಿವೆ. ವರ್ಷದಲ್ಲಿ ಎಂಟು ತಿಂಗಳು ನೀರು ನಿಲ್ಲುವುದರಿಂದ ರೈತರು ಆರ್ಥಿಕವಾಗಿ ಹೈರಾಣಾಗಿದ್ದಾರೆ.

ಹೆದ್ದಾರಿಯ ಸರ್ವೀಸ್ ರಸ್ತೆಯ ಮೇಲೂ ನೀರು ಹರಿಯುತ್ತಿರುವುದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗಿದೆ. "ಈ ಬಗ್ಗೆ ಈಗಾಗಲೇ ಹೇಮಾವತಿ ಇಲಾಖೆ, ಲೋಕೋಪಯೋಗಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹತ್ತಾರು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳು ರೈತರ ನೋವಿಗೆ ಸ್ಪಂದಿಸುತ್ತಿಲ್ಲ," ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ವರ್ಷ ಸಂಸದರಾದ ಸಿ.ಎನ್. ಮಂಜುನಾಥ್ ಹಾಗೂ ಹೆದ್ದಾರಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಅಂಡರ್ ಪಾಸ್ ನಿರ್ಮಾಣ ಮತ್ತು ನಾಲೆಗಳ ದುರಸ್ತಿಯ ಭರವಸೆ ನೀಡಿದ್ದರು. ಆದರೆ ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ನಮ್ಮ ಜಮೀನುಗಳಲ್ಲಿ ನೀರು ನಿಲ್ಲದಂತೆ ವೈಜ್ಞಾನಿಕವಾಗಿ ತೂಪುಗಳ ಸೇತುವೆ ನಿರ್ಮಿಸಿಕೊಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ನಿರಂತರ ನೀರು ನಿಲ್ಲುವುದರಿಂದ ರೈತರು ಮತ್ತು ಪಶುಗಳು ಅನಿವಾರ್ಯವಾಗಿ ಹೆದ್ದಾರಿಯನ್ನು ದಾಟಬೇಕಾಗುತ್ತಿದೆ. ಇದು ಭೀಕರ ಅಪಘಾತಗಳಿಗೆ ಆಹ್ವಾನ ನೀಡುವಂತಿದೆ. ಕೂಡಲೇ ಅಧಿಕಾರಿಗಳು ಎಚ್ಚೆತ್ತು ನಾಲೆಗಳನ್ನು ಅಗಲೀಕರಣ ಮಾಡಿ ರೈತರ ನೆರವಿಗೆ ಧಾವಿಸಬೇಕೆಂದು ಒತ್ತಾಯಿಸಲಾಯಿತು.

ರೈತ ಪರ್ವ ಉಪಾಧ್ಯಕ್ಷ ಮೊಹಮ್ಮದ್ ಇರ್ಫಾನ್ ಅಲಿ, ಮುಖಂಡರಾದ ಉಮಾಶಂಕರ್, ಪುಟ್ಟರೇವಣ್ಣ ಲಾಳಾಪುರ, ವೆಂಕಟೇಶ್ ಹೇರೂರು, ಅಬ್ದುಲ್ ತಾಯಕ್, ತಿಮ್ಮಯ್ಯ, ಟಿ.ಎನ್. ನರಸಿಂಹಮೂರ್ತಿ, ಶಿವಣ್ಣ, ಜೈಕುಮಾರ್ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

# ಸಂಸ್ಕಾರವಂತ ನಾಗರಿಕರಿಂದ ಮಾತ್ರ ದೇಶದ ಏಳಿಗೆ ಸಾಧ್ಯ: ಸಿದ್ದಗಂಗಾ ಶ್ರೀ

ವಿಜಯಪುರ

"ಇಂದಿನ ಸಮಾಜದಲ್ಲಿ ಮಕ್ಕಳು ಕೇವಲ ಉನ್ನತ ಶಿಕ್ಷಣ ಪಡೆದು ಪ್ರಮಾಣಪತ್ರಗಳನ್ನು ಗಳಿಸಿದರೆ ಸಾಲದು. ಅವರು ಸಂಸ್ಕಾರವಂತ ನಾಗರಿಕರಾದಾಗ ಮಾತ್ರ ದೇಶದ ಏಳಿಗೆ ಸಾಧ್ಯ," ಎಂದು ಸಿದ್ದಗಂಗಾ ಮಠಾಧ್ಯಕ್ಷ ಶ್ರೀ ಸಿದ್ದಲಿಂಗ ಸ್ವಾಮೀಜಿ ನುಡಿದರು.

ಪಟ್ಟಣದ ಬಸವೇಶ್ವರ ಬಡಾವಣೆಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಚ್.ಎಸ್. ರುದ್ರೇಶ್ ಮೂರ್ತಿ ಅವರ ನಿವಾಸದಲ್ಲಿ ಆಯೋಜಿಸಲಾಗಿದ್ದ ಶಿವಪೂಜಾ ಕಾರ್ಯಕ್ರಮ ಹಾಗೂ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ವಿದ್ಯೆಯ ಜೊತೆಗೆ ವಿನಯ ಅಗತ್ಯ: ನಡೆದಾಡುವ ದೇವರು ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರನ್ನು ಸ್ಮರಿಸಿದ ಶ್ರೀಗಳು, "ಲಕ್ಷಾಂತರ ಬಡಮಕ್ಕಳಿಗೆ ಅಕ್ಷರ, ಅನ್ನ ಮತ್ತು ಆಶ್ರಯ ನೀಡುವ ಮೂಲಕ ಅವರು ಬದುಕಿಗೆ ಬೆಳಕಾದರು. ಅವರ ಆಶಯದಂತೆ ಪ್ರತಿಯೊಂದು ಮಗುವೂ ವಿದ್ಯಾವಂತನಾಗಬೇಕು. ಶಿಕ್ಷಣದ ಜೊತೆಗೆ ವಿನಯ ಮತ್ತು ಸಂಸ್ಕಾರವನ್ನು ಮೈಗೂಡಿಸಿಕೊಂಡಾಗ ಮಾತ್ರ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣವಾಗಲು ಸಾಧ್ಯ," ಎಂದರು.



ಗ್ರಾಮೀಣ ಶಿಕ್ಷಣಕ್ಕೆ ಒತ್ತು: ಹೊನ್ನಮ್ಮಗವಿ ಮಠಾಧ್ಯಕ್ಷ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, "ಗ್ರಾಮೀಣ ಭಾಗದ ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿಯಬಾರದು. ಹಳ್ಳಿಗಳಲ್ಲಿ ಉತ್ತಮ ಶಿಕ್ಷಣ ವ್ಯವಸ್ಥೆ ಮತ್ತು ಶರಣರ ತತ್ವ ಸಿದ್ಧಾಂತಗಳನ್ನು ಪ್ರಸರಿಸುವ ಕೆಲಸವಾಗಬೇಕು. ಅಕ್ಷರಸ್ಥ ಸಮಾಜವೇ ಬಲಿಷ್ಠ ರಾಷ್ಟ್ರಕ್ಕೆ ಬುನಾದಿ," ಎಂದು ತಿಳಿಸಿದರು.

ಮೌಲ್ಯಾಧಾರಿತ ಶಿಕ್ಷಣದ ಅನಿವಾರ್ಯತೆ: ಆತಿಥೇಯರಾದ ಎಚ್.ಎಸ್. ರುದ್ರೇಶ್ ಮೂರ್ತಿ ಮಾತನಾಡಿ, "ಶರಣ ಸಾಹಿತ್ಯ ಮತ್ತು ಮೌಲ್ಯಾಧಾರಿತ ಶಿಕ್ಷಣವು ಇಂದಿನ ತಲೆಮಾರಿಗೆ ಅತ್ಯಗತ್ಯವಾಗಿದೆ. ನಮ್ಮ ಪರಂಪರೆಯ ಗುರು-ಲಿಂಗ-ಜಂಗಮ ಸಂಸ್ಕೃತಿಯನ್ನು ಯುವ ಪೀಳಿಗೆಗೆ ದಾಟಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ," ಎಂದರು.

ಕಾರ್ಯಕ್ರಮದಲ್ಲಿ ಅರಿವಿನ ಮನೆಯ ಸದಸ್ಯರಿಂದ ಅರ್ಥಪೂರ್ಣ ವಚನ ಗಾಯನ ನಡೆಯಿತು. ವೇದಿಕೆಯಲ್ಲಿ ಜಿಲ್ಲಾ ಶಸಾಪ ಅಧ್ಯಕ್ಷ ಚಂದ್ರಶೇಖರ್ ಹಡಪದ್, ತಾಲ್ಲೂಕು ಅಧ್ಯಕ್ಷ ಮ. ಸುರೇಶ ಬಾಬು, ಪುರಸಭಾ ಸದಸ್ಯರಾದ ಎಂ. ಸತೀಶ್ ಕುಮಾರ್, ರಾಜೇಶ್ವರಿ ಭಾಸ್ಕರ್, ಶಿಕ್ಷಕರಾದ ಗಿರಿಜಾಂಬ, ಸಿ.ವಿ. ಸುರೇಶ್ ಹಾಗೂ ಡಾ. ಕೀರ್ತನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ವೆಂಕಟೇಶ್ವರ್ ದರ್ಶನಕ್ಕೆ 18 ಗಂಟೆಗಳ ಕಾಯುವಿಕೆ!

ತಿರುಪತಿ



ಜಗತ್ತಿನ ಪ್ರಖ್ಯಾತ ದೈವ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನಕ್ಕೆ ಜನಸಾಗರ ಹರಿದು ಬರುತ್ತಿದ್ದು, ಇಂದು ತಿರುಮಲದಲ್ಲಿ ಭಕ್ತರ ದಟ್ಟಣೆ ಮತ್ತೆ ಮುಂದುವರಿಯುತ್ತಿದ್ದುದು ಕಂಡು ಬಂದಿತು.

ಉಚಿತ ದರ್ಶನಕ್ಕಾಗಿ ಎಲ್ಲಾ ಕಂಪಾರ್ಟ್ಮೆಂಟ್‌ಗಳು ತುಂಬಿದ್ದು, ಶಿಲಾ ತೋರಣಂವರೆಗೆ ಭಕ್ತರು ಸಾಲಿನಲ್ಲಿ ಕಾಯುತ್ತಿದ್ದಾರೆ. ಬೆಳಿಗ್ಗೆ 8 ಗಂಟೆಯ ನಂತರ ತೆರಳುವ ಸರ್ವ ದರ್ಶನಕ್ಕೆ ಸುಮಾರು 18 ಗಂಟೆಗಳು ಬೇಕಾಗಬಹುದು. ರೂ. 300 ಶೀಘ್ರ ದರ್ಶನಕ್ಕೆ ಸುಮಾರು 3–4 ಗಂಟೆಗಳು ಬೇಕಾಗಬಹುದು. ಸರ್ವ ದರ್ಶನ ಟೋಕನ್ ಪಡೆದ ಭಕ್ತರಿಗೆ ಸುಮಾರು 4–6 ಗಂಟೆಗಳು ಬೇಕಾಗಬಹುದು. ನಿನ್ನೆ ಸ್ವಾಮಿವರ ದರ್ಶನ ಪಡೆದ ಭಕ್ತರ ಸಂಖ್ಯೆ: 86,091 ಸಂಖ್ಯೆ ಇತ್ತು. ಅದೇರೀತಿ 29,664 ಭಕ್ತರು ನಿನ್ನೆ ತಲೆಯ ಕೂದಲು ಸಮರ್ಪಣೆ ಮಾಡಿದರು. ನಿನ್ನೆ ಹುಂಡಿ ಆದಾಯ: ರೂ. 4.21 ಕೋಟಿ ಇತ್ತು ಎಂದು ಟಿಟಿಡಿ ತಿಳಿಸಿದೆ.

# ಚಿಂತಾಮಣಿಯಲ್ಲಿ ಹೆಸರಿಲ್ಲದ ಗ್ರಾಮ: ಅಸ್ತಿತ್ವಕ್ಕಾಗಿ ಗ್ರಾಮಸ್ಥರ ಹೋರಾಟ

ಚಿಂತಾಮಣಿ

ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ವಿಜ್ಞಾನ-ತಂತ್ರಜ್ಞಾನ ಮುಗಿಲೆತ್ತರಕ್ಕೆ ಬೆಳೆದಿದ್ದರೂ, ಚಿಂತಾಮಣಿ ತಾಲ್ಲೂಕಿನಲ್ಲಿ ಹಳ್ಳಿಯೊಂದಕ್ಕೆ ಅಧಿಕೃತ ಹೆಸರಿಲ್ಲ ಎಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ. ತಾಲ್ಲೂಕಿನ ಅಂಬಾಜಿ ದುರ್ಗಾ ಹೋಬಳಿಯ ಮಿಂಡಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಈ ಕುಗ್ರಾಮವು ತನ್ನ ಸ್ವಂತ ಅಸ್ತಿತ್ವಕ್ಕಾಗಿ ಈಗ ಹೋರಾಟಕ್ಕಿಳಿದಿದೆ.

ಹೆಸರಿಲ್ಲದ ಗ್ರಾಮದ ವಿಚಿತ್ರ ಕಥೆ: ಕೆಂಚಾರ್ಲಹಳ್ಳಿ ಪಕ್ಕದಲ್ಲಿರುವ ಈ ಗ್ರಾಮಕ್ಕೆ ಯಾವುದೇ ಅಧಿಕೃತ ಹೆಸರಿಲ್ಲ. ಪ್ರಸ್ತುತ ಈ ಊರು ಪಕ್ಕದ ಗ್ರಾಮದ ಹೆಸರಿನಿಂದಾಗಿ 'ನಲ್ಲರಾಳಹಳ್ಳಿ ಕ್ರಾಸ್' ಎಂದೇ ಗುರುತಿಸಲ್ಪಡುತ್ತಿದೆ. ವಿಶೇಷವೆಂದರೆ, ಇಲ್ಲಿನ ನಿವಾಸಿಗಳ ಆಧಾರ್ ಕಾರ್ಡ್‌ಗಳಲ್ಲಿ ಗ್ರಾಮದ ಹೆಸರು 'ಬೋಡನಮರಿ' ಎಂದು ನಮೂದಾಗಿದೆ. ಆದರೆ ದಾಖಲೆಗಳಲ್ಲಿರುವ ಈ ಹೆಸರು ಬಳಕೆಯಲ್ಲಿಲ್ಲದೆ ಗ್ರಾಮಸ್ಥರು ಗುರುತಿನ ಸಂಕಟ ಅನುಭವಿಸುತ್ತಿದ್ದಾರೆ.

ದಲಿತರ ಆಕ್ರೋಶ ಚುನಾವಣಾ ಬಹಿಷ್ಕಾರದ ಎಚ್ಚರಿಕೆ: ಸುಮಾರು 200ಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ, ದಲಿತರು ಹೆಚ್ಚಾಗಿ ವಾಸಿಸುವ ಈ ಗ್ರಾಮದ ಜನರು ಹಲವು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

"ನಮ್ಮ ಗ್ರಾಮಕ್ಕೆ ಸೂಕ್ತವಾದ ಹೆಸರನ್ನು ಗುರುತಿಸಿಕೊಡಿ ಎಂದು ಕೇಳುತ್ತಿದ್ದೇವೆ. ಹೆಸರಿಲ್ಲದ ಕಾರಣ ನಮಗೆ ಯಾವುದೇ ಸರ್ಕಾರಿ ಸೌಲಭ್ಯಗಳು ಸರಿಯಾಗಿ ತಲುಪುತ್ತಿಲ್ಲ. ಅಧಿಕಾರಿಗಳು ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಎಲ್ಲಾ ಚುನಾವಣೆಗಳನ್ನು ಬಹಿಷ್ಕರಿಸುತ್ತೇವೆ," ಎಂದು ಗ್ರಾಮಸ್ಥರು ಮಾಧ್ಯಮಗಳ ಮುಂದೆ ಅಳಲು ತೋಡಿಕೊಂಡಿದ್ದಾರೆ.

ಮೂಲಭೂತ ಸೌಕರ್ಯಗಳ ಕೊರತೆ: ಹೆಸರಿಲ್ಲದ ಈ ಗ್ರಾಮದಲ್ಲಿ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳೂ ಇಲ್ಲ. ಮಕ್ಕಳು ಶಿಕ್ಷಣಕ್ಕಾಗಿ ಪಕ್ಕದ ಗ್ರಾಮಗಳಿಗೆ ಅಲೆಯಬೇಕಾದ ಅನಿವಾರ್ಯತೆ ಇದೆ. ಗ್ರಾಮಕ್ಕೆ ಅಧಿಕೃತ ಹೆಸರು ನೀಡುವುದರ ಜೊತೆಗೆ ರಸ್ತೆ, ಕುಡಿಯುವ ನೀರು ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂಬುದು ಜನರ ಪ್ರಮುಖ ಬೇಡಿಕೆಯಾಗಿದೆ. ಹೆಸರಿಲ್ಲದ ಈ ಗ್ರಾಮಸ್ಥರ ನ್ಯಾಯಯುತ ಬೇಡಿಕೆಗೆ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತ ಹೇಗೆ ಸ್ಪಂದಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

# ನವೋದಯ ಅಖಾಡದಲ್ಲಿ 'ಪ್ರೇರಣಾ' ವಿದ್ಯಾರ್ಥಿಗಳ ಜಯಭೇರಿ; ಮೂವರು ಆಯ್ಕೆ

ತಿಪಟೂರು



ನಗರದ ಪ್ರೇರಣಾ ನವೋದಯ ತರಬೇತಿ ಕೇಂದ್ರದ ವಿದ್ಯಾರ್ಥಿಗಳು ಈ ವರ್ಷವೂ ರಾಷ್ಟ್ರೀಯ ಮಟ್ಟದ ನವೋದಯ ಪ್ರವೇಶ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ಸಂಸ್ಥೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾರೆ. 6ನೇ ತರಗತಿ ಪ್ರವೇಶಕ್ಕಾಗಿ ನಡೆದ ಈ ಕಠಿಣ ಪರೀಕ್ಷೆಯಲ್ಲಿ ಸಂಸ್ಥೆಯ ಮೂವರು ವಿದ್ಯಾರ್ಥಿಗಳು ಉತ್ತೀರ್ಣರಾಗಿ ನವೋದಯ ಶಾಲೆಗೆ ಆಯ್ಕೆಯಾಗಿದ್ದಾರೆ.

ಸಾಧಕ ವಿದ್ಯಾರ್ಥಿಗಳ ವಿವರ:



ಕಳೆದ ಡಿಸೆಂಬರ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ತಾಲ್ಲೂಕಿನ ಈ ಕೆಳಗಿನ ವಿದ್ಯಾರ್ಥಿಗಳು ಉನ್ನತ ಶ್ರೇಣಿಯೊಂದಿಗೆ ಅರ್ಹತೆ ಪಡೆದಿದ್ದಾರೆ.

ತನುಜ ಎಸ್.ಜೆ: 61ನೇ ಶ್ರೇಣಿ
ನವಮಿ ಸಂತೋಷ್: 66ನೇ ಶ್ರೇಣಿ
ವಿಷ್ಣುವರ್ಧನ್: 199ನೇ ಶ್ರೇಣಿ

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಉಪನ್ಯಾಸಕರ ನಿರಂತರ ಪರಿಶ್ರಮ ಮತ್ತು ಪೋಷಕರ ಸಹಕಾರವೇ ಕಾರಣ ಎಂದು ಪ್ರಾಂಶುಪಾಲರಾದ ಚೇತನ ಭಾನುಪ್ರಕಾಶ್ ಹರ್ಷ ವ್ಯಕ್ತಪಡಿಸಿದ್ದಾರೆ.

20 ವರ್ಷಗಳ ಶೈಕ್ಷಣಿಕ ಸೇವೆ: ಈ ಸಂದರ್ಭದಲ್ಲಿ ಮಾತನಾಡಿದ ಚೇತನ ಭಾನುಪ್ರಕಾಶ್ ಅವರು, "ನಮ್ಮ ಪ್ರೇರಣಾ ಟ್ರಸ್ಟ್ ವತಿಯಿಂದ ಕಳೆದ 20 ವರ್ಷಗಳಿಂದ ಗ್ರಾಮೀಣ ಹಾಗೂ ನಗರ ಪ್ರದೇಶದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನವೋದಯ, ಮೊರಾರ್ಜಿ ಮತ್ತು ಸೈನಿಕ ಶಾಲೆಗಳ ಪ್ರವೇಶಕ್ಕೆ ಉಚಿತ ಹಾಗೂ ರಿಯಾಯಿತಿ ದರದಲ್ಲಿ ತರಬೇತಿ ನೀಡಲಾಗುತ್ತಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಮರೀಚಿಕೆಯಾಗಬಾರದು ಎಂಬುದು ನಮ್ಮ ಧ್ಯೇಯ," ಎಂದರು.




ದೇಶಸೇವೆಯಲ್ಲಿ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು: ಪ್ರೇರಣಾ ಸಂಸ್ಥೆಯಲ್ಲಿ ತರಬೇತಿ ಪಡೆದ ಸಾವಿರಾರು ವಿದ್ಯಾರ್ಥಿಗಳು ಇಂದು ದೇಶದ ವಿವಿಧ ಉನ್ನತ ಹುದ್ದೆಗಳಲ್ಲಿದ್ದಾರೆ. "ಇಲ್ಲಿ ಓದಿದ ವಿದ್ಯಾರ್ಥಿಗಳು ಇಂದು ವೈದ್ಯರಾಗಿ, ಐಐಟಿ ಇಂಜಿನಿಯರ್‌ಗಳಾಗಿ, ಎನ್‌ಡಿಎ ಮೂಲಕ ಸೇನೆಯಲ್ಲಿ, ವಿಜ್ಞಾನಿಗಳಾಗಿ ಹಾಗೂ ಕ್ಲಾಟ್ ಪರೀಕ್ಷೆ ತೇರ್ಗಡೆ ಹೊಂದಿ ಉನ್ನತ ಸ್ಥಾನಗಳಲ್ಲಿದ್ದಾರೆ. ಇದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಷಯ," ಎಂದು ತಿಳಿಸಿದರು. ನವೋದಯ ಶಾಲೆಗೆ ಆಯ್ಕೆಯಾದ ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯ ಪದಾಧಿಕಾರಿಗಳು ಹಾಗೂ ನಾಗರಿಕರು ಅಭಿನಂದಿಸಿದ್ದಾರೆ.

# ಕಂದಾಚಾರಗಳ ವಿರುದ್ಧ ದನಿಯೆತ್ತಿದ ದಾರ್ಶನಿಕ ದೇವರ ದಾಸಿಮಯ್ಯ: ಮಲ್ಲಪ್ಪ ಯರಗೋಳ

ದೊಡ್ಡಬಳ್ಳಾಪುರ

"ಮೂಢಾಚಾರಗಳನ್ನು ತೊರೆದು ಸಮಾಜದಲ್ಲಿ ವೈಜ್ಞಾನಿಕತೆಯನ್ನು ಬಿತ್ತುವುದೇ ವಚನ ಚಳವಳಿಯ ಮೂಲ ಸಿದ್ಧಾಂತ. ಆದ್ಯವಚನಕಾರ ದೇವರ ದಾಸಿಮಯ್ಯ ಅವರು ಸಮಾಜದ ಕಂದಾಚಾರಗಳ ವಿರುದ್ಧ ದನಿಯೆತ್ತಿದ ಮಹಾನ್ ದಾರ್ಶನಿಕ," ಎಂದು ತಹಶೀಲ್ದಾರ್ ಡಾ. ಮಲ್ಲಪ್ಪ ಯರಗೋಳ ಹೇಳಿದರು.

ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ದೇವಾಂಗ ಮಂಡಲಿ ನೇತೃತ್ವದಲ್ಲಿ ಸೋಮವಾರ ತಾಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ಆದ್ಯವಚನಕಾರ ದೇವರ ದಾಸಿಮಯ್ಯ ಜಯಂತ್ಯುತ್ಸವ' ಉದ್ಘಾಟಿಸಿ ಅವರು ಮಾತನಾಡಿದರು.



ಲಿಂಗ ಸಮಾನತೆಯ ಹರಿಕಾರ: ವಚನ ಸಾಹಿತ್ಯದ ಮಹತ್ವದ ಬಗ್ಗೆ ಮಾತನಾಡಿದ ತಹಶೀಲ್ದಾರರು, "ಶ್ರೇಷ್ಠ ವ್ಯಕ್ತಿಗಳನ್ನು ಒಂದು ನಿರ್ದಿಷ್ಟ ವರ್ಗಕ್ಕೆ ಸೀಮಿತಗೊಳಿಸಬಾರದು. ದಾಸಿಮಯ್ಯ ಅವರು ವಚನ ಸಾಹಿತ್ಯದ ಮೂಲಕ ಲಿಂಗ ಸಮಾನತೆಯ ಮೌಲಿಕ ವಿಚಾರಗಳನ್ನು ಪ್ರಸ್ತಾಪಿಸಿದ ಮೊದಲಿಗರು. ಅವರ ಸಂದೇಶಗಳು ಮನುಕುಲದ ಒಳಿತಿಗಾಗಿ ಇವೆ. ಇವುಗಳನ್ನು ಪಾಲಿಸುವ ಮೂಲಕ ಸಮಾಜದಲ್ಲಿ ಸಾಮರಸ್ಯ ಮೂಡಿಸಬೇಕು," ಎಂದರು.

ದಾಸಿಮಯ್ಯ ಅಧ್ಯಯನ ಪೀಠಕ್ಕೆ ಪುನಶ್ಚೇತನ ಅಗತ್ಯ: ಉಪನ್ಯಾಸ ನೀಡಿದ ತಾಲೂಕು ಕಸಾಪ ಮಾಜಿ ಅಧ್ಯಕ್ಷ ಡಿ. ಶ್ರೀಕಾಂತ ಮಾತನಾಡಿ, "ವಚನ ಚಳವಳಿಯು ಕನ್ನಡ ಸಾಹಿತ್ಯ ಲೋಕದಲ್ಲಿ ತೀವ್ರ ಸಂಚಲನ ಮೂಡಿಸಿದೆ. ಬಸವಾದಿ ಶರಣರಿಗೆ ಹಿರಿಯರಾದ ದಾಸಿಮಯ್ಯ ಅವರು ಕಾಯಕ ನಿಷ್ಠೆಯ ಮೂಲಕ ಸಮಾಜಕ್ಕೆ ದಿಕ್ಸೂಚಿಯಾಗಿದ್ದರು. ಹಂಪಿ ವಿಶ್ವವಿದ್ಯಾಲಯದಲ್ಲಿರುವ ದಾಸಿಮಯ್ಯ ಅಧ್ಯಯನ ಪೀಠಕ್ಕೆ ಪುನಶ್ಚೇತನ ನೀಡಿ, ಅವರ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ," ಎಂದು ಆಶಯ ವ್ಯಕ್ತಪಡಿಸಿದರು.

ದೇವಾಂಗ ಮಂಡಲಿ ಅಧ್ಯಕ್ಷ ಎಂ.ಜಿ. ಶ್ರೀನಿವಾಸ್ ಮಾತನಾಡಿ, ದಾಸಿಮಯ್ಯ ಅವರು ಜನಭಾಷೆಯಲ್ಲಿ ಸಾಹಿತ್ಯ ಕಟ್ಟಿಕೊಡುವ ಮೂಲಕ ಕ್ರಾಂತಿಗೆ ಮುನ್ನುಡಿ ಬರೆದರು ಎಂದು ಸ್ಮರಿಸಿದರು.

ವಿವಿಧ ಕ್ಷೇತ್ರದ 11 ಸಾಧಕರಿಗೆ ಸನ್ಮಾನ: ಇದೇ ಸಂದರ್ಭದಲ್ಲಿ ದೇವಾಂಗ ಸಮುದಾಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಆರೂಢಿ ರಾಮಕೃಷ್ಣಪ್ಪ, ಕೆ.ಪಿ. ಜಗನ್ನಾಥ್, ಕೆ.ಓ. ನಾಗರಾಜ್ ಸೇರಿದಂತೆ ಒಟ್ಟು 11 ಜನರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪೌರಾಯುಕ್ತ ಕಾರ್ತಿಕೇಶ್ವರ್, ದೇವಾಂಗ ಮಂಡಲಿಯ ಪ್ರೊ. ಎಂ.ಜಿ. ಅಮರನಾಥ್, ಬಿ.ಜಿ. ಅಮರನಾಥ್, ನಗರಸಭಾ ಸದಸ್ಯ ಎಚ್.ಎಸ್. ಶಿವಶಂಕರ್ ಸೇರಿದಂತೆ ಸಮುದಾಯದ ಹಲವು ಮುಖಂಡರು ಭಾಗವಹಿಸಿದ್ದರು.

# ಯಶಸ್ವಿಗೊಂಡ ಉದಯೋನ್ಮುಖ ಕಲಾವಿದರ ಗಾನ-ನೃತ್ಯ ಸಂಗಮ

ಬೆಂಗಳೂರು

"ಸಾಂಸ್ಕೃತಿಕ ನಗರಿ ಬೆಂಗಳೂರಿನ ಜಯನಗರದ ಪಟ್ಟಾಭಿರಾಮ ಸೇವಾ ಮಂಡಳಿಯ ಸಭಾಂಗಣವು ಭಾನುವಾರ ಸಂಜೆ ಅಪರೂಪದ ಕಲಾ ದರ್ಶನಕ್ಕೆ ಸಾಕ್ಷಿಯಾಯಿತು. ಪರಮ್ ಫೌಂಡೇಶನ್ ವತಿಯಿಂದ ಆಯೋಜಿಸಲಾಗಿದ್ದ 'ಪರಮ್ ವಿಹಾರ-10' ಕಾರ್ಯಕ್ರಮವು ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಘಮವನ್ನು ಪಸರಿಸಿ, ಕಲಾಪ್ರೇಮಿಗಳ ಮನಗೆಲ್ಲುವಲ್ಲಿ ಯಶಸ್ವಿಯಾಯಿತು."



ಹೊಸ ತಲೆಮಾರಿನ ಕಲಾವಿದರಿಗೆ ವೇದಿಕೆ ಕಲ್ಪಿಸುವ ಉದ್ದೇಶದ ಈ ಕಾರ್ಯಕ್ರಮದ ಹತ್ತನೇ ಸರಣಿಯು ಅತ್ಯಂತ ಅದ್ದೂರಿಯಾಗಿ ಜರುಗಿತು.

ಕಾರ್ಯಕ್ರಮದ ಆರಂಭದಲ್ಲಿ ಕುಮಾರಿ ಮಾನ್ಯ ಮಂಜುನಾಥ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯು ಸಭಿಕರನ್ನು ಮಂತ್ರಮುಗ್ಧಗೊಳಿಸಿತು. ತಮ್ಮ ಸುಶ್ರಾವ್ಯ ಕಂಠಸಿರಿಯಿಂದ ವಿವಿಧ ರಾಗಗಳನ್ನು ಪ್ರಸ್ತುತಪಡಿಸಿದ ಅವರು, ಲಯಬದ್ಧ ಗಾಯನದ ಮೂಲಕ ಗಮನ ಸೆಳೆದರು.

ಇವರಿಗೆ ಮೃದಂಗದಲ್ಲಿ ವಿದ್ವಾನ್ ಸುಮಧುರ್ ಅನೂರ್ ಹಾಗೂ ಪಿಟೀಲಿನಲ್ಲಿ ವಿದ್ವಾನ್ ರಾಘವೇಂದ್ರ ಡಿ.ಆರ್. ಅವರು ಅತ್ಯುತ್ತಮ ಸಾಥ್ ನೀಡುವ ಮೂಲಕ ಸಂಗೀತ ಕಚೇರಿಯ ರಂಗನ್ನು ಹೆಚ್ಚಿಸಿದರು.



ಗಾಯನದ ನಂತರ ನಡೆದ ಕುಮಾರಿ ಶ್ರೀನಿಧಿ ರಾಮಸ್ವಾಮಿ ಅವರ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನವು ಸಭೆಯ ಕಣ್ಮಣಿಯಾಯಿತು. ಸಾಂಪ್ರದಾಯಿಕ ನೃತ್ಯ ಪ್ರಕಾರದ ಘನತೆ ಮತ್ತು ಲಾಸ್ಯವನ್ನು ತಮ್ಮ ಅಭಿನಯದ ಮೂಲಕ ಶ್ರೀನಿಧಿಯವರು ತೆರೆದಿಟ್ಟರು. ಅವರ ಆಕರ್ಷಕ ಹಾವಭಾವಗಳು ಹಾಗೂ ಶಿಸ್ತಿನ ಪಾದಚಲನೆಯು ಶಾಸ್ತ್ರೀಯ ನೃತ್ಯದ ಹಿರಿಮೆಯನ್ನು ಸಾರುತ್ತಿತ್ತು. ರಂಗದ ಮೇಲಿನ ಪ್ರತಿ ಭಂಗಿಯೂ ಕಲಾಪ್ರೇಮಿಗಳ ಮೆಚ್ಚುಗೆಗೆ ಪಾತ್ರವಾಯಿತು. ಉದಯೋನ್ಮುಖ ಕಲಾವಿದರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪರಮ್ ಫೌಂಡೇಶನ್ ಹಮ್ಮಿಕೊಂಡಿರುವ ಈ ಸರಣಿಯು ಇದೀಗ 10ನೇ ಆವೃತ್ತಿಯನ್ನು ಪೂರೈಸಿದೆ. ಸಂಜೆ 6 ಗಂಟೆಯಿಂದ ಆರಂಭವಾದ ಈ ಕಾರ್ಯಕ್ರಮಕ್ಕೆ ಬೆಂಗಳೂರಿನ ನಾನಾ ಭಾಗಗಳಿಂದ ಸಂಗೀತ ಮತ್ತು ನೃತ್ಯ ಆಸಕ್ತರು ಆಗಮಿಸಿ ಕಲಾವಿದರನ್ನು ಹುರಿದುಂಬಿಸಿದರು.

# ಜಾಗತಿಕ ಬಿಕ್ಕಟ್ಟಿನಲ್ಲೂ ಭಾರತದ ರಾಜತಾಂತ್ರಿಕ ನಡೆ ಯಶಸ್ವಿ: ಸಂಸದ ಡಾ. ಸಿ.ಎನ್. ಮಂಜುನಾಥ್

ರಾಮನಗರ

"ಕೊಲ್ಲಿ ಯುದ್ಧದ ಪರಿಸ್ಥಿತಿಯಿಂದ ಎದುರಾಗಿರುವ ಜಾಗತಿಕ ಸಮಸ್ಯೆಯನ್ನು ನಿಭಾಯಿಸುವಲ್ಲಿ ಭಾರತವು ಇತರ ದೇಶಗಳಿಗಿಂತ ರಾಜತಾಂತ್ರಿಕವಾಗಿ ಅತ್ಯಂತ ಸಮರ್ಥವಾಗಿ ಹೆಜ್ಜೆ ಇಟ್ಟಿದೆ," ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ತಾಲೂಕಿನ ವಿವಿಧೆಡೆ ಸಿಎಸ್ಆರ್ ಅನುದಾನದಡಿ ನಿರ್ಮಿಸಲಾದ 10ಕ್ಕೂ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಉದ್ಘಾಟಿಸಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಹಡಗುಗಳ ಸಂಚಾರಕ್ಕೆ ಭಾರತದ ಮುನ್ನಡೆ: "ಹರ್ಮನ್ ಜಲಸಂಧಿಯಲ್ಲಿ ಭಾರತಕ್ಕೆ ಬರಬೇಕಿರುವ 21 ಹಡಗುಗಳು ಕಾಯುತ್ತಾ ನಿಂತಿದ್ದು, ಭಾರತದ ಧ್ವಜ ಹೊಂದಿರುವ 3 ಹಡಗುಗಳನ್ನು ಪ್ರತಿದಿನ ಬಿಡಲಾಗುತ್ತಿದೆ. ಇದು ಸಂಕಷ್ಟದ ಸಮಯದಲ್ಲಿ ನಮ್ಮ ದೇಶ ಅನುಸರಿಸುತ್ತಿರುವ ಉತ್ತಮ ರಾಜತಾಂತ್ರಿಕ ನಡೆಗೆ ಸಾಕ್ಷಿಯಾಗಿದೆ," ಎಂದರು. ಇದೇ ವೇಳೆ ಜನರು 'ಸೂರ್ಯಘರ್' ಯೋಜನೆಯಡಿ ಸೋಲಾರ್ ವ್ಯವಸ್ಥೆ




ಅಳವಡಿಸಿಕೊಳ್ಳುವ ಮೂಲಕ ಪರ್ಯಾಯ ಇಂಧನದತ್ತ ಗಮನಹರಿಸಬೇಕು ಎಂದು ಕರೆ ನೀಡಿದರು.

ಎಕ್ಸ್‌ಪ್ರೆಸ್ ವೇನಲ್ಲಿ 'ರೆಸ್ಟ್ ಏರಿಯಾ' 8.5 ಎಕರೆ ಜಾಗ ಗುರುತು: ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ವಿಶ್ರಾಂತಿ ಸ್ಥಳದ ಕೊರತೆಯಿದ್ದು, ಚನ್ನಪಟ್ಟಣದ ಬಳಿ 'ರೆಸ್ಟ್ ಏರಿಯಾ' ನಿರ್ಮಿಸಲು 8.5 ಎಕರೆ ಜಾಗ ಗುರುತಿಸಲಾಗಿದೆ. "ಈ ಕುರಿತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆಯಲಾಗಿದೆ. ಇಲ್ಲಿ ಟಾಯ್ಸ್ ಪಾರ್ಕ್, ಸಿಲ್ಕ್ ಮ್ಯೂಸಿಯಂ ಹಾಗೂ ಪೆಟ್ರೋಲ್ ಬಂಕ್ ನಿರ್ಮಾಣವಾಗಲಿದ್ದು, ಪ್ರಸ್ತಾವನೆ ಸಲ್ಲಿಸಲಾಗಿದೆ," ಎಂದು ಮಾಹಿತಿ ನೀಡಿದರು.

ಕುಡಿಯುವ ನೀರಿಗೆ ಆದ್ಯತೆ 10 ಘಟಕಗಳ ಉದ್ಘಾಟನೆ: ಸುಮಾರು ಒಂದು ಕೋಟಿ ರೂ. ವೆಚ್ಚದಲ್ಲಿ ರಾಂಪುರ, ಶೀರಗುಡ್ಡ, ಕೂಡ್ಲೂರು ಸೇರಿದಂತೆ 10 ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಉದ್ಘಾಟಿಸಲಾಯಿತು. "ಬೇಸಿಗೆ ಆರಂಭವಾಗಿರುವುದರಿಂದ ನೀರಿನ ಅವಶ್ಯಕತೆ ಹೆಚ್ಚಿದೆ. ಕೆಟ್ಟು ನಿಂತಿರುವ ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕ್ಷೇತ್ರದಾದ್ಯಂತ 250 ಹೈಮಾಸ್ಕ್ ಲೈಟ್‌ಗಳನ್ನು ಅಳವಡಿಸಲಾಗುವುದು," ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಎಚ್.ಸಿ. ಜಯಮುತ್ತು, ಬಿಜೆಪಿ ಜಿಲ್ಲಾಧ್ಯಕ್ಷ ಆನಂದ ಸ್ವಾಮಿ, ತಾಲೂಕು ಅಧ್ಯಕ್ಷ ಗೋವಿಂದಳ್ಳಿ ನಾಗರಾಜು ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.



ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಕಣ ರಂಗೇರಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಅವರು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಉಪಸ್ಥಿತಿಯಲ್ಲಿ ಅದ್ದೂರಿಯಾಗಿ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಸಚಿವ ಸತೀಶ್ ಜಾರಕಿಹೊಳಿ, ಎಂ.ಬಿ. ಪಾಟೀಲ್ ಹಾಗೂ ಶಿವಾನಂದ ಪಾಟೀಲ್ ಹಾಜರಿದ್ದರು.

# ಶೀಘ್ರವೇ ಗಾಂಧಿ-ಅಂಬೇಡ್ಕರ್ ಪುತ್ಥಳಿ ಅನಾವರಣ: ಜಿಲ್ಲಾಧಿಕಾರಿ ಜಿ. ಪ್ರಭು

ಚಿಕ್ಕಬಳ್ಳಾಪುರ

"ಜಿಲ್ಲಾಡಳಿತ ಭವನದ ಆವರಣದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗಳನ್ನು ಅತಿ ಶೀಘ್ರದಲ್ಲಿ ನಿರ್ಮಿಸಲಾಗುವುದು," ಎಂದು ಜಿಲ್ಲಾಧಿಕಾರಿ ಜಿ. ಪ್ರಭು ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನರಾಂ ಅವರ ಜಯಂತಿಗಳ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅನುದಾನ ಬಿಡುಗಡೆ ಜ್ಞಾನಭಾರತಿ ಮಾದರಿಯಲ್ಲಿ ಪುತ್ಥಳಿ ನಿರ್ಮಾಣ: ಪುತ್ಥಳಿ ನಿರ್ಮಾಣದ ಕುರಿತು ಮಾಹಿತಿ



ನೀಡಿದ ಜಿಲ್ಲಾಧಿಕಾರಿಗಳು, "ಪುತ್ಥಳಿಗಳ ನಿರ್ಮಾಣ ಕಾಮಗಾರಿಗೆ ಈಗಾಗಲೇ ಅನುದಾನ ಬಿಡುಗಡೆಯಾಗಿದೆ. ಬೆಂಗಳೂರಿನ ಜ್ಞಾನಭಾರತಿ ಕ್ಯಾಂಪಸ್ ಬಳಿ ಇರುವ ಪುತ್ಥಳಿಗಳ ಮಾದರಿಯಲ್ಲೇ ಇಲ್ಲೂ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಈ ವಿಚಾರದಲ್ಲಿ ವಿಳಂಬಕ್ಕೆ ಆಸ್ಪದವಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಈ ಬಗ್ಗೆ ಸ್ಪಷ್ಟ ಸೂಚನೆ ನೀಡಿದ್ದು, ಶೀಘ್ರವೇ ಕಾಮಗಾರಿ ಪೂರ್ಣಗೊಳ್ಳಲಿದೆ," ಎಂದರು.

ಏಪ್ರಿಲ್ 5 ಮತ್ತು 14 ಅದ್ದೂರಿ ಜಯಂತಿ ಆಚರಣೆ: ಪ್ರತಿ ವರ್ಷದಂತೆ ಈ ಬಾರಿಯೂ ಏಪ್ರಿಲ್ 5 ರಂದು ಡಾ. ಬಾಬು ಜಗಜೀವನರಾಂ ಜಯಂತಿ ಹಾಗೂ ಏಪ್ರಿಲ್ 14ರಂದು ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಜಿಲ್ಲಾ ಕನ್ನಡ ಭವನದಲ್ಲಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ. ಕಾರ್ಯಕ್ರಮದ ಯಶಸ್ಸಿಗಾಗಿ ವಿವಿಧ ಸಮಿತಿ ಮತ್ತು ಉಪಸಮಿತಿಗಳನ್ನು ರಚಿಸಲಾಗಿದ್ದು, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಹಾಗೂ ಮೆರವಣಿಗೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಶೇಷ ಆಕರ್ಷಣೆ ರಕ್ತದಾನ ಶಿಬಿರ ಹಾಗೂ ಸ್ತಬ್ಧಚಿತ್ರ ಮೆರವಣಿಗೆ: "ಈ ಬಾರಿಯ ಅಂಬೇಡ್ಕರ್ ಜಯಂತಿಯನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ, ಅರ್ಥಪೂರ್ಣವಾಗಿಸಲು ಜಿಲ್ಲಾಡಳಿತ ಮತ್ತು ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗುತ್ತಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡಬೇಕು," ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು. ಅಲ್ಲದೆ, ನಗರದಲ್ಲಿ ಪಲ್ಲಕ್ಕಿ ಹಾಗೂ ಆಕರ್ಷಕ ಸ್ತಬ್ಧಚಿತ್ರಗಳ ಮೆರವಣಿಗೆ ನಡೆಸಲು ತೀರ್ಮಾನಿಸಲಾಗಿದೆ.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಒ ಡಾ. ವೈ. ನವೀನ್ ಭಟ್, ಉಪವಿಭಾಗಾಧಿಕಾರಿ ಡಿ.ಹೆಚ್. ಅಶ್ವಿನ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ತೇಜಾನಂದರೆಡ್ಡಿ ಸೇರಿದಂತೆ ವಿವಿಧ ದಲಿತ ಸಂಘಟನೆಗಳ ಮುಖಂಡರು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

# 'ಸಿಎಂ ಇನ್ನೂ ಎರಡು ಬಜೆಟ್ ಮಂಡಿಸ್ತಾರೆ'

ಬೆಂಗಳೂರು



ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆಯ ಕುರಿತು ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ, ಸಚಿವ ಜಮೀರ್ ಅಹಮದ್ ಖಾನ್ ವಿಧಾನಸಭೆಯಲ್ಲಿ ಬಾಂಬ್ ಸಿಡಿಸಿದ್ದಾರೆ. "ಮುಂದಿನ ಎರಡು ವರ್ಷಗಳ ಕಾಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಬಜೆಟ್ ಮಂಡಿಸಲಿದ್ದಾರೆ," ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಸಿಎಂ ಆಗಿ ಮುಂದುವರಿಯಲಿದ್ದಾರೆ ಎಂಬ ಸಂದೇಶ ರವಾನಿಸಿದ್ದಾರೆ.

ಸೋಮವಾರ ಸದನದಲ್ಲಿ 2026-27ನೇ ಸಾಲಿನ ಬಜೆಟ್ ಮೇಲಿನ ಚರ್ಚೆಯ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ನಡೆದ ವಾಕ್ಸಮರ ಈ ಕುತೂಹಲಕಾರಿ ಬೆಳವಣಿಗೆಗೆ ಸಾಕ್ಷಿಯಾಯಿತು. ಬಿಜೆಪಿ ಶಾಸಕ ವಿ. ಸುನೀಲ್ ಕುಮಾರ್ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿ, "ಸಿದ್ದರಾಮಯ್ಯ ಅವರು ಕೇವಲ ವಿತ್ತ ತಜ್ಞರಲ್ಲ, ಅದ್ಭುತ ಆರ್ಥಿಕ ತಜ್ಞರೂ ಹೌದು. ಈ ಬಾರಿಯ ಬಜೆಟ್‌ನಲ್ಲಿ ಟ್ರೋಟಿಂಗ್ ಎಕನಾಮಿ, 11ಜಿ, ಫಲಧಾರೆ, ಭಿಷತತ್ವದಂತಹ ಹೊಸ ಹೊಸ ಪದಗಳನ್ನು ಬಳಸಿದ್ದಾರೆ. ಇವುಗಳನ್ನು ಅರ್ಥ ಮಾಡಿಕೊಳ್ಳಲು ನಮಗೆ ಕಷ್ಟವಾಗುತ್ತಿದೆ. ಮುಂದಿನ ಬಜೆಟ್ ವೇಳೆ ಈ ಪದಗಳ ಅರ್ಥ ತಿಳಿಯಲು ಒಂದು ಶಬ್ದಕೋಶವನ್ನೇ ನೀಡಿಬಿಡಿ," ಎಂದು ಲೇವಡಿ ಮಾಡಿದರು.

ಇದಕ್ಕೆ ಧ್ವನಿಗೂಡಿಸಿದ ಸಭಾಧ್ಯಕ್ಷರು, "ಈಗಲೇ ಶಬ್ದಕೋಶದ ಅಗತ್ಯವಿದೆ," ಎಂದರು. ಆಗ ಸುನೀಲ್ ಕುಮಾರ್, "ಮುಂದಿನ ಬಾರಿಯೂ ಸಿದ್ದರಾಮಯ್ಯ ಅವರೇ ಬಜೆಟ್ ಮಂಡಿಸುವುದಾದರೆ ನಮಗೆ ಖಂಡಿತಾ ಡಿಕ್ಷನರಿ ಬೇಕು," ಎಂದು ಚಾಟಿ ಬೀಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ್, "ಈ ಹೊಸ ಪದಗಳಿಗೆ ಸಚಿವ ಜಮೀರ್ ಅವರಿಂದಲೇ ಅರ್ಥ ಹೇಳಿಸಿ," ಎಂದು ಹಾಸ್ಯ ಚಟಾಕಿ ಹಾರಿಸಿದರು. ಅಶೋಕ್ ಅವರ ಮಾತು ಸರಿಯಾಗಿ ಕೇಳಿಸದ ಜಮೀರ್, "ಏನು ವಿಷಯ?" ಎಂದು ಪ್ರಶ್ನಿಸಿದಾಗ, ಅಶೋಕ್ ಮಾತು ಬದಲಿಸಿ, "ಮುಂದಿನ ಬಜೆಟ್ ಅನ್ನು ಸಿದ್ದರಾಮಯ್ಯ ಅವರೇ ಮಂಡಿಸುತ್ತಾರೆಯೇ ಎಂದು ಸುನೀಲ್ ಕುಮಾರ್ ಕೇಳುತ್ತಿದ್ದಾರೆ," ಎಂದರು.

# 'ಕೌನ್ಸೆಲಿಂಗ್ ಮೂಲಕ ವರ್ಗಾವಣೆಗೆ ಒತ್ತು'

ಬೆಂಗಳೂರು



"ಕಳೆದ 4-5 ದಶಕಗಳಿಂದ ಬದಲಾವಣೆ ಕಾಣದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಮುಂದಿನ ಎರಡು ತಿಂಗಳಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು," ಎಂದು ಸಚಿವ ದಿನೇಶ್ ಗುಂಡೂರಾವ್ ವಿಧಾನಪರಿಷತ್ತಿಗೆ ತಿಳಿಸಿದರು.

ಸೋಮವಾರ ನಡೆದ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಎಸ್.ವಿ. ಸಂಕನೂರು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಇಲಾಖೆಯ ಆಡಳಿತಾತ್ಮಕ ಸುಧಾರಣೆಯ ಕುರಿತು ಮಹತ್ವದ ಮಾಹಿತಿ ಹಂಚಿಕೊಂಡರು.

"ಇಲಾಖೆಯ ಜ್ಯೇಷ್ಠತಾ ಪಟ್ಟಿಯಲ್ಲಿ ಬಿ, ಸಿ ಮತ್ತು ಡಿ ಗುಂಪುಗಳ ಪಟ್ಟಿ ಈಗಾಗಲೇ ಸಿದ್ಧವಾಗಿದೆ. ಆದರೆ, ಮಾಹಿತಿ ಕೊರತೆಯಿಂದಾಗಿ ಕಳೆದ 13 ವರ್ಷಗಳಿಂದ 'ಎ' ಗ್ರೂಪ್ ಪಟ್ಟಿ ತಯಾರಿಸುವುದು ವಿಳಂಬವಾಗಿತ್ತು. ಈಗ ಆ ಎಲ್ಲ ತಾಂತ್ರಿಕ ದೋಷಗಳನ್ನು ಸರಿಪಡಿಸಿ ಹೊಸ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಪಟ್ಟಿ ಅಂತಿಮವಾಗುವುದರಿಂದ ಇಲಾಖೆಯ ವಿವಿಧ ವೃಂದಗಳಲ್ಲಿ ಬಾಕಿ ಇರುವ ಬಡ್ತಿ ಪ್ರಕ್ರಿಯೆಗೆ ಹೆಚ್ಚಿನ ಅನುಕೂಲವಾಗಲಿದೆ," ಎಂದು ಅವರು ವಿವರಿಸಿದರು.

ಇಲಾಖೆಯ ವರ್ಗಾವಣೆ ನೀತಿಯಲ್ಲಿ ತಂದಿರುವ ಬದಲಾವಣೆಗಳ ಕುರಿತು ಮಾತನಾಡಿದ ಸಚಿವರು, "ಕಳೆದ ವರ್ಷ ಕೌನ್ಸೆಲಿಂಗ್ ಮೂಲಕ 5,700 ವೈದ್ಯರ ವರ್ಗಾವಣೆಯನ್ನು ಯಶಸ್ವಿಯಾಗಿ ಮಾಡಲಾಗಿದೆ. ಈ ಸಂಬಂಧ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದ್ದು, ಮುಂದಿನ ವರ್ಗಾವಣೆ ಪ್ರಕ್ರಿಯೆಗಳೂ ಸಹ ಯಾವುದೇ ಹಸ್ತಕ್ಷೇಪವಿಲ್ಲದೆ ಅತ್ಯಂತ ಪಾರದರ್ಶಕವಾಗಿ ನಡೆಯಲಿವೆ," ಎಂದು ಭರವಸೆ ನೀಡಿದರು.

# ಮಹಿಳೆಯರು ಕಾನೂನು ಬಲ ಹೊಂದಲಿ: ವರಲಕ್ಷ್ಮೀ



ದೊಡ್ಡಬಳ್ಳಾಪುರ

"ಮಹಿಳೆಯರಿಗೆ ಕಾನೂನಿನ ಅರಿವಿದ್ದಾಗ ಮಾತ್ರ ತಮಗಾಗುವ ಅನ್ಯಾಯವನ್ನು ಧೈರ್ಯವಾಗಿ ಎದುರಿಸಿ ನ್ಯಾಯ ಪಡೆಯಲು ಸಾಧ್ಯ," ಎಂದು ವಕೀಲರಾದ ರಾಧಾ ಮುರುಳಿದರ್ ಅಭಿಪ್ರಾಯಪಟ್ಟರು.

ನಗರದ ಶ್ರೀ ಕಾಶಿ ವಿಶ್ವನಾಥ ದೇವಾಲಯದ ಸಭಾ ಭವನದಲ್ಲಿ ಶ್ರೀ ಕಾಶಿ ವಿಶಾಲಾಕ್ಷಿ ವಿಪ್ರ ವನಿತಾ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ರಾಧಾ ಮುರುಳಿದರ್ ಅವರು, "ಹಿಂದೆ ಕಾನೂನು ವೃತ್ತಿಯಲ್ಲಿ ಮಹಿಳೆಯರ ಸಂಖ್ಯೆ ವಿರಳವಾಗಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕಾನೂನು ಜ್ಞಾನ ಪಡೆದುಕೊಳ್ಳುತ್ತಿರುವುದು ಸಂತಸದ ವಿಷಯ. ಮಹಿಳೆಯರು ಸಂಘಟಿತರಾಗಿ ಅನ್ಯಾಯದ ವಿರುದ್ಧ ಹೋರಾಡಲು ಕಾನೂನು ಬಲ ನೀಡುತ್ತದೆ. ಸಮಾಜವು ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಬೇಕು," ಎಂದರು.

ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವರಲಕ್ಷ್ಮಿ ಮಾತನಾಡಿ, "ಸಮಾಜದಲ್ಲಿ ಇಂದಿಗೂ ಕೌಟುಂಬಿಕ ಕಲಹ ಮತ್ತು ದೌರ್ಜನ್ಯಗಳಿಗೆ ಮಹಿಳೆಯರೇ ಅತಿ ಹೆಚ್ಚು ಬಲಿಯಾಗುತ್ತಿರುವುದು ವಿಷಾದನೀಯ. ಸಂವಿಧಾನದಲ್ಲಿ ಸ್ತ್ರೀ-ಪುರುಷರಿಗೆ ಸಮಾನವಾದ ಕಾನೂನಿದ್ದರೂ ಶೋಷಣೆ ನಿಂತಿಲ್ಲ. ಮಹಿಳೆಯರಿಗೆ ಉತ್ತಮ ಶಿಕ್ಷಣ ಮತ್ತು ಉದ್ಯೋಗ ನೀಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಜವಾಬ್ದಾರಿಯನ್ನು ನಾವೆಲ್ಲರೂ ಹೊರಬೇಕಿದೆ," ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವೇದಿಕೆಯ ಅಧ್ಯಕ್ಷೆ ರೂಪ ರಘುನಾಥ್, ಮಹಿಳಾ ಸಮಾಜದ ಅಧ್ಯಕ್ಷೆ ವತ್ಸಲ ಜಗನಾಥ್, ನಗರಸಭಾ ಸದಸ್ಯೆ ಇಂದ್ರಾಣಿ, ಉಪಾಧ್ಯಕ್ಷೆ ಲಕ್ಷ್ಮಿ ವೇಣುಗೋಪಾಲ್, ಕಾರ್ಯದರ್ಶಿ ಗಾಯತ್ರಿ ಪ್ರಸಾದ್ ಸೇರಿದಂತೆ ವೇದಿಕೆಯ ಪದಾಧಿಕಾರಿಗಳು ಹಾಗೂ ಮಹಿಳಾ ಮುಖಂಡರು ಉಪಸ್ಥಿತರಿದ್ದರು.

# ಗೋಮಾಳಕ್ಕೆ ಭೂಗಳ್ಳರ ಕಣ್ಣು; ಗ್ರಾಮಸ್ಥರ ಆಕ್ರೋಶ

ದೇವನಹಳ್ಳಿ

"ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ ಮಲ್ಲೇಪುರ ಗ್ರಾಮದ ಸರ್ವೆ ನಂಬರ್ 50ರ ಗೋಮಾಳದ ಜಮೀನಿನ ಅಕ್ರಮ ಪೋಡಿ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಿ ಯಥಾಸ್ಥಿತಿ ಕಾಪಾಡಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡಲಾಗುವುದು," ಎಂದು ಬಿಎಸ್ಪಿ ತಾಲೂಕು ಅಧ್ಯಕ್ಷ ಎಂ.ಡಿ. ರಾಮಾಂಜನಪ್ಪ ಎಚ್ಚರಿಸಿದರು.

ಈ ಕುರಿತು ಗ್ರೇಡ್-2 ತಹಸಿಲ್ದಾರ್ ಜಯಕುಮಾರ್ ಅವರಿಗೆ ಮನವಿ ಸಲ್ಲಿಸಿದ ಮಲ್ಲೇಪುರ ಗ್ರಾಮಸ್ಥರು ಹಾಗೂ ಬಿಎಸ್ಪಿ ಮುಖಂಡರು, ಭೂಗಳ್ಳರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದರು.

ನಕಲಿ ದಾಖಲೆ ಸೃಷ್ಟಿ ಅಧಿಕಾರಿಗಳ ದಾರಿ ತಪ್ಪಿಸುವ ಸಂಚು?

ಮನವಿ ಸಲ್ಲಿಸಿ ಮಾತನಾಡಿದ ಎಂ.ಡಿ. ರಾಮಾಂಜನಪ್ಪ, "ಮಲ್ಲೇಪುರ ಸರ್ವೆ ನಂಬರ್ 50ರ ಗೋಮಾಳದಲ್ಲಿ ಈಗಾಗಲೇ ಹಲವರು ಸಾಗುವಳಿ ಚೀಟಿ ಪಡೆದು ಕಾನೂನುಬದ್ಧವಾಗಿ ಖಾತೆ ಮಾಡಿಸಿಕೊಂಡಿದ್ದಾರೆ. ಆದರೆ, ಇತ್ತೀಚೆಗೆ ಕೆಲವು ಭೂಗಳ್ಳರು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಅಧಿಕಾರಿಗಳನ್ನು ದಾರಿ ತಪ್ಪಿಸುವ ಮೂಲಕ ಅಕ್ರಮವಾಗಿ ಪೋಡಿ ಮಾಡಿಸಲು ಸಂಚು ರೂಪಿಸುತ್ತಿದ್ದಾರೆ. ತಹಸಿಲ್ದಾರರು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರ ಅಭಿಪ್ರಾಯ ಸಂಗ್ರಹಿಸಬೇಕು," ಎಂದು ಆಗ್ರಹಿಸಿದರು.

ಪ್ರಭಾವಿಗಳಿಂದ ಭೂ ಕಬಳಿಕೆ ಯತ್ನ ಗಂಭೀರ ಆರೋಪ: ಅಂಬೇಡ್ಕರ್ ಸೇವಾ ಸಮಿತಿ ಜಿಲ್ಲಾ ಉಪಾಧ್ಯಕ್ಷ ನರಸಿಂಹಮೂರ್ತಿ ಮಾತನಾಡಿ, "ಪಕ್ಕದ ಬಾಲೇಪುರ ಗ್ರಾಮದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಲಕ್ಷ್ಮೀನಾರಾಯಣಪ್ಪ ಅವರು ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ತಲಾ 4-5 ಎಕರೆ ಭೂಮಿಯನ್ನು ಪೋಡಿ ಮಾಡಿಸಲು ಮುಂದಾಗುವ ಮೂಲಕ ಗೋಮಾಳವನ್ನು ಕಬಳಿಸಲು ಯತ್ನಿಸುತ್ತಿದ್ದಾರೆ. ಉಳುವವನೇ ಭೂಮಿಯ ಒಡೆಯ ಎಂಬ ಆಶಯಕ್ಕೆ ವಿರುದ್ಧವಾಗಿ ಈ ಅಕ್ರಮ ನಡೆಯುತ್ತಿದೆ. ಸರ್ವೆ ಅಧಿಕಾರಿಗಳು ಈ ಕೂಡಲೇ ಪ್ರಕ್ರಿಯೆ ಸ್ಥಗಿತಗೊಳಿಸಬೇಕು," ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಕಚೇರಿ ಮುತ್ತಿಗೆಯ ಎಚ್ಚರಿಕೆ: ಒಂದು ವೇಳೆ ಅಕ್ರಮ ಪೋಡಿ ಕಾರ್ಯ ನಿಲ್ಲಿಸದಿದ್ದರೆ ಗ್ರಾಮಸ್ಥರೆಲ್ಲರೂ ಒಗ್ಗೂಡಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಸುವುದಾಗಿ ಹೋರಾಟಗಾರರು ತಿಳಿಸಿದರು. ಅಲ್ಲದೆ, ಗ್ರಾಮದ ಭೂ ರಹಿತರನ್ನು ಗುರುತಿಸಿ ಅರ್ಹರಿಗೆ ಜಮೀನು ನೀಡಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡಲಾಯಿತು.

ಮಲ್ಲೇಪುರ ಹೋರಾಟ ಸಮಿತಿಯ ಮುನಿಯಪ್ಪ, ವೆಂಕಟೇಶ್, ಕೃಷ್ಣಪ್ಪ, ಮುನಿ ಅಂಜಿನಪ್ಪ, ಮುನಿಶಾಮಪ್ಪ, ಮುನಿರಾಜಪ್ಪ, ಹಾದಿ ನಾರಾಯಣಸ್ವಾಮಿ, ಖದಿರಪ್ಪ ಸೇರಿದಂತೆ ಗ್ರಾಮದ ಅನೇಕ ಮುಖಂಡರು ಹಾಜರಿದ್ದರು.

# ರೈಲುಗಳ ಸಂಚಾರ ಪುನಾರಂಭ

ವಿಜಯಪುರ/ಬಾಗಲಕೋಟೆ

ವಂದಾಲ ಮತ್ತು ಬಸವನ ಬಾಗೇವಾಡಿ ರೋಡ್ ನಿಲ್ದಾಣಗಳ ನಡುವಿನ ಲೆವೆಲ್ ಕ್ರಾಸಿಂಗ್ (ಎಲ್‌ಸಿ ಸಂಖ್ಯೆ 62) ಕಾಮಗಾರಿಯ ಹಿನ್ನೆಲೆಯಲ್ಲಿ ಭಾಗಶಃ ರದ್ದಾಗಿದ್ದ ಹುಬ್ಬಳ್ಳಿ-ವಿಜಯಪುರ ವಿಶೇಷ ರೈಲುಗಳ ಸೇವೆಯನ್ನು ಇದೀಗ ಎಂದಿನಂತೆ ಪುನಃಸ್ಥಾಪಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ಕಾಮಗಾರಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ರೈಲುಗಳು ತಮ್ಮ ನಿಯಮಿತ ಮಾರ್ಗದಲ್ಲಿ ಸಂಚರಿಸಲಿವೆ.

ರೈಲುಗಳ ವಿವರ ಮತ್ತು ಸಂಚಾರದ ಮಾಹಿತಿ:

ರೈಲು ಸಂಖ್ಯೆ 07329 (ಹುಬ್ಬಳ್ಳಿ-ವಿಜಯಪುರ): ಈ ಮೊದಲು ಮಾರ್ಚ್ 24ರಂದು ಬಾಗಲಕೋಟೆ-ವಿಜಯಪುರ ನಡುವೆ ಈ ರೈಲನ್ನು ಭಾಗಶಃ ರದ್ದುಗೊಳಿಸಲಾಗಿತ್ತು. ಬಾಗಲಕೋಟೆಯಲ್ಲಿ ಈ ರೈಲು ಅಂತ್ಯಗೊಳ್ಳಲಿದೆ ಎಂದು ತಿಳಿಸಲಾಗಿತ್ತು. ಆದರೆ, ಈಗಿನ ಪರಿಷ್ಕೃತ ಆದೇಶದಂತೆ ಈ ರೈಲು ಹುಬ್ಬಳ್ಳಿಯಿಂದ ವಿಜಯಪುರದವರೆಗೆ ತನ್ನ ಪೂರ್ಣ ಮಾರ್ಗದಲ್ಲಿ ಎಂದಿನಂತೆ ಸಂಚರಿಸಲಿದೆ.

ರೈಲು ಸಂಖ್ಯೆ 07330 (ವಿಜಯಪುರ-ಹುಬ್ಬಳ್ಳಿ): ಮಾರ್ಚ್ 25ರಂದು ವಿಜಯಪುರ-ಬಾಗಲಕೋಟೆ ನಡುವೆ ಭಾಗಶಃ ರದ್ದಾಗಿದ್ದ ಈ ರೈಲು, ವಿಜಯಪುರದ ಬದಲಿಗೆ ಬಾಗಲಕೋಟೆಯಿಂದ ಪ್ರಾರಂಭವಾಗಲಿದೆ ಎಂದು ಈ ಹಿಂದೆ ಘೋಷಿಸಲಾಗಿತ್ತು. ಇದೀಗ ಈ ಬದಲಾವಣೆಯನ್ನು ಹಿಂಪಡೆಯಲಾಗಿದ್ದು, ರೈಲು ವಿಜಯಪುರದಿಂದಲೇ ತನ್ನ ಪ್ರಯಾಣ ಆರಂಭಿಸಿ ಹುಬ್ಬಳ್ಳಿವರೆಗೆ ಸಂಪೂರ್ಣ ಸೇವೆ ನೀಡಲಿದೆ.

ಲೆವೆಲ್ ಕ್ರಾಸಿಂಗ್ ಕಾಮಗಾರಿಯಿಂದಾಗಿ ಸಂಚಾರ ವ್ಯತ್ಯಯ ಅನುಭವಿಸಿದ್ದ ಪ್ರಯಾಣಿಕರಿಗೆ ಈಗ ರೈಲ್ವೆ ಇಲಾಖೆಯ ಈ ನಿರ್ಧಾರದಿಂದ ದೊಡ್ಡ ಸಮಾಧಾನ ಸಿಕ್ಕಂತಾಗಿದೆ.

# ನ್ಯಾ. ನಾಗಮೋಹನ್ ದಾಸ್ ವರದಿ ಅವೈಜ್ಞಾನಿಕ; 25ಕ್ಕೆ ಬೆಂಗಳೂರು ಚಲೋ

ತುಮಕೂರು

ಒಳಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ನ್ಯಾ. ನಾಗಮೋಹನ್ ದಾಸ್ ಆಯೋಗ ನೀಡಿರುವ ವರದಿಯು ಅತ್ಯಂತ ಅವೈಜ್ಞಾನಿಕ ಮತ್ತು ದೋಷಪೂರಿತವಾಗಿದೆ ಎಂದು ಆರೋಪಿಸಿರುವ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟವು, ಇದರ ವಿರುದ್ಧ ಇದೇ 25ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

ನಗರದಲ್ಲಿಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಮುಖಂಡ ಸಿ. ಭಾನುಪ್ರಕಾಶ್, "ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿಗಳ ನೇತೃತ್ವದಲ್ಲಿ ಈ ಹೋರಾಟ ನಡೆಯಲಿದ್ದು, ತುಮಕೂರು ಜಿಲ್ಲೆಯೊಂದರಿಂದಲೇ 25 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ," ಎಂದು ತಿಳಿಸಿದರು.

<u>ಹೊಲೆಯ ಸಮುದಾಯಕ್ಕೆ ಅನ್ಯಾಯದ ಭೀತಿ:</u> ನ್ಯಾ. ನಾಗಮೋಹನ್ ದಾಸ್ ವರದಿಯು ಪಕ್ಷಪಾತದಿಂದ ಕೂಡಿದೆ ಎಂದು ಆರೋಪಿಸಿದ ಭಾನುಪ್ರಕಾಶ್, "ಈ ವರದಿಯು ಗೊಂದಲ ಬಗೆಹರಿಸುವ ಬದಲು ಹೊಲೆಯ ಸಮುದಾಯದ ಹಿತಾಸಕ್ತಿಗೆ ಧಕ್ಕೆ ತರುತ್ತಿದೆ. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಮೀಸಲಾತಿ ಸಮಾನವಾಗಿ ಹಂಚಿಕೆಯಾಗಬೇಕಾದರೆ ಮೀಸಲಾತಿ ಪ್ರಮಾಣ ಹೆಚ್ಚಾಗಬೇಕು. ಕೇವಲ ಒಂದು ಜಾತಿಯ ಒತ್ತಡಕ್ಕೆ ಮಣಿದು ಒಳಮೀಸಲಾತಿ ಜಾರಿಗೊಳಿಸುವುದು ಸರಿಯಲ್ಲ," ಎಂದು ಎಚ್ಚರಿಸಿದರು.



<u>ಪ್ರಮುಖ ಬೇಡಿಕೆಗಳು:</u>
ಡಿಸಿಎಂಎಸ್ ಅಧ್ಯಕ್ಷ ಡಾ. ಚಂದ್ರಪ್ಪ ಅವರು ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಪ್ರಮುಖ ಬೇಡಿಕೆಗಳನ್ನು ಮಂಡಿಸಿದರು.

<u>ವರದಿ ತಿರಸ್ಕರಿಸಿ:</u> ಅವೈಜ್ಞಾನಿಕವಾಗಿರುವ ನ್ಯಾ. ನಾಗಮೋಹನ್ ದಾಸ್ ವರದಿಯನ್ನು ಸರ್ಕಾರ ಕೂಡಲೇ ರದ್ದುಪಡಿಸಬೇಕು.

<u>ಮರು ಸಮೀಕ್ಷೆ:</u> ಓಬಿಸಿ ಆಯೋಗದ ವರದಿಯೊಂದಿಗೆ ಈ ವರದಿಯನ್ನು ತಾಳೆ ಹಾಕಿ, ವ್ಯತ್ಯಾಸವಿದ್ದರೆ ಪುನರ್ ಸಮೀಕ್ಷೆ ನಡೆಸಬೇಕು.

<u>ಆದೇಶ ಹಿಂಪಡೆಯಿರಿ:</u> ಮಾನದಂಡಗಳಿಲ್ಲದೆ 3–9–2025ರಂದು ಹೊರಡಿಸಿರುವ ಮೀಸಲಾತಿ ಆದೇಶವನ್ನು ವಾಪಸ್ ಪಡೆಯಬೇಕು.

<u>ಜಾತಿ ಪ್ರಮಾಣಪತ್ರ:</u> ಜಾತಿ ಪ್ರಮಾಣಪತ್ರಗಳಲ್ಲಿ 'ಮೂಲ ಜಾತಿ' ನಮೂದಿಸುವುದನ್ನು ಕಡ್ಡಾಯಗೊಳಿಸಬೇಕು.

<u>ಬಲಗೈ ಸಮುದಾಯಗಳ ಒಗ್ಗೂಡಿಸುವಿಕೆ:</u> ಬಲಗೈ ಸಮುದಾಯಕ್ಕೆ ಸೇರಿದ 63 ಜಾತಿಗಳನ್ನು ಒಂದು ಗುಂಪಿಗೆ ತಂದು ಸೌಲಭ್ಯ ನೀಡಬೇಕು.

<u>ರೋಸ್ಟರ್ ಬಿಂದುಗಳಿಂದ ಅನ್ಯಾಯ:</u> ಮುಖಂಡ ಶ್ರೀನಿವಾಸ್ ಮಾತನಾಡಿ, "ಪ್ರಸ್ತುತ ನೇಮಕಾತಿ ಮತ್ತು ಶೈಕ್ಷಣಿಕ ಪ್ರವೇಶಗಳಲ್ಲಿನ ರೋಸ್ಟರ್ ಬಿಂದುಗಳನ್ನು ಗಮನಿಸಿದರೆ ಬಲಗೈ ಸಮುದಾಯ ಸೇರಿದಂತೆ ಇತರೆ ವರ್ಗಗಳಿಗೆ ಭಾರಿ ಅನ್ಯಾಯವಾಗಲಿದೆ. ಈ ವ್ಯವಸ್ಥೆ ಮುಂದುವರಿದರೆ ಒಂದು ವರ್ಗವನ್ನು ಹೊರತುಪಡಿಸಿ ಉಳಿದವರಿಗೆ ಉದ್ಯೋಗ ಮತ್ತು ಶಿಕ್ಷಣ ಮರೀಚಿಕೆಯಾಗಲಿದೆ," ಎಂದು ಆತಂಕ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಛಲವಾದಿ ಶೇಖರ್, ಸಿದ್ದಲಿಂಗಯ್ಯ, ಭೈರೇಶ್, ಕೃಷ್ಣಪ್ಪ ಹೆಗ್ಗೆರೆ, ಗಿರಿಜೇಶ್, ಜಿ.ಆರ್. ಅಪ್ಪಾಜಯ್ಯ, ಇಂದ್ರಕುಮಾರ್, ವಕೀಲರಾದ ನಾಗೇಶ್, ಗಂಗಾಂಜನೇಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪಾವಗಡದಲ್ಲಿ ಸಂಭ್ರಮದ ಯುಗಾದಿ ವರ್ಷದೊಡಕು ಆಚರಣೆ

ಪಾವಗಡ

ತಾಲ್ಲೂಕಿನ ಗ್ರಾಮೀಣ ಪ್ರದೇಶದ ಜನಪದೀಯ ಸೊಗಡಿನ ಯುಗಾದಿ ಹಬ್ಬದ ಆಚರಣೆಯು ಈ ಬಾರಿ ಪಟ್ಟಣದ ವಾಸಿಗಳಲ್ಲೂ ಹಾಸುಹೊಕ್ಕಾಗಿ ಕಂಡುಬಂದಿತು. ಯುಗಾದಿ ಹಬ್ಬದ ಮರುದಿನದ 'ವರ್ಷದೊಡಕು' ಆಚರಣೆಯು ಭಾನುವಾರ ಪಟ್ಟಣ ಮತ್ತು ಗ್ರಾಮೀಣ ಭಾಗಗಳಲ್ಲಿ ಅತ್ಯಂತ ಸಂಭ್ರಮದಿಂದ ಜರುಗಿತು.

<u>ವಾರದ ಲೆಕ್ಕಾಚಾರ ಭಾನುವಾರವೇ ಬಾಡೂಟದ ಹಬ್ಬ:</u>
ಈ ಬಾರಿ ಯುಗಾದಿ ಹಬ್ಬವು ಗುರುವಾರ ಬಂದಿದ್ದರಿಂದ, ಸಂಪ್ರದಾಯಸ್ಥ ಕುಟುಂಬಗಳು ಶುಕ್ರವಾರ (ಲಕ್ಷ್ಮಿವಾರ) ಹಾಗೂ ಶನಿವಾರ (ವೆಂಕಟೇಶ್ವರನ ವಾರ) ಮಾಂಸ ಸೇವನೆಯಿಂದ ದೂರವಿದ್ದವು. ಹೀಗಾಗಿ, ಭಾನುವಾರ ಬಹುತೇಕ ಕುಟುಂಬಗಳು ವರ್ಷದೊಡಕನ್ನು ಆಚರಿಸಿ, ಮಾಂಸಹಾರದ ಉಣಿಸಿನೊಂದಿಗೆ ಹಬ್ಬದ ಸವಿಯನ್ನು ಸವಿದವು.



<u>ವಂಚನೆ ರಹಿತ 'ಗುಡ್ಡೆಬಾಡು' ಪದ್ಧತಿಗೆ ಒತ್ತು:</u>
ಮಾರುಕಟ್ಟೆಯ ಮಾಂಸದ ಅಂಗಡಿಗಳಲ್ಲಿ ತೂಕ ಮತ್ತು ಗುಣಮಟ್ಟದಲ್ಲಿ ಗ್ರಾಹಕರಿಗೆ ವಂಚನೆಯಾಗುವ ಆತಂಕವಿರುತ್ತದೆ. ಆದರೆ ಪಾವಗಡದ ಗ್ರಾಮೀಣ ಭಾಗದಲ್ಲಿ ಇಂದಿಗೂ 'ಗುಡ್ಡೆಬಾಡು' (ಕುರಿ–ಮೇಕೆಗಳನ್ನು ಗುಂಪಾಗಿ ಕೊಂಡು ಮಾಂಸ ಹಂಚಿಕೊಳ್ಳುವುದು) ಪದ್ಧತಿ ಜೀವಂತವಾಗಿದೆ.

"ಎಂಟತ್ತು ಮಂದಿ ಸ್ನೇಹಿತರು ಅಥವಾ ಸಂಬಂಧಿಕರು ಸೇರಿ ಕುರಿ–ಮೇಕೆಯನ್ನು ತಂದು ಸಮನಾಗಿ ಹಂಚಿಕೊಳ್ಳುವ ಈ ಪದ್ಧತಿಯು ಕೇವಲ ಮಾಂಸ ಹಂಚಿಕೆಯಲ್ಲ, ಇದು ಸಮಾನತೆ ಮತ್ತು ಸೌಹಾರ್ದತೆಯ ಸಂಕೇತ. ಇದರಿಂದ ಗ್ರಾಹಕರಿಗೆ ಗುಣಮಟ್ಟದ ಮಾಂಸ ಸಿಗುವುದಲ್ಲದೆ ಯಾವುದೇ ಅನ್ಯಾಯವಾಗುವುದಿಲ್ಲ," ಎಂದು ಗುಟ್ಟಹಳ್ಳಿ ಪಾತಣ್ಣ ಭೋವಿ ಅಭಿಪ್ರಾಯಪಟ್ಟಿದ್ದಾರೆ.

<u>ಸ್ವದೇಶಿ ಚಿಂತನೆ ಮತ್ತು ಭಾರತೀಕರಣದ ಮೊರೆ:</u>
ಗ್ರಾಮೀಣ ಸೊಗಡು ನಗರ ಪ್ರದೇಶಗಳಿಗೂ ಹರಡಬೇಕು ಎಂಬ ಆಶಯ ಈ ಬಾರಿಯ ಹಬ್ಬದಲ್ಲಿ ಕಂಡುಬಂದಿತು. ಹಿರಿಯರ ಮಾತಿನಂತೆ, "ಜಾಗತೀಕರಣಕ್ಕಿಂತ ಭಾರತೀಕರಣ ಮುಖ್ಯ. ಸ್ವದೇಶಿ ಬಳಸಿ, ದೇಶ ಉಳಿಸಿ ಹಾಗೂ ಆಚಾರವೇ ಔಷಧ" ಎಂಬ ಘೋಷಣೆಗಳು ನಮ್ಮ ಸಂಸ್ಕೃತಿಯ ಉಳಿವಿಗೆ ಪೂರಕವಾಗಿವೆ. ರೈತಾಪಿ ವರ್ಗ ಮತ್ತು ಅಧಿಕಾರಿಗಳು ಬಡ–ಬಗ್ಗರಿಗೆ ಮಾಂಸದ ಪಾಲು ಹಂಚುವ ಮೂಲಕ ಜನಪದ ಸಂಸ್ಕೃತಿಯನ್ನು ಮರುಕಳಿಸುವಂತೆ ಮಾಡಬೇಕು ಎಂಬ ಮಾತುಗಳು ಕೇಳಿಬಂದವು.

<u>ಪೊಲೀಸ್ ಕಣ್ಗಾವಲು ಗುಪ್ತವಾಗಿ ನಡೆದ ಜೂಜಾಟ:</u>
ಯುಗಾದಿ ಹಬ್ಬದ ಅಂಗವಾಗಿ ಸಾರ್ವಜನಿಕವಾಗಿ ಜೂಜಾಟ ಆಡಲು ಪೊಲೀಸರು ಕಟ್ಟುನಿಟ್ಟಿನ ಅವಕಾಶ ನೀಡದ ಕಾರಣ, ಜೂಜುಕೋರರು ತಮ್ಮ ಅಡ್ಡಾವನ್ನು ಬದಲಿಸಿದ್ದರು. ಹಳೆಯ ಮನೆಗಳು, ಲಾಡ್ಜ್‌ಗಳು ಹಾಗೂ ಖಾಸಗಿ ರೂಮ್‌ಗಳಲ್ಲಿ ಗುರುವಾರದಿಂದ ಭಾನುವಾರದವರೆಗೆ ಜೂಜಾಟ ನಡೆದ ವರದಿಗಳು ಬಂದಿವೆ. ಭಾನುವಾರ ಮಧ್ಯಾಹ್ನವಾಗುತ್ತಿದ್ದಂತೆ ಬಾಡೂಟದ ಅಮಲಿನಲ್ಲಿ ಸಾರ್ವಜನಿಕ ಸಂಚಾರ ಕ್ಷೀಣಿಸಿ, ಪಟ್ಟಣದ ರಸ್ತೆಗಳು ಖಾಲಿ ಹೊಡೆಯುತ್ತಿದ್ದವು.

# ಸಿದ್ದರಬೆಟ್ಟದ ಶ್ರೀಮಠದ 20ನೇ ವಾರ್ಷಿಕೋತ್ಸವ: ಜೂನ್ 21ಕ್ಕೆ ಉಚಿತ ಸಾಮೂಹಿಕ ವಿವಾಹ

ಕೊರಟಗೆರೆ

ತಾಲ್ಲೂಕಿನ ಪುಣ್ಯಕ್ಷೇತ್ರ ಸಿದ್ದರಬೆಟ್ಟದ ಶ್ರೀ ರಂಭಾಪುರಿ ಖಾಸಾ ಶಾಖಾ ಮಠದ 20ನೇ ವಾರ್ಷಿಕೋತ್ಸವದ ಅಂಗವಾಗಿ ಜೂನ್ 21ರಂದು ಬೃಹತ್ ಉಚಿತ ಸಾಮೂಹಿಕ ವಿವಾಹ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಮಠದ ಪೀಠಾಧ್ಯಕ್ಷರಾದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀ ಮಠದಲ್ಲಿ ನಡೆದ ಪೂರ್ವಭಾವಿ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜೂನ್ 21ರ ಭಾನುವಾರ ಶ್ರೀ ಜಗದ್ಗುರು ರೇಣುಕಾಚಾರ್ಯ ಮತ್ತು ಜಗಜ್ಯೋತಿ ಬಸವೇಶ್ವರರ ಜಯಂತ್ಯೋತ್ಸವದೊಂದಿಗೆ ಸಾಮೂಹಿಕ ವಿವಾಹ ಹಾಗೂ ಉಚಿತ ದೀಕ್ಷಾ ಸಂಸ್ಕಾರ ಕಾರ್ಯಕ್ರಮಗಳು ಜರುಗಲಿವೆ ಎಂದರು.



<u>ಧರ್ಮಸ್ಥಳದಿಂದ ಮಾಂಗಲ್ಯ ಭಾಗ್ಯ:</u>
ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡಲಿರುವ ವಧು–ವರರಿಗೆ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ಮಾಂಗಲ್ಯವನ್ನು ನೀಡಲಿದ್ದಾರೆ. ವಿವಾಹವಾಗ ಬಯಸುವ ವಧು–ವರರ ಪೋಷಕರು ಅಗತ್ಯ ದಾಖಲೆಗಳೊಂದಿಗೆ ಮೇ 31ರ ಒಳಗಾಗಿ ಶ್ರೀ ಮಠದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಶ್ರೀಗಳು ಮನವಿ ಮಾಡಿದರು.

<u>ಡಾ. ವೀರೇಂದ್ರ ಹೆಗ್ಗಡೆಯವರಿಗೆ 'ಸಿದ್ದಶ್ರೀ' ಪುರಸ್ಕಾರ:</u> ಶ್ರೀ ಮಠದ ವತಿಯಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವ ಪ್ರತಿಷ್ಠಿತ 'ಸಿದ್ದಶ್ರೀ' ಪ್ರಶಸ್ತಿಯನ್ನು ಈ ಬಾರಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರಿಗೆ ಪ್ರದಾನ ಮಾಡಲಾಗುವುದು.

ರಾಜ್ಯ ಸರ್ಕಾರದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಮಾರಂಭದಲ್ಲಿ ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಸೇರಿದಂತೆ ರಾಜ್ಯದ ವಿವಿಧ ಮಠಾಧೀಶರು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ. ಪೂರ್ವಭಾವಿ ಸಭೆಯಲ್ಲಿ ಪರ್ವ ಗ್ರೂಪ್ ಸಂಸ್ಥಾಪಕ ನೀಲೇಶ್, ಜೆಡಿಎಸ್ ಅಧ್ಯಕ್ಷ ಕಾಮರಾಜು, ಗೋಂದಿಹಳ್ಳಿ ರಂಗರಾಜು, ಬಿಜೆಪಿ ಅಧ್ಯಕ್ಷ ಡಾ. ದರ್ಶನ್, ಮುಖಂಡರಾದ ಸೋಮಣ್ಣ, ಆರ್.ಎಸ್. ರಾಜಣ್ಣ, ಬಿಪಿಎಸ್ ಕುಮಾರ್, ಶಿವಕುಮಾರ್, ಪಂಚಾಕ್ಷರಯ್ಯ ಸೇರಿದಂತೆ ಶ್ರೀ ಮಠದ ನೂರಾರು ಸದ್ಭಕ್ತರು

# ಕನಕಪುರದ ಪೈಲ್ವಾನ್‌ರಿಗೆ ಪ್ರಶಸ್ತಿಗಳ ಸುರಿಮಳೆ

ಕನಕಪುರ

ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಇತ್ತೀಚೆಗೆ (ಇದೇ 20 ಮತ್ತು 21) ನಡೆದ ವಿಭಾಗ ಮಟ್ಟದ ಬಾಲಕ, ಬಾಲಕಿ ಹಾಗೂ ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಕನಕಪುರದ ಪೈಲ್ವಾನರು ಅದ್ಭುತ ಸಾಧನೆ ಮಾಡುವ ಮೂಲಕ ನಗರಕ್ಕೆ ಕೀರ್ತಿ ತಂದಿದ್ದಾರೆ.

57 ಕೆಜಿ ವಿಭಾಗದ ಕುಸ್ತಿಗೆ ಇಳಿದಿದ್ದ ಕನಕಪುರದ ಪ್ರತಿಭಾವಂತ ಪೈಲ್ವಾನ್ ಅಭಿಷೇಕ್ ಆರ್. ಅವರು ಎದುರಾಳಿಗಳನ್ನು ಮಣಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಅಮೋಘ ಸಾಧನೆಗಾಗಿ ಅವರಿಗೆ ಪ್ರತಿಷ್ಠಿತ 'ಶ್ರೀ ಮಲೆ ಮಹದೇಶ್ವರ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕನಕಪುರದ ಇತರ ಪೈಲ್ವಾನರು ಕೂಡ ವಿವಿಧ ವಿಭಾಗಗಳಲ್ಲಿ ಪದಕಗಳನ್ನು ಗೆಲ್ಲುವ ಮೂಲಕ ತಮ್ಮ ಕಸುವನ್ನು ಪ್ರದರ್ಶಿಸಿದ್ದಾರೆ.

ಪೈಲ್ವಾನ್ ಮನೋಜ್ ಎನ್.: 84+ ಕೆಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ. ಪೈಲ್ವಾನ್ ನವೀನ್ ಗೌಡ ಪಿ.ಟಿ.: 55 ಕೆಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ. ಪೈಲ್ವಾನ್ ವಸಂತ್ ಕೆ.ಎಸ್.: 74 ಕೆಜಿ ವಿಭಾಗದಲ್ಲಿ ತೃತೀಯ ಸ್ಥಾನ.

ಈ ಎಲ್ಲಾ ಸಾಧಕ ಪೈಲ್ವಾನರು ಭಾರತೀಯ ಶೈಲಿ ಕರ್ನಾಟಕ ಕುಸ್ತಿ ಸಂಘ (ರಿ) ಮತ್ತು ರುಸ್ತುಮ್–ಇ–ಹಿಂದ್ ರೆಸ್ಲಿಂಗ್ ವೆಲ್‌ಫೇರ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಯಾದ ಕೆ.ಎನ್. ವಿಜಯ್ ಕುಮಾರ್ ಅವರ ಬಳಿ ಕಠಿಣ ತರಬೇತಿ ಪಡೆಯುತ್ತಿದ್ದಾರೆ.


ಪೈಲ್ವಾನರ ಈ ಗೆಲುವಿಗೆ ಕನಕಪುರದ ಚಾವಡಿ ಗರಡಿಯ ಉಸ್ತಾದ್ ಖಲೀಫರು, ಹಿರಿಯ–ಕಿರಿಯ ಪೈಲ್ವಾನರು ಹಾಗೂ ರಾಮನಗರ ಜಿಲ್ಲಾ ಅಮೆಚೂರ್ ಕುಸ್ತಿ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿ ಶುಭಾಶಯ ಕೋರಿದ್ದಾರೆ.

# ವಾಣಿಜ್ಯ ಸಿಲಿಂಡರ್ ಅಭಾವ; ಹೋಟೆಲ್ ಉದ್ಯಮಕ್ಕೆ ಭಾರಿ ಪೆಟ್ಟು

ವಿಜಯಪುರ

ವಾಣಿಜ್ಯ ಸಿಲಿಂಡರ್‌ಗಳ ಅಭಾವದಿಂದಾಗಿ, ಹೋಟೇಲ್ ಉದ್ಯಮ ನಡೆಸುವುದು ತುಂಬಾ ಕಷ್ಟಕರವಾಗಿದ್ದು, ಹೋಟೇಲ್ ಕಟ್ಟಡದ ಬಾಡಿಗೆ ಕಟ್ಟುವುದಕ್ಕು ಸಾಧ್ಯವಾಗುತ್ತಿಲ್ಲ. ಸರಕಾರ, ವಾಣಿಜ್ಯ ಸಿಲಿಂಡರುಗಳ ಪೂರೈಕೆಗೆ ತ್ವರಿತವಾಗಿ ವ್ಯವಸ್ಥೆ ಮಾಡಬೇಕು ಎಂದು ಹೋಟೇಲ್ ಮಾಲೀಕರು ಒತ್ತಾಯಿಸಿದ್ದಾರೆ.

ಹೋಟೇಲ್ ಉದ್ಯಮದಲ್ಲಿ, ಬಹುತೇಕ ಆಹಾರವನ್ನು ತಯಾರಿಸುವುದಕ್ಕೆ ಸಿಲಿಂಡರುಗಳ ಮೇಲೆ ಅವಲಂಬಿತರಾಗಿದ್ದೇವೆ. ಒಂದು ದಿನಕ್ಕೆ ಒಂದೂವರೆ ಸಿಲಿಂಡರ್ ಬೇಕು. ಕಳೆದ 20 ದಿನಗಳಿಂದ, ನಮಗೆ, ಸರಿಯಾಗಿ ವಾಣಿಜ್ಯ ಸಿಲಿಂಡರ್ ಸಿಗದ ಕಾರಣ, ಸೌದೆ ಮೊರೆ ಹೋಗಿದ್ದೇವೆ. ಸೌದೆಯಲ್ಲಿ ಅಡುಗೆ ತಯಾರಿಸುವಾಗ ಹೊಗೆ ಸುತ್ತಿಕೊಳ್ಳುತ್ತಿದ್ದು, ಗ್ರಾಹಕರು, ಬಂದು ಕುಳಿತುಕೊಂಡು ಊಟ ಮಾಡುವುದಕ್ಕೆ ಹಿಂಜರಿಯುವಂತಹ ಸ್ಥಿತಿ ನಿರ್ಮಾಣವಾಗಿದೆ. ನಾವು ಆಹಾರದ ಮೆನುವಿನಲ್ಲಿ ಸಾಕಷ್ಟು ಬದಲಾವಣೆ ಮಾಡಿದರೂ, ಗ್ರಾಹಕರು, ಇಷ್ಟ ಪಡುವಂತಹ ದೋಸೆ, ವಡೆ ಮುಂತಾದ ಆಹಾರವನ್ನು ನೀಡಲಾಗದ ಕಾರಣ, ಗ್ರಾಹಕರ ಸಂಖ್ಯೆ ಕಡಿಮೆಯಾಗುತ್ತಿದೆ.



ತಿಂಗಳಿಗೆ ಬಾಡಿಗೆ ಕಟ್ಟುವುದಕ್ಕೆ, ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೇತನ ಕೊಡುವುದಕ್ಕೆ, ವಿದ್ಯುತ್ ಬಿಲ್ ಕಟ್ಟುವುದಕ್ಕೆ ತುಂಬಾ ಕಷ್ಟವಾಗುತ್ತಿದೆ. ಸಿಲಿಂಡರುಗಳ ಕೊರತೆ ಎದುರಾಗುತ್ತಿದ್ದಂತೆ, ಸೌದೆಯ ಬೆಲೆಯೂ ಜಾಸ್ತಿಯಾಗಿದೆ. ಒಂದು ಟನ್ ಸೌದೆ ಮೊದಲು 4 ಸಾವಿರ ಇತ್ತು ಸಿಲಿಂಡರ್ ಅಭಾವದ ಸಮಯದಲ್ಲಿ 6 ಸಾವಿರಕ್ಕೆ ಏರಿಕೆ ಮಾಡಿದ್ದಾರೆ. ವ್ಯಾಪಾರ ವಹಿವಾಟು ಇಲ್ಲದೆ, ಸೌದೆ ಖರೀದಿಸುವುದಕ್ಕೂ ಕಷ್ಟವಾಗುತ್ತಿದೆ ಎಂದು ಶಾಂತಿಸಾಗರ್ ಹೋಟೇಲ್ ಮಾಲೀಕ ಶಾಂತಕುಮಾರ್ ಹೇಳಿದರು.

ಹೋಟೇಲ್ ಮಾಲೀಕ ಕಿರಣ್ ಮಾತನಾಡಿ, ನಮಗೆ ಸೌದೆಯಲ್ಲಿ ಅಡುಗೆ ತಯಾರಿಸಲು ಅವಕಾಶವಿಲ್ಲ. ಚಿಕ್ಕ ಹೋಟೇಲ್ ಇಟ್ಟುಕೊಂಡು, ಸಿಲಿಂಡರ್ ಒಲೆಯಲ್ಲಿ ಅಡುಗೆ ತಯಾರಿಸುತ್ತಿದ್ದೇವೆ. ಕಳೆದ ಹದಿನೈದು ದಿನಗಳಿಂದ ನಮಗೆ 2 ಸಿಲಿಂಡರ್ ಸಿಕ್ಕಿಲ್ಲ. ಕಾಫಿ, ಟೀ. ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದೇವೆ. ಸಂಜೆಯ ವೇಳೆ ಲಘು ಉಪಹಾರ ತಯಾರಿಸುವುದನ್ನೂ ಬಿಟ್ಟಿದ್ದೇವೆ. ನಮಗೆ ಮುಖ್ಯವಾಗಿ ಆಹಾರಕ್ಕಿಂತಲೂ ಕಾಫಿ, ಟೀಗಳಿಂದಲೇ ವ್ಯಾಪಾರ ವಹಿವಾಟು ನಡೆಯುತ್ತಿತ್ತು. ಸೌದೆಯಿಂದ ಕಾಫಿ, ಟೀ. ಮಾಡಲು ಸಾಧ್ಯವಾಗಲ್ಲ. ಆದ್ದರಿಂದ ಬೆಳಿಗ್ಗೆ ತಿಂಡಿ, ಮದ್ಯಾಹ್ನ ಊಟ ಮಾತ್ರ ತಯಾರಿಸುತ್ತಿದ್ದೇವೆ. ಇದರಿಂದ ಹೋಟೇಲ್ ಬಾಡಿಗೆ ಕಟ್ಟುವುದಕ್ಕೆ ಕಷ್ಟವಾಗುತ್ತಿದೆ ಎಂದರು.

> ತಳ್ಳುವ ಗಾಡಿಯಲ್ಲಿ, ಸಂಜೆಯ ವೇಳೆ ಆಹಾರ ಮಾರಾಟ ಮಾಡಿಕೊಂಡು, ಜೀವನ ನಡೆಸುತ್ತಿದ್ದೇವು. ಒಂದು ವಾರದಿಂದ ತಳ್ಳುವ ಗಾಡಿಯನ್ನು ಮನೆಯ ಬಳಿ ನಿಲ್ಲಿಸಿಬಿಟ್ಟಿದ್ದೇವೆ. ಬೀದಿಯಲ್ಲಿ ಸೌದೆಯಿಂದ ಅಡುಗೆ ಮಾಡಲು ಆಗಲ್ಲ. ನಾವು ಖಾಸಗಿ ಫೈನಾನ್ಸ್ ನವರ ಬಳಿ ಹಣ ತೆಗೆದುಕೊಂಡು ಬಂಡಿಯಲ್ಲಿ ಕ್ಯಾಂಟೀನ್ ಮಾಡಿದ್ವಿ, ಈಗ ಫೈನಾನ್ಸ್ ನವರಿಗೆ ಹಣ ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ.
> - ಹರೀಶ್, ತಳ್ಳುವ ಬಂಡಿ ವ್ಯಾಪಾರಿ ವಿಜಯಪುರ.

> ಒಂದೊಂದು ಸಿಲಿಂಡರ್ ಒದಗಿಸುವುದು ತುಂಬಾ ಕಷ್ಟವಾಗಿಬಿಟ್ಟಿದೆ. ಪ್ರತಿನಿತ್ಯ ಗ್ರಾಹಕರು ಬಂದು, ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಜನರಿಗೆ ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ಎರಡ್ಮೂರು ದಿನಗಳಲ್ಲಿ ಸಮಸ್ಯೆ ಬಗೆಹರಿಯಲಿದೆ ಎಂದು ಹೇಳಿದ್ದಾರೆ. ಕಾದು ನೋಡುತ್ತಿದ್ದೇವೆ.
> - ನಟರಾಜ್ ಗ್ಯಾಸ್ ಏಜೆನ್ಸಿ ವಿಜಯಪುರ.

# ಒಳಮೀಸಲಾತಿ
## ವಿಂಗಡಣೆ ವಿರುದ್ಧ ಪ್ರತಿಭಟನೆ

ದೊಡ್ಡಬಳ್ಳಾಪುರ

ಒಳಮೀಸಲಾತಿ ಜಾರಿಗೊಳಿಸುವಲ್ಲಿ ಭೋವಿ, ಕೊರಚ, ಕೊರಮ ಹಾಗೂ ಲಂಬಾಣಿ ಸಮುದಾಯಗಳಿಗೆ ರಾಜ್ಯ ಸರ್ಕಾರದಿಂದ ಸೂಕ್ತ ನ್ಯಾಯ ದೊರೆತಿಲ್ಲ ಎಂದು ಆರೋಪಿಸಿರುವ ತಾಲ್ಲೂಕು ಭೋವಿ ಜನಾಂಗ ಸಂಘವು, 24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

ನಗರದ ಸಂಘದ ತಾಲ್ಲೂಕು ಕೇಂದ್ರ ಕಚೇರಿಯಲ್ಲಿ ನಡೆದ ಸಮಾಲೋಚನಾ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಸಂಘದ ಅಧ್ಯಕ್ಷ ರಾಮಕೃಷ್ಣ, "ನಮ್ಮ ಸಮುದಾಯಗಳಿಗೆ ಒಳಮೀಸಲಾತಿ ನೀಡುವ ವಿಚಾರದಲ್ಲಿ ದೊಡ್ಡ ಮಟ್ಟದ ಮೋಸವಾಗಿದೆ. ಈ ಅನ್ಯಾಯವನ್ನು ಸರಿಪಡಿಸಲು ನಾವು ಹೋರಾಟಕ್ಕೆ ಮುಂದಾಗಿದ್ದೇವೆ," ಎಂದು ತಿಳಿಸಿದರು.


ಒಳಮೀಸಲಾತಿಯ ಹೊಸ ವರ್ಗೀಕರಣದಿಂದ ಬಡ ಸಮುದಾಯಗಳಿಗೆ ಹೊಡೆತ ಬಿದ್ದಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, "ಹಿಂದೆ ಜಾರಿಯಲ್ಲಿದ್ದ ಮೀಸಲಾತಿ ವಿಧಾನವನ್ನೇ ಯಥಾವತ್ ಮುಂದುವರಿಸಬೇಕು ಅಥವಾ ನಮ್ಮ ಸಮುದಾಯಗಳಿಗೆ ಹೆಚ್ಚಿನ ಮೀಸಲಾತಿ ಒದಗಿಸಬೇಕು. ಕಡುಬಡ ಕುಟುಂಬಗಳಿಂದ ಕೂಡಿರುವ ನಮ್ಮ ಜನರಿಗೆ ಸರ್ಕಾರ ನ್ಯಾಯ ಒದಗಿಸಬೇಕು," ಎಂದು ಆಗ್ರಹಿಸಿದರು.

<u>ಸಾವಿರಾರು ಸಂಖ್ಯೆಯಲ್ಲಿ ಜನ ಜಮಾವಣೆ:</u>
24ರ ಪ್ರತಿಭಟನೆಗಾಗಿ ದೊಡ್ಡಬಳ್ಳಾಪುರ ತಾಲ್ಲೂಕಿನಿಂದ ಬಸ್ ಮತ್ತು ಇತರೆ ವಾಹನಗಳ ಮೂಲಕ ಸಾವಿರಾರು ಸಂಖ್ಯೆಯಲ್ಲಿ ಸಮುದಾಯದ ಬಂಧುಗಳು ಬೆಂಗಳೂರಿಗೆ ತೆರಳಲು ತೀರ್ಮಾನಿಸಿದ್ದಾರೆ. ಎಲ್ಲಾ ವರ್ಗದ ಜನರು ಈ ಹಕ್ಕಿನ ಹೋರಾಟದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.

ಈ ಸಭೆಯಲ್ಲಿ ಹಿರಿಯ ಉಪಾಧ್ಯಕ್ಷ ಕೆ.ವಿ. ವೆಂಕಟರಮಣಪ್ಪ, ಉಪಾಧ್ಯಕ್ಷ ರಾಮಯ್ಯ, ಸಂಘಟನಾ ಕಾರ್ಯದರ್ಶಿ ಸುಗ್ರೀವಪ್ಪ, ತಾಲ್ಲೂಕು ಯುವ ಉಪಾಧ್ಯಕ್ಷ ಶ್ರೀನಿವಾಸ್, ಮದುರೆ ಹೋಬಳಿ ಅಧ್ಯಕ್ಷ ಮುನಿರಾಜು, ನಗರ ಘಟಕ ಅಧ್ಯಕ್ಷ ಮಂಜುನಾಥ್, ಕಸಬಾ ಹೋಬಳಿ ಅಧ್ಯಕ್ಷ ಶ್ರೀನಿವಾಸ್, ಸಾಸಲು ಹೋಬಳಿ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ಸಮುದಾಯದ ಅನೇಕ ಮುಖಂಡರು ಉಪಸ್ಥಿತರಿದ್ದರು.



# ಗ್ಯಾಸ್ ಏಜೆನ್ಸಿಗಳ ಗೋಡೌನ್ ಪರಿಶೀಲನೆ



ಬಂಗಾರಪೇಟೆ

ಪಟ್ಟಣದ ಭಾರತ್ ಗ್ಯಾಸ್ ಕಚೇರಿ ಬಳಿ ಪ್ರತಿದಿನ ಗ್ರಾಹಕರ ಜನಸಂದಣಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ತಹಶೀಲ್ದಾರ್ ಸುಜಾತ ಹಾಗೂ ಆಹಾರ ನಿರೀಕ್ಷಕ ಚೌಡಪ್ಪ ಜಿ.ವಿ. ಅವರು ಸೋಮವಾರ ಗ್ಯಾಸ್ ಏಜೆನ್ಸಿ ಕಚೇರಿ ಮತ್ತು ಗೋಡೌನ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ಯಾಸ್ ಸಿಲಿಂಡರ್‌ಗಳ ದಾಸ್ತಾನು ಮತ್ತು ವಿತರಣೆಯ ಮಾಹಿತಿ ಪಡೆದ ತಹಶೀಲ್ದಾರ್ ಸುಜಾತ ಅವರು ಏಜೆನ್ಸಿ ಮಾಲೀಕರಿಗೆ ಕಠಿಣ ಎಚ್ಚರಿಕೆ ನೀಡಿದರು. "ಸಿಲಿಂಡರ್‌ಗಳ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವುದು ಕಂಡುಬಂದರೆ ಅಂತಹ ಏಜೆನ್ಸಿಗಳ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಲಾಗುವುದು," ಎಂದು ತಿಳಿಸಿದರು.

ಸಿಲಿಂಡರ್ ಪಡೆಯಲು ಬರುವ ಗ್ರಾಹಕರು ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲದಂತೆ ಕ್ರಮ ವಹಿಸಬೇಕು. ಜನಸಂದಣಿಯನ್ನು ನಿಯಂತ್ರಿಸಿ, ಸಾರ್ವಜನಿಕರಿಗೆ ಯಾವುದೇ ರೀತಿಯ ಕಿರುಕುಳ ನೀಡದೆ ಸುಗಮವಾಗಿ ಸೇವೆ ಒದಗಿಸಬೇಕು ಎಂದು ಅವರು ಅಧಿಕಾರಿಗಳಿಗೆ ಮತ್ತು ಏಜೆನ್ಸಿ ಸಿಬ್ಬಂದಿಗೆ ಸೂಚಿಸಿದರು.

# ಪತ್ರಕರ್ತರ ಭದ್ರತೆಗೆ ಉಚಿತ ವಿಮೆ ಯೋಜನೆ ಘೋಷಣೆ

ಮಾಗಡಿ

ಪಟ್ಟಣದ ಬಾಲಾಜಿ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವು ಅತ್ಯಂತ ಸಡಗರದಿಂದ ಜರುಗಿತು. ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳಿಗೆ ಅಧಿಕೃತವಾಗಿ ಪ್ರಮಾಣಪತ್ರ ಹಾಗೂ ಗುರುತಿನ ಚೀಟಿಗಳನ್ನು ವಿತರಿಸಲಾಯಿತು.

<u>ಪತ್ರಕರ್ತರ ಸುರಕ್ಷತೆಗೆ ಒತ್ತು:</u> ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ಶಾಸಕ ಎ. ಮಂಜುನಾಥ್ ಮಾತನಾಡಿ, "ಪತ್ರಕರ್ತರು ಸುದ್ದಿಯ ಬೆನ್ನತ್ತಿ ಹೋಗುವ ಭರದಲ್ಲಿ ವಾಹನಗಳನ್ನು ಅತಿ ವೇಗವಾಗಿ ಚಲಾಯಿಸುತ್ತಾರೆ. ಇದು ಕೆಲವೊಮ್ಮೆ ಪ್ರಾಣಾಪಾಯಕ್ಕೆ ಕಾರಣವಾಗಬಹುದು. ಈ ಹಿನ್ನೆಲೆಯಲ್ಲಿ ಪತ್ರಕರ್ತರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಎ. ಮಂಜು ಚಾರಿಟಬಲ್ ಟ್ರಸ್ಟ್ ವತಿಯಿಂದ ತಾಲ್ಲೂಕಿನ ಪತ್ರಕರ್ತರಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ಉಚಿತ ವಿಮೆ ಮಾಡಿಸಿಕೊಡಲು ತಾವು ಬದ್ಧರಾಗಿರುವುದಾಗಿ" ಭರವಸೆ ನೀಡಿದರು.

<u>ಸಮಾಜದ ಕಾವಲುಗಾರರು:</u> ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಚ್.ಎನ್. ಅಶೋಕ್ ಮಾತನಾಡಿ, "ಪತ್ರಕರ್ತರು ಸಮಾಜದ ಕಾವಲುಗಾರರು. ಸಮಾಜದಲ್ಲಿ ನಡೆಯುವ ಘಟನೆಗಳ ಸತ್ಯಾಸತ್ಯತೆಯನ್ನು ಜನರಿಗೆ ಮುಟ್ಟಿಸುವ ಮಹತ್ತರ ಜವಾಬ್ದಾರಿ ನಿಮ್ಮ ಮೇಲಿದೆ. ನಿಮ್ಮ ಹಿತರಕ್ಷಣೆಗಾಗಿ ಕ್ಷೇಮಾಭಿವೃದ್ಧಿ ಸಂಘವನ್ನು ಸ್ಥಾಪಿಸಿ ಸಂಘಟಿತರಾಗುತ್ತಿರುವುದು ಉತ್ತಮ ಬೆಳವಣಿಗೆ. ವೃತ್ತಿಯಲ್ಲಿ ಪ್ರಾಮಾಣಿಕತೆಯನ್ನು ಕಾಪಾಡಿಕೊಳ್ಳಿ" ಎಂದು ಕರೆ ನೀಡಿದರು.

<u>ಪೊಲೀಸ್ ಮತ್ತು ಪತ್ರಕರ್ತರು ಒಂದೇ ನಾಣ್ಯದ ಎರಡು ಮುಖ:</u> ಇನ್ಸ್‌ಪೆಕ್ಟರ್ ಶ್ರೀನಿವಾಸ್ ಮಾತನಾಡಿ, "ಪೊಲೀಸ್ ಇಲಾಖೆ ಮತ್ತು ಪತ್ರಿಕೋದ್ಯಮ ಎರಡೂ ಸಮಾಜದ ಒಳಿತಿಗಾಗಿ ಕೆಲಸ ಮಾಡುತ್ತಿವೆ. ಸಮಾಜದಲ್ಲಿ ನಡೆಯುವ ತಪ್ಪುಗಳನ್ನು ಪತ್ರಕರ್ತರು ನಮ್ಮ ಗಮನಕ್ಕೆ ತಂದಾಗ, ಅವುಗಳನ್ನು ತಿದ್ದಿ ಸರಿಪಡಿಸಲು ನಮಗೆ ಸಾಧ್ಯವಾಗುತ್ತದೆ. ಪೊಲೀಸರು ಮತ್ತು ಪತ್ರಕರ್ತರು ಸಮನ್ವಯತೆಯಿಂದ ಕೆಲಸ ಮಾಡಬೇಕು" ಎಂದರು.


ಕಾರ್ಯಕ್ರಮದಲ್ಲಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಚ್.ಆರ್. ಮಾದೇಶ್, ಮುಖಂಡರಾದ ಜೆ.ಪಿ. ಚಂದ್ರೇಗೌಡ, ಏಳಿಗೆಹಳ್ಳಿ ತಮ್ಮಣ್ಣ, ಜಿ.ಪಂ. ಮಾಜಿ ಅಧ್ಯಕ್ಷ ಎಂ.ಕೆ. ಧನಂಜಯ, ಟಿಎಪಿಸಿಎಂಎಸ್ ಅಧ್ಯಕ್ಷ ಶಿವಪ್ರಸಾದ್, ಶೈಲಜಾ, ಪೊಲೀಸ್ ವಿಜಿ, ರೈತ ಸಂಘದ ಅಧ್ಯಕ್ಷ ಹೊಸಪಾಳ್ಯ ಲೋಕೇಶ್, ಕೆ.ವಿ. ಬಾಲು ಸೇರಿದಂತೆ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

# 27 ಮತ್ತು ಮಾ.31 ರಂದು ಮಾಂಸ ಮಾರಾಟ ನಿಷೇದ

ಹಾಸನ

ಮಾ.27 ರಂದು ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ಹಾಗೂ ಮ.31 ರಂದು ಮಹಾವೀರ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲಾ ಖಸಾಯಿ ಖಾನೆಗಳಲ್ಲಿ ಎಲ್ಲಾ ರೀತಿಯ ಪ್ರಾಣಿವಧೆ ಮತ್ತು ಮಾಂಸ ಮಾರಟವನ್ನು ಕಡ್ಡಾಯವಾಗಿ ನಿಷೇದಿಸಲಾಗಿರುತ್ತದೆ. ಪ್ರಕಟಣೆಯನ್ನು ಮೀರಿ ಪ್ರಾಣಿವಧೆ ಹಾಗೂ ಮಾಂಸ ಮಾರಾಟ ಮಾಡಿದಲ್ಲಿ ನಿಮ್ಮ ವಿರುದ್ಧ ಪಾಲಿಕೆಗಳ ಕಾಯ್ದೆಯಂತೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ಕಾಶಿ ಯಾತ್ರೆಗೆ ಹೋದವರು ಶಿವನ ಪಾದಕ್ಕೆ



ತಿಪಟೂರು

ತೀರ್ಥಯಾತ್ರೆಗೆಂದು ಸಂಭ್ರಮದಿಂದ ಹೊರಟಿದ್ದ ತಿಪಟೂರಿನ ಮಹಿಳೆಯರ ಪಾಲಿಗೆ ವಿಧಿ ಕ್ರೂರವಾಗಿ ವರ್ತಿಸಿದೆ. ಕಾಶಿ ಮತ್ತು ಅಯೋಧ್ಯೆ ದರ್ಶನಕ್ಕಾಗಿ ತೆರಳುತ್ತಿದ್ದ ಟೆಂಪೋ ಟ್ರಾವೆಲರ್ (ಟಿಟಿ) ವಾಹನವು ಬೆಂಗಳೂರಿನ ದೇವನಹಳ್ಳಿ ಸಮೀಪ ಮಧ್ಯರಾತ್ರಿ ನಿಂತಿದ್ದ ಕಂಟೈನರ್‌ಗೆ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಮಹಿಳೆಯರು ಸ್ಥಳದಲ್ಲೇ ಸಾವನ್ನಪ್ಪಿದ ಭೀಕರ ಘಟನೆ ಸಂಭವಿಸಿದೆ.

ಮೃತರನ್ನು ತಿಪಟೂರು ನಗರದ 14ನೇ ವಾರ್ಡ್ ವಿದ್ಯಾನಗರದ ನಿವಾಸಿಗಳಾದ ಜಯಮ್ಮ, ಯಶೋಧ ಮತ್ತು ಗಂಗಾ ಎಂದು ಗುರುತಿಸಲಾಗಿದೆ. ಮತ್ತೋರ್ವ ಮಹಿಳೆ ಕೂಡ ಮೃತಪಟ್ಟಿದ್ದಾರೆ ಎನ್ನಲಾಗಿದ್ದು, ತನಿಖೆಯ ನಂತರ ಅಧಿಕೃತ ಮಾಹಿತಿ ಲಭ್ಯವಾಗಬೇಕಿದೆ.

<u>ದುರಂತ ಸಂಭವಿಸಿದ್ದು ಹೇಗೆ?</u>
ವಿದ್ಯಾನಗರದ ಮಹಿಳೆಯರ ತಂಡವು ಕಾಶಿ ಯಾತ್ರೆಗಾಗಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುತ್ತಿತ್ತು. ಮಧ್ಯರಾತ್ರಿ ಸುಮಾರು 12.15ರ ಸಮಯದಲ್ಲಿ ದೇವನಹಳ್ಳಿ ಸಮೀಪ ರಸ್ತೆ ಬದಿಯಲ್ಲಿ ನಿಂತಿದ್ದ ಕಾಂಟೇನರ್ ವಾಹನಕ್ಕೆ ಟಿಟಿ ಗಾಡಿಯ ಎಡಭಾಗ ಜೋರಾಗಿ ಡಿಕ್ಕಿ ಹೊಡೆದಿದೆ. ವಾಹನದ ಎಡಬದಿಯಲ್ಲಿ ಕುಳಿತಿದ್ದ ಮೂವರು ಮಹಿಳೆಯರು ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಪ್ರಾಣಬಿಟ್ಟಿದ್ದಾರೆ.

<u>ಆಸ್ಪತ್ರೆಗೆ ದಾಖಲು ಕುಟುಂಬಸ್ಥರ ಆಕ್ರಂದನ:</u>
ಅಪಘಾತದಲ್ಲಿ ಗಾಯಗೊಂಡಿರುವ ಇತರ ಮಹಿಳೆಯರನ್ನು ದೇವನಹಳ್ಳಿಯ ಸಾಯಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸುದ್ದಿ ತಿಳಿಯುತ್ತಿದ್ದಂತೆಯೇ ಮೃತರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಕಾಶಿನಾಥನ ದರ್ಶನಕ್ಕೆ ಹೋದವರು ಅರ್ಧ ಹಾದಿಯಲ್ಲೇ ಮಸಣ ಸೇರಿದ್ದು ಇಡೀ ವಿದ್ಯಾನಗರವನ್ನು ಶೋಕ ಸಾಗರದಲ್ಲಿ ಮುಳುಗಿಸಿದೆ.

<u>ಸ್ಥಳಕ್ಕೆ ವಿ. ಯೋಗೇಶ್ ಭೇಟಿ:</u> ಘಟನೆ ನಡೆದ ತಕ್ಷಣ ತಿಪಟೂರಿನ ಕೆಪಿಸಿಸಿ ಸದಸ್ಯ ವಿ. ಯೋಗೇಶ್ ಅವರು ದೇವನಹಳ್ಳಿ ಆಸ್ಪತ್ರೆಗೆ ಭೇಟಿ ನೀಡಿದರು. ಗಾಯಾಳುಗಳ ಆರೋಗ್ಯ ವಿಚಾರಿಸಿದ ಅವರು, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ ಅಗತ್ಯ ನೆರವಿನ ಭರವಸೆ ನೀಡಿದರು.

25/03/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಕೃತಕ ಬುದ್ದಿಮತ್ತೆ, ತಂತ್ರಜ್ಞಾನದ ಭ್ರಮೆಯಲ್ಲಿ ಸಂಸ್ಕಾರ, ಮೌಲ್ಯ ಮರೆಯಾಗದಿರಲಿ: ಪ್ರೊ.ರವಿ

ಕೋಲಾರ

ಕೃತಕ ಬುದ್ದಿಮತ್ತೆ ಹಾಗೂ ತಂತ್ರಜ್ಞಾನದ ಭ್ರಮೆಯಲ್ಲಿ ಯುವ ಪೀಳಿಗೆ ಕಲಿಕೆ ಸಂಸ್ಕಾರ,ನೈತಿಕ ಮೌಲ್ಯಗಳಿಂದ ದೂರವಾಗುವುದನ್ನು ತಪ್ಪಿಸಲು ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು ಅಗತ್ಯ ಮಾರ್ಗದರ್ಶನ ನೀಡಬೇಕು ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ ರವಿ ಕರೆ ನೀಡಿದರು.



ನಗರದ ಹೊರವಲಯದ ಛತ್ರಕೋಡಿಹಳ್ಳಿ ಸಮೀಪದ ಎಕ್ಸಲೆಂಟ್ ಕಾಲೇಜಿನಲ್ಲಿ ಸೋಮವಾರ ಚಾರ್ಟರ್ಡ್ ಅಕೌಂಟೆಂಟ್ ಆಗಿ ಉತ್ತೀರ್ಣರಾಗಿ ಸಾಧನೆ ಮಾಡಿರುವ ಕಾಲೇಜಿನ ಹಳೆ ವಿದ್ಯಾರ್ಥಿನಿ ಹಾಗೂ ಸಾಧಕಿ ಎ.ಸಹನ ಅವರನ್ನು ಅಭಿನಂದಿಸಿ ಅವರು ಮಾತನಾಡುತ್ತಿದ್ದರು. ಶಿಕ್ಷಣ ಸಂಸ್ಥೆ ಆರಂಭಿಸುವುದು ಅಷ್ಟು ಸುಲಭದ ಮಾತಲ್ಲ, ಇಂದು ಬದ್ದತೆ, ಕಲಿಸುವ ಹೊಣೆಗಾರಿಕೆ, ಗುಣಮಟ್ಟದ ಶಿಕ್ಷಣ ನೀಡುವ ಕೌಶಲ್ಯಭರಿತ ಶಿಕ್ಷಕ ವರ್ಗ, ಅಗತ್ಯ ಮೂಲಸೌಲಭ್ಯಗಳನ್ನು ಒಟ್ಟುಗೂಡಿಸಿಕೊಳ್ಳುವುದು ಕಷ್ಟದ ಕೆಲಸ ಇಂತಹ ಸಂದರ್ಭದಲ್ಲೂ ಎಕ್ಸಲೆಂಟ್ ಸಂಸ್ಥೆಯ ಅಧ್ಯಕ್ಷ ಬಿ.ಎಂ.ರಂಗಪ್ಪ ಅವರ ಪ್ರಯತ್ನ, ಆಧುನಿಕ ಕಲಿಕಾ ಸೌಲಭ್ಯಗಳನ್ನು ಒದಗಿಸುವಲ್ಲಿ ಕೈಗೊಂಡಿರುವ ಕ್ರಮಗಳು ಶ್ಲಾಘನೀಯ ಎಂದರು. ಮಕ್ಕಳ ಸಾಧನೆಯನ್ನು ಗುರುತಿಸಿ ಬೆನ್ನು ತಟ್ಟುವ ಕೆಲಸವು ಮುಂದಿನ ಪೀಳಿಗೆಗೆ ಹಾಗೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದಂತೆ ಎಂದ ಅವರು, ಇಂತಹ ಕಾರ್ಯಕ್ರಮಗಳಿಂದಾಗಿ ನಾವೂ ಸಾಧಕರಂತೆ ಆಗಬೇಕು ಎಂದು ನಿರ್ಧರಿಸಿ ಪ್ರಯತ್ನಿಸುವ ಮನಸ್ಥಿತಿ ಮಕ್ಕಳಲ್ಲಿ ಬೆಳೆಸಿದಂತೆ ಆಗುತ್ತದೆ ಎಂದು ಅಭಿಪ್ರಾಯಪಟ್ಟರು. ಇಂದಿನ ಯುವ ಪೀಳಿಗೆ ತಂತ್ರಜ್ಞಾನದ ಭರಾಟೆಗೆ ಸಿಕ್ಕಿ ಹಾಕಿಕೊಂಡಿದೆ, ಹಿಂದೆ ವಿಷಯ ಸಂಗ್ರಹಕ್ಕೆ ಕಷ್ಟವಿತ್ತು ಆದರೆ ಇಂದು ಎಲ್ಲಾ ಮಾಹಿತಿ ಕಣ್ಣ ಮುಂದೇಯೇ ಸಿಗುತ್ತಿದೆ, ವಿದ್ಯಾರ್ಥಿಗಳಿಗೆ ಸುಲಭವಾಗಿ ಸಿಗುತ್ತಿರುವ ಈ ತಂತ್ರಜ್ಞಾನ ಶಿಕ್ಷಕರ ಬೋಧನೆಯ ಜತೆಗೆ ಊಟಕ್ಕೆ ಉಪ್ಪಿನ ಕಾಯಿ ಇದ್ದಂತೆ ಇರಬೇಕು ಆದರೆ ಅದೇ ಭ್ರಮೆಯಲ್ಲಿ ಮುಳುಗಿದರೆ ಅಪಾಯ ಖಚಿತ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ವಡಗೂರು ರಾಮು, ಕಾಲೇಜಿನ ಖಜಾಂಚಿ ಸುಷ್ಮಿತ, ಪ್ರಾಂಶುಪಾಲ ಎಂ.ಆನಂದ್, ಉಪನ್ಯಾಸಕಿ ಕವಿತಾ, ಮಧುಶ್ರೀ, ಮಧುಕರ್, ರಮೇಶ್‌ಬಾಬು, ಮೀನಾ, ದೇವರಾಜ್ ಸೇರಿದಂತೆ ಎಲ್ಲಾ ಉಪನ್ಯಾಸಕರು ಇದ್ದರು.



ಹರಿದಾಸರ ತವರೂರು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ಸೋಮವಾರದಂದು ಶ್ರೀ ಮಹಾಲಕ್ಷ್ಮೀ ಅಮ್ಮನವರ ಪೂಜೆ ಅಲಂಕಾರ ದರ್ಶನಗೈದ ಭಕ್ತರು ಪುನೀತರಾದರು.

# ಮಾರ್ಕಂಡೇಯ ಜಲಾಶಯದ ನೀರಿಗೆ ಶುರುವಾಯ್ತು ಪೊಲಿಟಿಕಲ್ ಫೈಟ್!

● ವಿ.ಶಿವಾರೆಡ್ಡಿ
ಬಂಗಾರಪೇಟೆ

ತಾಲ್ಲೂಕಿನ ಮಿನಿ ಕೆ.ಆರ್.ಎಸ್ ಎಂದೇ ಖ್ಯಾತಿಗೊಂಡಿರುವ ಮಾರ್ಕಂಡೇಯ ಜಲಾಶಯದ ಸುತ್ತಮುತ್ತ ಈಗ ರಾಜಕೀಯ ಕಾವು ಏರಿದೆ. ಮಾಲೂರು ಶಾಸಕ ಕೆ.ವೈ. ನಂಜೇಗೌಡ ಹಾಗೂ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರ ನಡುವಿನ 'ಜಲ ಯುದ್ಧ' ಸ್ಥಳೀಯ ರೈತರ ನಿದ್ದೆಗೆಡಿಸಿದೆ.



ಏಕಪಕ್ಷೀಯ ಹೇಳಿಕೆ: ಶಾಸಕರ ನಡುವೆ ಅಸಮಾಧಾನ: ಇತ್ತೀಚೆಗೆ ಜಲಾಶಯಕ್ಕೆ ಭೇಟಿ ನೀಡಿದ್ದ ಮಾಲೂರು ಶಾಸಕ ಕೆ.ವೈ. ನಂಜೇಗೌಡ, "ಮಾಲೂರಿಗೆ ನೀರು ಹರಿಸುವ ಬಗ್ಗೆ ಪರಿಶೀಲನೆ ನಡೆಸಲಾಗುವುದು" ಎಂಬ ಹೇಳಿಕೆ ನೀಡಿದ್ದರು. ಇದು ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. "ಮಾಲೂರಿಗೆ ನೀರು ಹರಿಸುವ ಪ್ರಶ್ನೆಯೇ ಇಲ್ಲ" ಎಂದು ನಾರಾಯಣಸ್ವಾಮಿ ಅವರು ಖಡಕ್ ಆಗಿ ಉತ್ತರಿಸಿರುವುದು ಈಗ ರಾಜಕೀಯ ಕುತೂಹಲ ಕೆರಳಿಸಿದೆ. ಸ್ಥಳೀಯ ಶಾಸಕರ ಗಮನಕ್ಕೆ ತರದೆ ಈ ರೀತಿ ಹೇಳಿಕೆ ನೀಡುವುದು 'ನೀರಿನ ರಾಜಕೀಯ' ಮಾಡುವ ಪ್ರಯತ್ನ ಎಂದು ಸಾರ್ವಜನಿಕ ವಲಯದಲ್ಲಿ ಟೀಕೆ ಕೇಳಿಬರುತ್ತಿದೆ.

ಹೂವು-ತರಕಾರಿ ಬೆಳೆಗಾರರ ಭವಿಷ್ಯಕ್ಕೆ ಕುತ್ತು?

ಮಾರ್ಕಂಡೇಯ ಜಲಾಶಯವು ಬೂದಿಕೋಟೆ ಭಾಗದ ಸಾವಿರಾರು ರೈತ ಕುಟುಂಬಗಳ ದೈನಂದಿನ ಆದಾಯದ ಮೂಲವಾಗಿದೆ. ನೀರಿನ ಸಮಸ್ಯೆಯಿಂದಾಗಿ ಈಗಾಗಲೇ ಭತ್ತದ ಬೆಳೆಯನ್ನು ಕೈಬಿಟ್ಟಿರುವ ರೈತರು, ಈಗ ಪ್ರತಿದಿನ ಆದಾಯ ನೀಡುವ ಹೂವು ಮತ್ತು ವಾಣಿಜ್ಯ ತರಕಾರಿ ಬೆಳೆಗಳತ್ತ ಮುಖ ಮಾಡಿದ್ದಾರೆ. ಡ್ರಿಪ್ ಇರಿಗೇಷನ್ ಮೂಲಕ ಹನಿ ಹನಿ ನೀರನ್ನು ಉಳಿಸಿ ಬೆಳೆ ಬೆಳೆಯುತ್ತಿರುವ ರೈತರಿಗೆ, ಜಲಾಶಯದ ನೀರು ಮಾಲೂರಿಗೆ ಹರಿದರೆ ತಮ್ಮ ಬದುಕು ಬೀದಿಗೆ ಬರಲಿದೆ ಎಂಬ ಭೀತಿ ಎದುರಾಗಿದೆ.

ಯರಗೋಳ್ ಡ್ಯಾಂ ಭರ್ತಿಗೂ ಸಂಕಷ್ಟ: ತಾಂತ್ರಿಕವಾಗಿ ಮಾರ್ಕಂಡೇಯ ಜಲಾಶಯವು ಕೋಡಿ ಹರಿದರೆ ಮಾತ್ರ ನೀರು ಯರಗೋಳ್ ಡ್ಯಾಂ ಸೇರುತ್ತದೆ. ಒಂದು ವೇಳೆ ಜಲಾಶಯದ ನೀರನ್ನು ನೇರವಾಗಿ ಮಾಲೂರಿಗೆ ಹರಿಸಿದರೆ, ಬಂಗಾರಪೇಟೆ, ಕೋಲಾರ, ಮಾಲೂರು ಮತ್ತು ಕೆಜಿಎಫ್ ನಾಲ್ಕು ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸುವ ಯರಗೋಳ್ ಡ್ಯಾಂ ಭರ್ತಿಯಾಗುವುದು ಕಷ್ಟವಾಗುತ್ತದೆ.



ಈಗಾಗಲೇ ಯರಗೋಳ್ ನೀರು ಮಾಲೂರಿಗೆ ಸರಬರಾಜಾಗುತ್ತಿರುವಾಗ, ಮತ್ತೆ ಜಲಾಶಯದ ನೀರನ್ನು ಕೇಳುವುದು ಎಷ್ಟು ಸರಿ ಎಂಬುದು ತಜ್ಞರ ವಾದವಾಗಿದೆ.

ಸುಮಾರು 0.3 ರಿಂದ 0.5 ಟಿಎಂಸಿ ಸಾಮರ್ಥ್ಯದ ಈ ಸಣ್ಣ ನೀರಾವರಿ ಜಲಾಶಯದಲ್ಲಿ ಪ್ರಸ್ತುತ ನೀರಿನ ಮಟ್ಟ ಶೇ. 20 ರಿಂದ 50ರ ಆಸುಪಾಸಿನಲ್ಲಿದೆ. ಬೇಸಿಗೆ ಆರಂಭದಲ್ಲೇ ಇಷ್ಟು ಕಡಿಮೆ ನೀರಿರುವಾಗ, ಹೊರ ತಾಲ್ಲೂಕಿಗೆ ನೀರು ಹರಿಸುವುದು ಆತ್ಮಹತ್ಯಾಕಾರಿ ನಿರ್ಧಾರ ಎಂದು ಸ್ಥಳೀಯ ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## 27ರಂದು ಶ್ರೀ ಪಂಚಮುಖಿ ಪ್ರಾಣದೇವರ ಮಹಾ ರಥೋತ್ಸವ



ಮಂತ್ರಾಲಯ

ಮಂತ್ರಾಲಯದ ಗುರುಸಾರ್ವಭೌಮ ಶ್ರೀ ರಾಘವೇಂದ್ರ ತೀರ್ಥರು ತಪಸ್ಸುಗೈದ ಪವಿತ್ರ ಕ್ಷೇತ್ರವಾದ ಗಾಣದಾಳದಲ್ಲಿ ಇದೇ 27ರಂದು ಶ್ರೀ ಪಂಚಮುಖಿ ಪ್ರಾಣದೇವರ ಜಾತ್ರೆ ಹಾಗೂ ಮಹಾ ರಥೋತ್ಸವ ಅತ್ಯಂತ ಸಡಗರ ಸಂಭ್ರಮದಿಂದ ಜರುಗಲಿದೆ.

ರಾಘವೇಂದ್ರ ಸ್ವಾಮಿಗಳು ಮಂತ್ರಾಲಯದಲ್ಲಿ ಸಶರೀರ ಬೃಂದಾವನಸ್ಥರಾಗುವ ಮುನ್ನ ಗಾಣದಾಳದ ಪಂಚಮುಖಿ ಬೆಟ್ಟದಲ್ಲಿ ಸುದೀರ್ಘ ಕಾಲ ತಪಸ್ಸು ಮಾಡಿದ್ದರು ಎಂಬ ಐತಿಹಾಸಿಕ ಹಿನ್ನೆಲೆ ಈ ಕ್ಷೇತ್ರಕ್ಕಿದೆ. ಹೀಗಾಗಿ, ಈ ಜಾತ್ರೋತ್ಸವಕ್ಕೆ ವಿಶೇಷ ಧಾರ್ಮಿಕ ಮಹತ್ವವಿದೆ.

ಶ್ರೀ ಸುಬುಧೇಂದ್ರ ತೀರ್ಥರ ಸಾನ್ನಿಧ್ಯ: ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ಈ ಬಾರಿಯ ಉತ್ಸವಗಳು ನೆರವೇರಲಿವೆ. ಅಂದು ಬೆಳಿಗ್ಗೆಯಿಂದ ಸಂಜೆಯವರೆಗೂ ಶ್ರೀ ಪಂಚಮುಖಿ ಪ್ರಾಣದೇವರಿಗೆ ವಿಶೇಷ ಅಭಿಷೇಕ, ಅಲಂಕಾರ, ಹಣ್ಣು-ಕಾಯಿ ಸೇವೆ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಲಕ್ಷಾಂತರ ಭಕ್ತರ ಆಗಮನ ನಿರೀಕ್ಷೆ: ಈ ಮಹಾ ರಥೋತ್ಸವಕ್ಕೆ ಕರ್ನಾಟಕ ಮಾತ್ರವಲ್ಲದೆ ನೆರೆಯ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಂದಲೂ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಭಕ್ತಾದಿಗಳಿಗೆ ಕುಡಿಯುವ ನೀರು, ಪ್ರಸಾದ ವಿನಿಯೋಗ ಹಾಗೂ ವಾಹನ ನಿಲುಗಡೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

# ಎಲ್‌ಪಿಜಿ ಸಿಲಿಂಡರ್ ಪೂರೈಸಲು ಮನವಿ

ಬಳ್ಳಾರಿ

ನಗರವೂ ಸೇರಿದಂತೆ ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲೆಂಡರ್ ಕೊರತೆ ಉಂಟಾಗಿದ್ದು, ಗ್ರಾಹಕರಿಗೆ ಸಕಾಲಕ್ಕೆ ಪೂರೈಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕೆಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಾಗೂ ಹೋಟೆಲ್ ಅಸೋಸಿಯೇಷನ್ ಮನವಿ ಮಾಡಿದೆ.



ಹೋಟೆಲ್ ಉದ್ಯಮವು ಎದುರಿಸುತ್ತಿರುವ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಗಂಭೀರ ಸಮಸ್ಯೆಯನ್ನು ಪರಿಹರಿಸಲು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲಾ ಹೋಟಲ್ ಮತ್ತು ಬೇಕರಿ ಮಾಲೀಕರ ಅಸೋಸಿಯೇಷನ್ ಜಿಲ್ಲಾಡಳಿತಕ್ಕೆ ಸೋಮವಾರ ಮನವಿ ಸಲ್ಲಿಸಿದೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷರಾದ ವಿಕ್ರಂ ಪೋಲ ಅವರ ತಂಡವು ಅಪರ ಜಿಲ್ಲಾಧಿಕಾರಿಗಳಾದ ಎನ್. ಮೊಹಮ್ಮದ್ ಜುಬೈರ್ ಅವರನ್ನು ಭೇಟಿ ಮಾಡಿ, ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಹೆಚ್ಚಿನ ಸಿಲೆಂಡರ್‌ಗಳನ್ನು ಪೂರೈಸಬೇಕು ಎಂದು ಮನವಿ ಮಾಡಿದರು.

ಮಧ್ಯಪ್ರಾಚ್ಯ ದೇಶಗಳಲ್ಲಿಯ ಯುದ್ಧದ ವಾತಾವರಣದ ಕಾರಣ ಎಲ್‌ಪಿಜಿ ಸಿಲೆಂಡರಗಳ ಪೂರೈಕೆಯಲ್ಲಿ ಹೋಟಲ್ ಮತ್ತು ಬೇಕರಿ ಉದ್ಯಮಕ್ಕೆ ಧಕ್ಕೆ ಆಗುತ್ತಿದೆ. ಈ ಉದ್ಯಮದಲ್ಲಿಯ ಉದ್ಯೋಗಿಗಳ ಬದುಕಿಗೆ ಕುತ್ತು ಬೀಳುತ್ತಿದೆ. ಕಾರಣ ಸರ್ಕಾರ ಸಿಲೆಂಡರ್‌ಗಳ ಪೂರೈಕೆಯಲ್ಲಿ ವಿಶೇಷ ಕ್ರಮ ವಹಿಸಬೇಕೆಂದು ಕೋರಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನಗೌಡ ಮರ್ಚೇಡ್ ಸೇರಿದಂತೆ ಹೋಟೆಲ್ ಮತ್ತು ಬೇಕರಿ ಅಸೋಸಿಯೇಷನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಜುಬೈರ್. ಎನ್ ಅವರು, ಸಮಸ್ಯೆ ಪರಿಹಾರಕ್ಕೆ ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು.



ಬೆಂಗಳೂರಿನ ಶ್ರೀಮದುತ್ತರಾದಿ ಮಠದಲ್ಲಿ ಸೋಮವಾರದಂದು ಶ್ರೀ ದಿಗ್ವಿಜಯ ಲಕ್ಷ್ಮಿ ನರಸಿಂಹ ದೇವರ ಪೂಜೆ ಅಲಂಕಾರ ದರ್ಶನ ಭಕ್ತರ ಗಮನ ಸೆಳೆಯಿತು.

# ವಿಜ್ಞಾನ ವಿಷಯಕ್ಕೆ 355 ಮಂದಿ ವಿದ್ಯಾರ್ಥಿಗಳು ಗೈರು: ಡಿಡಿಪಿಐ

ಕೋಲಾರ

ಜಿಲ್ಲೆಯ 65 ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಪರೀಕ್ಷೆ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಅತ್ಯಂತ ಯಶಸ್ವಿಯಾಗಿ ನಡೆದಿದ್ದು 224 ವಿದ್ಯಾರ್ಥಿಗಳು ಗೈರಾಗಿದ್ದಾರೆ ಮತ್ತು ಶೇ.98.83 ಹಾಜರಿ ಇತ್ತು ಎಂದು ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್ ತಿಳಿಸಿದರು.



ಪರೀಕ್ಷೆ ಮುಗಿದ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ವಿಜ್ಞಾನ ಪರೀಕ್ಷೆಗೆ ಹೆಸರು ನೊಂದಾಯಿಸಿದ್ದ 19121 ಹೊಸ ವಿದ್ಯಾರ್ಥಿಗಳ ಪೈಕಿ 18897 ಮಂದಿ ಹಾಜರಾಗಿದ್ದು, 224 ಮಂದಿ ಗೈರಾಗಿದ್ದರು. ಪರೀಕ್ಷೆ ಯಾವುದೇ ಗೊಂದಲಗಳಿಲ್ಲದೇ ಸುಗಮವಾಗಿ ನಡೆದಿದೆ ಎಂದು ತಿಳಿಸಿದರು.

ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ನಡೆಯುತ್ತಿರುವ 3ನೇ ವರ್ಷದ ಹಾಗೂ ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1 ರ ಎರಡನೇ ದಿನದ ಪರೀಕ್ಷೆ ಇದಾಗಿದ್ದು, ಜಿಲ್ಲೆಯ ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಸಿಸಿ ಕ್ಯಾಮಾರ ಸುಸ್ಥಿತಿಯಲ್ಲಿಡಲಾಗಿದ್ದು, ಪರೀಕ್ಷಾ ಅವಧಿಯಲ್ಲಿ ವೆಬ್ ಕಾಸ್ಟಿಂಗ್ ಮೂಲಕ ಅಧಿಕಾರಿಗಳು ವೀಕ್ಷಿಸುತ್ತಿದ್ದು, ಯಾವುದೇ ಲೋಪ ಕಂಡು ಬರಲಿಲ್ಲ ಎಂದರು.

ತಾಲ್ಲೂಕುವಾರು ಹಾಜರಿ ವಿವರ:

ಬಂಗಾರಪೇಟೆ ತಾಲ್ಲೂಕಿನ 8 ಕೇಂದ್ರಗಳಲ್ಲಿ ವಿಜ್ಞಾನ ವಿಷಯಕ್ಕೆ 2545 ಮಂದಿ ನೊಂದಾಯಿಸಿದ್ದು, 2523 ಮಂದಿ ಹಾಜರಾಗಿ 22 ಮಂದಿ ಗೈರಾಗಿದ್ದಾರೆ, ಕೆಜಿಎಫ್ ತಾಲ್ಲೂಕಿನ 9 ಕೇಂದ್ರಗಳಲ್ಲಿ 3314 ಮಕ್ಕಳು ಹೆಸರು ನೊಂದಾಯಿಸಿದ್ದು, 3275 ಮಂದಿ ಹಾಜರಾಗಿ 39 ಮಂದಿ ಗೈರಾಗಿದ್ದಾರೆ.

ಕೋಲಾರ ತಾಲ್ಲೂಕಿನ 18 ಕೇಂದ್ರಗಳಲ್ಲಿ 4830 ಮಂದಿ ಹೆಸರು ನೊಂದಾಯಿಸಿದ್ದು, 4783 ಮಂದಿ ಹಾಜರಾಗಿ 47 ಮಂದಿ ಗೈರಾಗಿದ್ದಾರೆ. ಮಾಲೂರು ತಾಲ್ಲೂಕಿನ 8 ಕೇಂದ್ರಗಳಲ್ಲಿ 3005 ಮಂದಿ ಹೆಸರು ನೊಂದಾಯಿಸಿದ್ದು, 2968 ಮಂದಿ ಹಾಜರಾಗಿದ್ದು, 37 ಮಂದಿ ಗೈರಾಗಿದ್ದಾರೆ.

ಮುಳಬಾಗಿಲು ತಾಲ್ಲೂಕಿನ 12 ಕೇಂದ್ರಗಳಲ್ಲಿ 2868 ಮಂದಿ ನೊಂದಾಯಿಸಿದ್ದು, 2811 ಮಂದಿ ಹಾಜರಾಗಿದ್ದು, 57 ಮಂದಿ ಗೈರಾಗಿದ್ದಾರೆ, ಶ್ರೀನಿವಾಸಪುರ ತಾಲ್ಲೂಕಿನ 10 ಕೇಂದ್ರಗಳಲ್ಲಿ 2559 ಮಂದಿ ಹೆಸರು ನೊಂದಾಯಿಸಿದ್ದು, 2537 ಮಂದಿ ಹಾಜರಾಗಿದ್ದು, 22 ಮಂದಿ ಗೈರಾಗಿದ್ದಾರೆ.

ಎರಡನೇ ದಿನದ ಪರೀಕ್ಷೆಯಲ್ಲಿ ಜಿಲ್ಲಾದ್ಯಂತ ಯಾವುದೇ ಕೇಂದ್ರದಲ್ಲಿ ಯಾವುದೇ ಅವ್ಯವಹಾರಗಳು ನಡೆದ ಬಗ್ಗೆ ವರದಿಯಾಗಿಲ್ಲ, ಪರೀಕ್ಷೆ ಸುಗಮವಾಗಿ ನಡೆಸುವಲ್ಲಿ ಜಿಲ್ಲಾಧಿಕಾರಿಗಳು,ಜಿಪಂ ಸಿಇಒ, ಎಸ್ಪಿ ಅವರ ಮಾರ್ಗದರ್ಶನದಲ್ಲಿ ಜಿಲ್ಲಾಡಳಿತ, ಶಿಕ್ಷಣ ಇಲಾಖೆ, ಶಿಕ್ಷಕರು,ಪೋಷಕರು, ವಿದ್ಯಾರ್ಥಿಗಳು ಸಹಕಾರ ನೀಡಿದ್ದಾರೆ ಎಂದರು.

ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ನಿರ್ದೇಶಕ ಎಂ.ಆರ್.ಮಾರುತಿ, ಡಿಡಿಪಿಐ ಅಲ್ಮಾಸ್ ಫರ್ವೀನ್ ತಾಜ್, ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಶಂಕರೇಗೌಡ, ಶಿಕ್ಷಣಾಧಿಕಾರಿ ಡಾ.ವೀಣಾ, ಡಿವೈಪಿಸಿಗಳಾದ ರಾಜೇಶ್ವರಿ, ಸೈಹಿದಾ ನಾಹಿದಾ ಫಾತಿಮಾ, ಬಿಇಒಗಳಾದ ಮಧುಮಾಲತಿ ಪಡುವಣೆ, ವಿವಿಧ ತಾಲ್ಲೂಕುಗಳ ಬಿಇಒಗಳಾದ ಶಶಿಕಲಾ, ನಾರಾಯಣಸ್ವಾಮಿ, ಕೆಂಪಯ್ಯ, ರಾಮಚಂದ್ರ, ಮುನಿಲಕ್ಷ್ಮಯ್ಯ, ಎವೈಪಿಸಿ ಗಾಯತ್ರಿ, ವಿಷಯ ಪರಿವೀಕ್ಷಕರಾದ ಸಮೀವುಲ್ಲಾ, ಕ್ರಿಸ್ಟಿನಾಬಬಿತಾ, ಮತ್ತಿತರರು ವಿವಿಧ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನಗರದ ಅಂಜುಮಾನ್ ಶಾಲೆ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರಾಗಿ ವೇಣುಗೋಪಾಲ್, ಪ್ರಶ್ನೆಪತ್ರಿಕಾ ಪಾಲಕರಾಗಿ ಮಂಜುಳಾ, ಸ್ಥಾನಿಕ ಜಾಗೃತದಳವಾಗಿ ಗೋಪಾಲ್ ಕಾರ್ಯನಿರ್ವಹಿಸಿದರು.



ಕನ್ನಡ ನಾಡಿನ ಪ್ರಸಿದ್ಧ ಪುಣ್ಯಕ್ಷೇತ್ರವಾದ ಉಡುಪಿಯಲ್ಲಿ ಸೋಮವಾರ ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣದ ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷದ ಇದೇ 23ರಂದು ಶ್ರೀ ಕೃಷ್ಣನಿಗೆ ವಿಶೇಷ ಮುತ್ತು ಕೃಷ್ಣ ಅಲಂಕಾರ ಮಾಡಲಾಗಿತ್ತು.

# ರೈತ- ನೇಕಾರರು ದೇಶದ ಎರಡು ಕಣ್ಣುಗಳಿದ್ದಂತೆ: ಶಾಸಕ ಜಿ.ಬಿ. ಜ್ಯೋತಿಗಣೇಶ್

ತುಮಕೂರು

"ರೈತರು ಮತ್ತು ನೇಕಾರರು ಈ ದೇಶದ ಅಭಿವೃದ್ಧಿಯ ಎರಡು ಕಣ್ಣುಗಳಿದ್ದಂತೆ. ನೇಕಾರ ಸಮುದಾಯದ ಸರ್ವತೋಮುಖ ಏಳಿಗೆಗೆ ಸರ್ಕಾರ ಮತ್ತು ವೈಯಕ್ತಿಕವಾಗಿ ನಾನು ಎಲ್ಲಾ ರೀತಿಯ ನೆರವು ನೀಡಲು ಬದ್ಧನಾಗಿದ್ದೇನೆ," ಎಂದು ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್ ತಿಳಿಸಿದರು.

ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ನೇಕಾರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ 'ಶ್ರೀ ದೇವರ ದಾಸಿಮಯ್ಯ ಜಯಂತಿ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ನೇಕಾರರ ಸಂಘಗಳಿಗೆ ಹೆಚ್ಚಿನ ಅನುದಾನ: ನೇಕಾರ ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸಿದ ಶಾಸಕರು, "ನಗರದಲ್ಲಿರುವ ವಿವಿಧ ನೇಕಾರ ಸಂಘಗಳ ಹಾಸ್ಟೆಲ್, ದೇವಾಲಯ ಹಾಗೂ ಸಮುದಾಯ ಭವನಗಳಿಗೆ ಈಗಾಗಲೇ ಅನುದಾನ ನೀಡಲಾಗಿದೆ. ಇನ್ನೂ ಕೆಲವು ಕಾಮಗಾರಿಗಳಿಗೆ ಅನುದಾನದ ಬೇಡಿಕೆ ಬಂದಿದ್ದು, ಅವುಗಳನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು. ಎಲ್ಲರೂ ಒಗ್ಗೂಡಿ ಸಮಾಜದ ಹಿತಕ್ಕಾಗಿ ಶ್ರಮಿಸುವುದೇ ನಾವು ಮಹನೀಯರಿಗೆ ನೀಡುವ ನಿಜವಾದ ಗೌರವ," ಎಂದರು.

ದಾಸಿಮಯ್ಯ ವೃತ್ತಕ್ಕೆ ಬೇಡಿಕೆ: ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಧನಿಯಕುಮಾರ್ ಮಾತನಾಡಿ, "ನಮ್ಮ ಸಮುದಾಯ ದೇಶದ ಧ್ವಜವನ್ನು ಸಿದ್ಧಪಡಿಸಿದ ಇತಿಹಾಸ ಹೊಂದಿದೆ. ತುಮಕೂರಿನ ಯಾವುದಾದರೂ ಒಂದು ಪ್ರಮುಖ ವೃತ್ತಕ್ಕೆ 'ದೇವರ ದಾಸಿಮಯ್ಯ ವೃತ್ತ' ಎಂದು ನಾಮಕರಣ ಮಾಡಬೇಕು. ಅಲ್ಲದೆ, ಬಡವರ ಶುಭ ಕಾರ್ಯಗಳಿಗೆ ಅನುಕೂಲವಾಗುವಂತೆ ಸಮುದಾಯ ಭವನ ನಿರ್ಮಿಸಬೇಕು," ಎಂದು ಒತ್ತಾಯಿಸಿದರು. ತಹಶೀಲ್ದಾರ್ ರಾಜೇಶ್ವರಿ ಅವರು ಮಾತನಾಡಿ, ನೇಕಾರರು ಶ್ರಮಜೀವಿಗಳಾಗಿದ್ದು, ಮಾನವ ಸಂಘಜೀವಿಯಾಗಿ ಬದುಕಲು ಈ ಸಮುದಾಯದ ಕೊಡುಗೆ ಅಪಾರ ಎಂದರು.

ವಚನಗಳ ಮೂಲಕ ಸಮಾಜ ಸುಧಾರಣೆ: ಕಸಾಪ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ ಮಾತನಾಡಿ, 12ನೇ ಶತಮಾನದ ಶರಣ ಚಳವಳಿಯಲ್ಲಿ ದಾಸಿಮಯ್ಯನವರ ಪಾತ್ರ ಹಿರಿದು. ಅವರ ವಚನಗಳು ಇಂದಿಗೂ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಶಕ್ತಿ ಹೊಂದಿವೆ ಎಂದರು. ನಿವೃತ್ತ ಉಪನ್ಯಾಸಕ ಆರ್. ಮಲ್ಲಿಕಾರ್ಜುನಯ್ಯ ಅವರು ದಾಸಿಮಯ್ಯನವರ ಜೀವನ ಮತ್ತು ಸಾಧನೆಯ ಕುರಿತು ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಸಮುದಾಯದ ಹಿತಕ್ಕಾಗಿ ಶ್ರಮಿಸಿದ ಐವರು ಗಣ್ಯರನ್ನು ಜಿಲ್ಲಾಡಳಿತದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಈಶ್ವರ್ ಕು ಮಿರ್ಜಿ ಸೇರಿದಂತೆ ವಿವಿಧ ನೇಕಾರ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy